
ಕರ್ನಾಟಕ ನಾಟಕ ಅಕಾಡೆಮಿ

ಬೀದರ

# ಜಿಲ್ಲಾ ರಂಗಮಾಹಿತಿ

- ಚಂದ್ರಗುಪ್ತ ಚಾಂದಕವಟೆ





# ಬೀದರ

## ಜಿಲ್ಲಾ ರಂಗ ಮಾಹಿತಿ

ಚಂದ್ರಗುಪ್ತ ಚಾಂದಕವಠೆ

ಕರ್ನಾಟಕ ನಾಟಕ ಅಕಾಡೆಮಿ
ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು - ೫೬೦ ೦೦೨

**BIDAR JILLA RANGA MAHITI** by **Chandragupta ChandaKavathe**, Published by **Mr. B. Manjunatha Aradhya**, Registrar, Karnataka Nataka Academy, Kannada Bhavana, J.C. Road, Bengaluru - 560 002. Phone: 080-22237484

ಹಕ್ಕುಗಳು : ಕರ್ನಾಟಕ ನಾಟಕ ಅಕಾಡೆಮಿ
ಮೊದಲ ಮುದ್ರಣ : ೨೦೧೬
ಪ್ರತಿಗಳು : ೧೦೦೦
ಪುಟಗಳು : x + ೧೧೪ = ೧೨೪
ಬೆಲೆ : ರೂ. ೬೦/-

**ಪ್ರಕಾಶಕರು**
**ಬಿ. ಮಂಜುನಾಥ ಆರಾಧ್ಯ**, ರಿಜಿಸ್ಟ್ರಾರ್
ಕರ್ನಾಟಕ ನಾಟಕ ಅಕಾಡೆಮಿ
ಕನ್ನಡಭವನ, ಜೆ.ಸಿ.ರಸ್ತೆ
ಬೆಂಗಳೂರು - ೫೬೦ ೦೦೨
ದೂರವಾಣಿ: ೦೮೦-೨೨೨೩೭೪೮೪

ರಕ್ಷಾಪುಟ ವಿನ್ಯಾಸ:
**ಕೃಷ್ಣ ರಾಯಚೂರು**

ಮುದ್ರಕರು:
**ಕ್ಲೌಡ್ ನೈನ್ ಏಜೆನ್ಸೀಸ್**
ಸುಧಾಮನಗರ, ಬೆಂಗಳೂರು
ಮೊ: ೯೯೦೧೯೧೬೫೮೧

# ಅಧ್ಯಕ್ಷರ ನುಡಿ

ಕರ್ನಾಟಕ ನಾಟಕ ಅಕಾಡೆಮಿ ಮೂರು ವರ್ಷದ ನಮ್ಮ ಅವಧಿಯ ಮುಕ್ತಾಯದ ಹಂತಕ್ಕೆ ಬಂದಿದ್ದೇವೆ. ಜಿಲ್ಲೆಗಳಲ್ಲಿ ನಾಟಕೋತ್ಸವ, ಹವ್ಯಾಸಿ ರಂಗ ತಂಡಗಳಿಗೆ ಶಿಬಿರ, ರಸಗ್ರಹಣ, ನಾಟಕ ಕಂಪನಿಗಳಿಗೆ ಹೊಸ ನಾಟಕ ಬರೆಸುವ ಯೋಜನೆ, ಪೌರಾಣಿಕ ರಂಗೋತ್ಸವ, ತಿಂಗಳ ನಾಟಕ, ರಂಗಗೀತೆ ಪ್ರಾತ್ಯಕ್ಷಿಕೆ, ಬಾಗಲಕೋಟೆ ಜಿಲ್ಲೆ ಇಳಕಲ್‌ನಲ್ಲಿ 30 ದಿನಗಳ ವೃತ್ತಿ ರಂಗಭೂಮಿ ತರಬೇತಿ ಶಿಬಿರ, ಮುಂಬಯಿ, ದೆಹಲಿ ಹಾಗೂ ಕೇರಳದ ತ್ರಿಶೂರಿನಲ್ಲಿ ಹೊರರಾಜ್ಯ ನಾಟಕೋತ್ಸವ, ಕಾಸರಗೋಡಿನಲ್ಲಿ ಗಡಿನಾಡು ಬಹುಭಾಷಾ ನಾಟಕೋತ್ಸವ ಮತ್ತು ಮೈಂದರ್ಗಿಯಲ್ಲಿ ಗಡಿನಾಡ ನಾಟಕೋತ್ಸವ ಮುಂತಾದ ಹತ್ತು ಹಲವು ವಿನೂತನ ಕಾರ್ಯಕ್ರಮಗಳನ್ನು ಕಳೆದ ಮೂರು ವರ್ಷಕಾಲ ಹಮ್ಮಿಕೊಂಡಿದ್ದೆವು.

ವಿಜಯಪುರದಲ್ಲಿ 2015 ಸೆ.24 ರಿಂದ 30 ರ ವರೆಗೆ ನಡೆದರಾಜ್ಯ ವೃತ್ತಿರಂಗ ಸಮ್ಮೇಳನದಲ್ಲಿ ಎಲ್ಲ ಕಂಪನಿಗಳ ಕಲಾವಿದರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಐದು ದಿನಗಳ ಕಾಲ ಹತ್ತು ನಾಟಕ ಕಂಪನಿಗಳಿಗೆ ಏರ್ಪಡಿಸಿದ್ದ ನಾಟಕ ಸ್ಪರ್ಧೆರಂಗ ಇತಿಹಾಸದಲ್ಲಿ ಅಪರೂಪದ್ದಾಗಿತ್ತು. ಹಿರಿಯ ಕವಿಗಳಾದ ಬಿ.ಆರ್. ಅರಿಷಿಣಗೋಡಿ ಅವರಿಗೆ ಇಳಕಲ್‌ನಲ್ಲಿ, ಎಲ್.ಬಿ.ಕೆ. ಆಲ್ದಾಳ ಅವರಿಗೆ ಕಲಬುರಗಿಯಲ್ಲಿ, ಹಿರಿಯ ನಟ ಕಂಚಿಕೇರಿ ಶಿವಣ್ಣ ಅವರಿಗೆ ದಾವಣಗೆರೆಯಲ್ಲಿ ಏರ್ಪಡಿಸಿದ್ದ ಅಭಿನಂದನೆ, ವಿಚಾರ ಸಂಕಿರಣ, ಪುಸ್ತಕ ಬಿಡುಗಡೆ ವಿಶೇಷವಾಗಿತ್ತು.

ಹಾವೇರಿಜಿಲ್ಲೆಯ ಶೇಷಗಿರಿಯಲ್ಲಿ 21 ದಿನಗಳ ಕಾಲ ರಂಗ ನೇಪಥ್ಯ ಶಿಬಿರ, ರಾಮನಗರದ ಜಾನಪದ ಲೋಕದಲ್ಲಿ ನಡೆದ ಐದು ದಿನಗಳ ನಾಟಕರಚನಾ ಶಿಬಿರ, ಶಿರಸಿಯಲ್ಲಿ ನಡೆದರಂಗವಿಮರ್ಶಾಕಮ್ಮಟ, ದೆಹಲಿಯಲ್ಲಿ ನಡೆದ ವೃತ್ತಿ ಕಂಪನಿ ನಾಟಕೋತ್ಸವ ಹಾಗೂ ಬೆಂಗಳೂರಿನ ರವೀಂದ್ರಕಲಾಕ್ಷೇತ್ರದಲ್ಲಿ ಏಳು ದಿನಗಳ ಕಾಲ ನಡೆದ ವೃತ್ತಿರಂಗಭೂಮಿ ಕಂಪನಿ ನಾಟಕೋತ್ಸವ ಕೆಲವು ಮೈಲುಗಲ್ಲುಗಳು. ವಿಶೇಷ ಘಟಕ ಯೋಜನೆಯಡಿ 30 ಜಿಲ್ಲೆಗಳಲ್ಲಿ ರಂಗಶಿಬಿರ, ನಾಟಕ ಪ್ರದರ್ಶನ ಏರ್ಪಡಿಸಿದ್ದೇವೆ. ವಿಶೇಷ ಘಟಕಯೋಜನೆಯಡಿ ಐದು ಕಲಾವಿದರ ಮತ್ತು ಗಿರಿಜನ ಯೋಜನೆಯಲ್ಲಿ ಇಬ್ಬರು ಕಲಾವಿದರ ಸಾಕ್ಷ್ಯಚಿತ್ರ ನಿರ್ಮಾಣ ಮಾಡಲಾಗಿದೆ. 12 ವೃತ್ತಿ ನಾಟಕ ಕಂಪನಿಗಳ ಸಾಕ್ಷ್ಯಚಿತ್ರ ನಿರ್ಮಿಸಲಾಗುತ್ತಿದೆ. ಫೆಲೋಶಿಪ್ ಯೋಜನೆ ಮುಂದುವರಿದಿದೆ. ಸರಿಸುಮಾರು

20 ವರ್ಷಗಳಿಂದ ಸ್ಥಗಿತಗೊಂಡಿದ್ದ ಕರ್ನಾಟಕ ನಾಟಕ ಅಕಾಡೆಮಿಯ ಮುಖವಾಣಿ 'ಸಂವಾದ' ಪತ್ರಿಕೆಯನ್ನು ಪುನರಾರಂಭಿಸಿದ್ದೇವೆ. ನಾಟಕ ರಚನಾ ಶಿಬಿರದಲ್ಲಿ ಆಯ್ಕೆಯಾದ ಏಳು ನಾಟಕಗಳ ಸಂಕಲನವನ್ನು ಹೊರತರಲಾಗುವುದು. ಕರ್ನಾಟಕ ನಾಟಕ ಅಕಾಡೆಮಿಯು ಇದೇ ಪ್ರಥಮ ಬಾರಿಗೆ ರಾಜ್ಯಮಟ್ಟದ ಹವ್ಯಾಸಿ ರಂಗಭೂಮಿ ಸಮಾವೇಶವನ್ನು ಐದು ದಿನಗಳ ಕಾಲ ಧಾರವಾಡದಲ್ಲಿ ಏರ್ಪಡಿಸಿತ್ತು.

ಪುಸ್ತಕಗಳ ಪ್ರಕಟನೆ ನಾಟಕ ಅಕಾಡೆಮಿಯ ಮಹಾತ್ವಾಕಾಂಕ್ಷೆಯ ಯೋಜನೆ. ಮೊದಲ ಸರ್ವ ಸದಸ್ಯರ ಸಭೆಯಲ್ಲಿ ಪ್ರಕಟಣಾ ಸಮಿತಿ ರಚಿಸಿ ಕಾರ್ಯಪ್ರವೃತ್ತರಾಗಿದ್ದೆವು. ಪ್ರಥಮ ಹಂತದಲ್ಲಿ ಜಿಲ್ಲಾ ರಂಗಮಾಹಿತಿ ಮಾಲಿಕೆ ಮತ್ತು ರಂಗಸಂಪನ್ನರು ಮಾಲಿಕೆಯ 18 ಪುಸ್ತಕಗಳು ಬಿಡುಗಡೆಯಾಗಿವೆ. ಎರಡನೇ ಹಂತದಲ್ಲಿ 15 ಪುಸ್ತಕಗಳು ಬಿಡುಗಡೆಯಾಗುತ್ತಿವೆ. ಶತಮಾನದ ಶಕಪುರುಷ ಏಣಗಿ ಬಾಳಪ್ಪ, ರಂಗಭೂಮಿ ಮತ್ತು ಮಹಿಳೆ ಪುಸ್ತಕಗಳನ್ನು ಹೊರತರಲಾಗಿದೆ. 1959 ರಿಂದ 2016 ರ ವರೆಗಿನ ನಾಟಕ ಅಕಾಡೆಮಿಯ ಎಲ್ಲಾ ಪ್ರಶಸ್ತಿ ಪುರಸ್ಕೃತರ ಪರಿಚಯದ ಪುಸ್ತಕವನ್ನು ಹೊರತರಲು ಕ್ರಮ ವಹಿಸಲಾಗುತ್ತಿದೆ. ಈ ಎಲ್ಲಾ ಕನಸು ಸಾಕಾರಗೊಳ್ಳಲು ಶ್ರಮಿಸಿದ ಪ್ರಕಟಣಾ ಸಮಿತಿ ಸದಸ್ಯರು/ ನಾಟಕ ಅಕಾಡೆಮಿ ಸದಸ್ಯರು ಹಾಗೂ ಜಿಲ್ಲಾರಂಗಮಾಹಿತಿ ಮಾಲಿಕೆಯಡಿ ಸರಿಸುಮಾರು 25 ಮತ್ತು ರಂಗಸಂಪನ್ನರು ಮಾಲಿಕೆಯಡಿ 15 ಕಲಾವಿದರ ಪುಸ್ತಕಗಳನ್ನು ಬರೆದುಕೊಟ್ಟ ಎಲ್ಲಾ ಲೇಖಕರಿಗೆ, ಪುಸ್ತಕವನ್ನು ಸಕಾಲಕ್ಕೆ ಮುದ್ರಿಸಿಕೊಟ್ಟ ರಶ್ಮಿ ಪ್ರಿಂಟರ್ಸ್ ಅವರಿಗೂ, ಅಕಾಡೆಮಿಯ ರಿಜಿಸ್ಟ್ರಾರ್ ಶ್ರೀ ಬಿ. ಮಂಜುನಾಥ ಆರಾಧ್ಯ ಹಾಗೂ ಅಕಾಡೆಮಿಯ ಎಲ್ಲ ಸಿಬ್ಬಂದಿ ವರ್ಗದವರಿಗೂ ಕೃತಜ್ಞತೆಗಳು.

**ಎಲ್.ಬಿ.ಶೇಖ (ಮಾಸ್ತರ)**
ಅಧ್ಯಕ್ಷರು
ಕರ್ನಾಟಕ ನಾಟಕ ಅಕಾಡೆಮಿ

# ಇದು ಆರಂಭ

ಒಂದೊಂದು ಜಿಲ್ಲೆಗಳ ರಂಗಮಾಹಿತಿ ಪ್ರತ್ಯೇಕವಾಗಿ ಪುಸ್ತಕ ರೂಪದಲ್ಲಿ ಲಭ್ಯವಿರಬೇಕು ಎನ್ನುವುದು ನಾಟಕ ಅಕಾಡೆಮಿಯ ಬಹುದಿನದ ಕನಸು. ಇದು ಗುರುತರ ಕೆಲಸ. ಬಿ.ವಿ. ರಾಜಾರಾಂ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಇದಕ್ಕೆ ಚಾಲನೆ ನೀಡಲಾಯಿತು. ಅಕಾಡೆಮಿ ಸದಸ್ಯರಿಗೆ ಇದರ ಹೊಣೆ ಹೊರಿಸಿ ಜಿಲ್ಲೆಯ ಮಟ್ಟದಲ್ಲಿ ಮಾಹಿತಿ ಸಂಗ್ರಹಿಸುವ ಹತ್ತಾರು ರಂಗಕರ್ಮಿಗಳ ಸಂಪಾದಕೀಯ ಸಮಿತಿ ರಚಿಸಲಾಯಿತು. ಹಾಗೂ ಹೀಗೂ 5–6 ಜಿಲ್ಲೆಗಳ ರಂಗಮಾಹಿತಿಯೂ ಸಿದ್ಧಗೊಂಡಿತು. ಆದರೆ ಪುಸ್ತಕಗಳು ಹೊರಬರಲಿಲ್ಲ. ಜಿಲ್ಲೆಯ ಮಟ್ಟದಲ್ಲಿ ಹೆಚ್ಚಿನ ಜನರನ್ನು ಈ ಕೆಲಸಕ್ಕಾಗಿ ತೊಡಗಿಸುವುದು ಕಷ್ಟಕರ. ನಮ್ಮ ಮಿತಿಯಲ್ಲಿ ಅಪ್ರಾಯೋಗಿಕ ಎನಿಸಿತು. ಅಂತೆಯೇ ಒಂದು ಜಿಲ್ಲೆಯ ರಂಗಮಾಹಿತಿ ಸಂಗ್ರಹಿಸಿ ಬರೆಯುವ ಕೆಲಸವನ್ನು ಒಬ್ಬರಿಗೇ ವಹಿಸಿ ಕಾರ್ಯಪ್ರವೃತ್ತರಾದೆವು. ಅದಕ್ಕಾಗಿ 'ಜಿಲ್ಲಾರಂಗಮಾಹಿತಿ' ಮಾಲಿಕೆ ಯೋಜನೆ ರೂಪಿಸಲಾಯಿತು. ಅದು ಫಲ ನೀಡಿತು. ಇಪ್ಪತ್ತಕ್ಕೂ ಅಧಿಕ ಜಿಲ್ಲೆಗಳ ರಂಗಮಾಹಿತಿ ಪುಸ್ತಕಗಳು ಈಗ ಹೊರಬಂದವು.

ಜಿಲ್ಲೆಯ ರಂಗಭೂಮಿ ಸಂಕ್ಷಿಪ್ತ ಇತಿಹಾಸ; ಹವ್ಯಾಸಿ, ವೃತ್ತಿತಂಡಗಳು, ನಟ ನಟಿ, ನಿರ್ದೇಶಕ, ನೇಪಥ್ಯ ಕಲಾವಿದರ ಸಂಕ್ಷಿಪ್ತ ಪರಿಚಯ; ರಂಗಮಂದಿರ – ಹೀಗೆ 13 ವಿಷಯಗಳ ಪಟ್ಟಿಮಾಡಿ ಲೇಖಕರಿಗೆ ಕಳಿಸಿಕೊಟ್ಟಿದ್ದೆವು. ರಂಗಲೇಖಕರು ವಿರಳವಾಗಿರುವುದರಿಂದ ಕೆಲವು ಜಿಲ್ಲೆಗಳಲ್ಲಿ ಕಲಾವಿದರಿಗೇ ಬರಹದ ಕೆಲಸ ನೀಡಲಾಗಿತ್ತು. ಒಬ್ಬರು ಕಲಾವಿದರ ಮೂಲಕ, ಮತ್ತೊಬ್ಬರು ನಾಟಕಕಾರರ ಮೂಲಕ, ಮತ್ತೆ ಕೆಲವರು ರಂಗತಂಡಗಳ ಕ್ರಿಯಾಶೀಲತೆ ಮೂಲಕ ಜಿಲ್ಲೆಯ ರಂಗಮಾಹಿತಿ ಹಿಡಿದಿಡುವ ಪ್ರಯತ್ನ ಮಾಡಿದ್ದಾರೆ. ದಾಖಲೆಗಳು ಸರಿಯಾಗಿ ಲಭ್ಯವಿಲ್ಲದ ಕಾರಣ ಲೇಖಕರು ತಮ್ಮ ಶಕ್ತ್ಯಾನುಸಾರ ಸಂಗ್ರಹಿಸಿ ಬರೆದಿದ್ದಾರೆ. ಆದ್ದರಿಂದ ಇದನ್ನು ಯಾರೂ ಸಮಗ್ರ ಎಂದು ಭಾವಿಸಬಾರದು. ಜಿಲ್ಲೆಯ ಕುರಿತು ಒಂದು ಪಕ್ಷಿನೋಟ ಇದು. ಒಂದು ಜಿಲ್ಲೆಯ ಕೆಲವಷ್ಟು ಮಾಹಿತಿಯನ್ನು ಈ ಪುಸ್ತಕಗಳು ಒಳಗೊಂಡಿವೆ. ಇದೊಂದು ಆರಂಭ. ಇದನ್ನು ಮುಂದುವರಿಸಲು ಸಂಘ ಸಂಸ್ಥೆ, ವಿಶ್ವವಿದ್ಯಾಲಯಗಳಿಗೆ ಅವಕಾಶವಿದೆ.

**ಉತ್ತಮ ಆರಂಭ**

ಬೀದರ ಜಿಲ್ಲೆಯ ರಂಗಭೂಮಿ ಕುರಿತು ಅಧ್ಯಯನ ಮಾಡುವವರಿಗೆ ಈ

'ಬೀದರ ಜಿಲ್ಲಾ ರಂಗ ಮಾಹಿತಿ' ಸರಿಯಾದ ಪ್ರವೇಶಿಕೆ ಒದಗಿಸಿ ಕೊಡಲಿದೆ. ಜಿಲ್ಲೆಯ ಸಮಗ್ರ ರಂಗ ಚಟುವಟಿಕೆಯನ್ನು ಸಂಕ್ಷಿಪ್ತವಾಗಿ ಚಾಂದಕವಠೆಯವರು ಈ ಪುಸ್ತಕದಲ್ಲಿ ಕಟ್ಟಿಕೊಟ್ಟಿದ್ದಾರೆ. ವೃತ್ತಿ, ಅರೆವೃತ್ತಿ, ಹವ್ಯಾಸಿ, ಗ್ರಾಮೀಣ – ಹೀಗೆ ಒಂದನ್ನೂ ಬಿಡದೆ ಸಮಗ್ರ ರಂಗಭೂಮಿಯನ್ನು ವಿಸ್ತೃತವಾಗಿ ಅಧ್ಯಯನ ಮಾಡುವವವರು ಈ ಪುಸ್ತಕವನ್ನು ಓದಿಯೇ ಮುಂದೆ ಹೋಗಬೇಕು ಎಂಬಷ್ಟು ಅಚ್ಚುಕಟ್ಟಾಗಿ ಮಾಹಿತಿಗಳು ಇಲ್ಲಿ ಕ್ರೋಢೀಕರಣಗೊಂಡಿವೆ. ರಂಗಭೂಮಿ ಕುರಿತ ವೈವಿಧ್ಯಮಯ ಸಂಗತಿ ಮತ್ತದರ ಸರಳ ನಿರೂಪಣೆ ಈ ಕೃತಿಯ ಮೌಲ್ಯವನ್ನು ಹೆಚ್ಚಿಸಿದೆ.

ನಟ, ನಿರ್ದೇಶಕ, ಸಂಘಟಕರಾಗಿ ರಂಗದ ಒಳಹೊರಗನ್ನು ಚೆನ್ನಾಗಿ ಬಲ್ಲವರು ಈ ಕೃತಿಯ ಲೇಖಕ ಶ್ರೀ ಚಂದ್ರಗುಪ್ತ ಚಾಂದಕವಠೆ ಅವರು. ಬೀದರದ ಬಿಎಸ್ಎನ್ಎಲ್ ನಲ್ಲಿ ಜೆಟಿಒ ಆಗಿ ನಿವೃತ್ತಿ ಹೊಂದಿರುವ ಚಾಂದಕವಠೆಯವರು ರಂಗಭೂಮಿಗೆ ತಮ್ಮನ್ನು ಸಮರ್ಪಿಸಿಕೊಂಡ ಒಬ್ಬ ಕ್ರಿಯಾಶೀಲ ರಂಗಕರ್ಮಿ. ಸಮಾಜ ಬದಲಾವಣೆಗೆ ಬದ್ಧವಾದ ಸಂಘಟನೆಗಳಲ್ಲಿ ತೊಡಗಿಸಿಕೊಂಡಿದ್ದರೂ– ರಂಗದ ಎಲ್ಲ ಪ್ರಕಾರಗಳನ್ನು ಮುಕ್ತಮನಸ್ಸಿನಿಂದ ಗ್ರಹಿಸಿ ಬರೆದಿರುವ ಕಾರಣ ಈ ಕೃತಿಗೆ ಅಧಿಕೃತತೆ, ವಸ್ತುನಿಷ್ಠತೆ ಪ್ರಾಪ್ತವಾಗಿದೆ. ಸಲೀಸಾಗಿ ಓದಿಸಿಕೊಂಡು ಹೋಗುತ್ತದೆ.

**– ಗುಡಿಹಳ್ಳಿ ನಾಗರಾಜ**
ಪ್ರಕಟಣಾ ಸಮಿತಿ ಪರವಾಗಿ

**ಎಂ.ಎಸ್. ಗುಣಶೀಲನ್**
**ಎಸ್.ಕೆ. ಕೊನೆಸಾಗರ**
**ಮುದ್ದಣ್ಣ ರಟ್ಟೇಹಳ್ಳಿ**
ಪ್ರಕಟಣಾ ಸಮಿತಿ ಸದಸ್ಯರು

# ಕರ್ನಾಟಕ ನಾಟಕ ಅಕಾಡೆಮಿ

ಅಕಾಡೆಮಿ ಅಧ್ಯಕ್ಷರು ಮತ್ತು ಸದಸ್ಯರ ಪಟ್ಟಿ

**ಎಲ್.ಬಿ. ಶೇಖ (ಮಾಸ್ತರ)**
ಅಧ್ಯಕ್ಷರು, ಕರ್ನಾಟಕ ನಾಟಕ ಅಕಾಡೆಮಿ, ವಿಜಯಪುರ

ಸದಸ್ಯರು, ಕರ್ನಾಟಕ ನಾಟಕ ಅಕಾಡೆಮಿ

ಶ್ರೀ ಪಿ. ತಿಪ್ಪೇಸ್ವಾಮಿ, ಚಳ್ಳಕೆರೆ
ಶ್ರೀ ರಾಜಪ್ಪ ಕಿರಗಸೂರು, ಮೈಸೂರುಜಿಲ್ಲೆ
ಶ್ರೀ ಎಸ್.ಕೆ. ಕೊನೆಸಾಗರ, ಹುನಗುಂದ
ಶ್ರೀ ಎಂ.ಎಸ್. ಗುಣಶೀಲನ್, ಬೆಂಗಳೂರು
ಶ್ರೀಮತಿ ಕಲ್ಪನಾ ನಾಗನಾಥ್, ಬೆಂಗಳೂರು
ಶ್ರೀ ಮುದ್ದಣ್ಣ ರಟ್ಟಿಹಳ್ಳಿ, ಹಾವೇರಿ
ಶ್ರೀಮತಿ ಅನ್ನಪೂರ್ಣ ಸಾಗರ, ಶಿವಮೊಗ್ಗ ಜಿಲ್ಲೆ
ಶ್ರೀ ಎಚ್. ಷಡಾಕ್ಷರಪ್ಪ ಹೊಸಮನಿ, ಹರಪನಹಳ್ಳಿ
ಶ್ರೀ ಕೆ. ಜಗುಚಂದ್ರ, ಧಾರವಾಡ
ಶ್ರೀ ಉಮೇಶ ಸಾಲಿಯಾನ, ಕಾಸರಗೋಡು
ಶ್ರೀ ಹಾಲ್ಕುರಿಕೆ ಶಿವಶಂಕರ್, ಕೊಪ್ಪಳ
ಶ್ರೀ ವಿ.ಎನ್. ಅಕ್ಕಿ, ರಾಯಚೂರು
ಶ್ರೀ ಬಿ.ಎಂ. ರಾಮಚಂದ್ರ, ಮೈಸೂರು
ಶ್ರೀ ಎನ್.ಕೆ. ರಾಮಕೃಷ್ಣ, ಬೆಂಗಳೂರು
ಶ್ರೀಮತಿ ಎ. ವರಲಕ್ಷ್ಮಿ, ಬಳ್ಳಾರಿ

ಕೋಪ್ಟ್ ಆದ ಸಹಸದಸ್ಯರು
ಶ್ರೀ ಗುಡಿಹಳ್ಳಿ ನಾಗರಾಜ, ಬೆಂಗಳೂರು
ಡಾ. ಶ್ರೀಪಾದ ಭಟ್, ಶಿರಸಿ
ಶ್ರೀ ಎಲ್.ಎಚ್. ರಂಗನಾಥಪ್ಪ, ಶಿರಾ

ರಿಜಿಸ್ಟ್ರಾರ್:
ಬಿ. ಮಂಜುನಾಥ ಆರಾಧ್ಯ

ಯೋಜನಾ ಸಹಾಯಕರು:
ಕೆ. ರೇವಣ್ಣ

ಕಚೇರಿ ಸಿಬ್ಬಂದಿ:
ಸೌಭಾಗ್ಯಲಕ್ಷ್ಮೀ, ಎಂ. ಭೋಜಣ್ಣ, ಸುಶೀಲಮ್ಮ

# ನಿಮ್ಮೊಂದಿಗೆ....

## "ಕಾವ್ಯೇಷು ನಾಟಕಂ ರಮ್ಯಂ, ನಾಟಕೇಷು ಶಾಕುಂತಲಾ"

ನಮಸ್ಕಾರ,

ಕರ್ನಾಟಕ ನಾಟಕ ಅಕಾಡೆಮಿಯು ಕರ್ನಾಟಕದ ಪ್ರತಿಯೊಂದು ಜಿಲ್ಲೆಯ ಸಮಗ್ರ ರಂಗಮಾಹಿತಿಯನ್ನು ಪುಸ್ತಕ ರೂಪದಲ್ಲಿ ದಾಖಲಿಸುತ್ತಿರುವುದು, ಪ್ರಶಂಶನೀಯ ವಾದ ಸಂಗತಿ. ಸ್ತುತ್ಯಾರ್ಥವಾದ ಈ ಯೋಜನೆಯನ್ನು ಕೈಗೆತ್ತಿಕೊಂಡು ಕಾರ್ಯರೂಪಕ್ಕೆ ತರುತ್ತಿರುವ ಕರ್ನಾಟಕ ನಾಟಕ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಎಲ್. ಬಿ. ಶೇಖ್ (ಮಾಸ್ತರ್) ಅವರಿಗೂ ಎಲ್ಲಾ ಸದಸ್ಯರಿಗೂ ಅಭಿನಂದನೆ ಸಲ್ಲಿಸಲೇಬೇಕು. ಇದು ಸಮಗ್ರ ಕನ್ನಡ ರಂಗ ಭೂಮಿಯ ಇತಿಹಾಸದ ಮಾಹಿತಿ ಕಣಜವಾಗುವದರಲ್ಲಿ ಅನುಮಾನವೇ ಇಲ್ಲ.

ಬೀದರ ಜಿಲ್ಲಾರಂಗ ಮಾಹಿತಿ ಸಂಗ್ರಹಿಸಿ ಕೊಡಲು ನಾಟಕ ಅಕಾಡೆಮಿ ಸದಸ್ಯರಾದ ಶ್ರೀ ವ್ಹಿ. ಎನ್. ಅಕ್ಕಿ ಅವರು ಹಾಗೂ ಶ್ರೀ ಬಳವಂತರಾವ ಪಾಟೀಲರು ತಿಳಿಸಿದರು. ಶ್ರೀ ಗುಡಿಹಳ್ಳಿ ನಾಗರಾಜ ಅವರನ್ನು ಸಂಪರ್ಕಿಸಿ, ಅವರಿಂದ ಮಾಹಿತಿ ಪಡೆದು ಸಂತೋಷದಿಂದ ಈ ಕಾರ್ಯಕ್ಕೆ ಒಪ್ಪಿಕೊಂಡ ಮೇಲೆ ಮಾಹಿತಿ ಸಂಗ್ರಹದ ಅಗಾಧ ತೆಯು ಪರಿಚಯವಾಯಿತು. ಮಾಹಿತಿ ಪಡೆಯಲು ಪತ್ರಿಕಾ ಪ್ರಕಟಣೆ ನೀಡಿದಾಗ, ಬಂದ ನೀರಸ ಪ್ರತಿಕ್ರಿಯೆಯಿಂದ ಹಿಮ್ಮೆಟ್ಟದೆ, ಹಲವಾರು ಬಾರಿ ಮನವಿ ಮಾಡಿ, ಒತ್ತಾಯಿಸಿ ದಾಗ ಒಂದೊಂದಾಗಿ ಮಾಹಿತಿಗಳು ಬಂದಂತೆ, ದಾಖಲೆಯನ್ನು ಬರೆಯಲು ಪ್ರಾರಂಭಿಸಲಾಯಿತು.

ಬೀದರಿನಲ್ಲಿ ಮಾಡುತ್ತಿದ್ದ ನಾಟಕಗಳ ಕುರಿತು ವಿಮರ್ಶೆ, ಕಲಾವಿದರ ವ್ಯಕ್ತಿ ಚಿತ್ರಣಗಳನ್ನು ಪತ್ರಿಕೆಗಳಿಗೆ ಬರೆಯುತ್ತಾ ಬಂದಿದ್ದು, ಸ್ವಲ್ಪ ಮಟ್ಟಿಗೆ ಮಾಹಿತಿಗಳ ಸಂಗ್ರಹವಾಗಿತ್ತು, ಜೊತೆಗೆ ಪತ್ರಿಕೆಗಳಲ್ಲಿ ಬಂದ ಸುದ್ದಿಯನ್ನೂ ಸಂಗ್ರಹಿಸಿ ಇಟ್ಟಿದ್ದು ಈಗ ಉಪಯೋಗಕ್ಕೆ ಬಂದಿತು.ಇಲ್ಲಿ ಬೀದರ ಜಿಲ್ಲೆಯ ರಂಗಭೂಮಿ, ಅರೆವೃತ್ತಿ, ವೃತ್ತಿ ರಂಗಭೂಮಿ, ಹವ್ಯಾಸಿ ರಂಗಭೂಮಿ, ಕಲಾವಿದರು ಹೀಗೆ ವಿಂಗಡಿಸಿ ಮಾಹಿತಿ ನೀಡಲು ಪ್ರಯತ್ನಿಸಿರುವೆನು.

ಬೀದರ ಜಿಲ್ಲೆಯ ರಂಗ ಭೂಮಿಯ ಸಮಗ್ರ ಮಾಹಿತಿಯನ್ನು ನೀಡಿದ ಎಲ್ಲಾ ಮಹನೀಯರನ್ನು ನೆನೆಯದೇ ಇರಲಾರೆ. ಈ ಕಾರ್ಯದಲ್ಲಿ ಅಮೂಲ್ಯವಾದ ಸಲಹೆ

ಸೂಚನೆ ನೀಡಿ, ಸಹಕರಿಸಿದ ಮಿತ್ರರಾದ ಶ್ರೀ ಶಂಭುಲಿಂಗ ವಾಲ್ದೊಡ್ಡಿ, ಎಮ್. ಎಸ್. ಮನೋಹರ, ಪ್ರೊ. ಎಸ್. ವ್ಹಿ. ಕಲ್ಮಠ, ರಾಜೇಂದ್ರ ಸಿಂಗ ಪವಾರ, ಡಾ. ರಾಜೇಂದ್ರ ಯರನಾಳೆ, ಡಾ. ರಘುಶಂಖ ಭಾತಂಬ್ರಾ, ಶ್ರೀಮತಿ ಅರುಂಧತಿ ಚಾಂದಕವಠೆ ಅವರಿಗೆ ಮತ್ತು ಸಮಯಕ್ಕೆ ಸರಿಯಾಗಿ ತಮ್ಮ ವೈಯುಕ್ತಿಕ ವಿವರ, ಫೋಟೋಗಳನ್ನು ನೀಡಿದ ಎಲ್ಲಾ ಕಲಾವಿದರಿಗೂ ನೆನೆಯದೇ ಇರಲಾರೆ. ಇದು ಇನ್ನೂಅಪೂರ್ಣ ಮಾಹಿತಿ ಎನಿಸುವದು. ಸಮಯದ ಅಭಾವದಿಂದ ಇನ್ನೂ ಹಲವಾರು ನಾಟಕಗಳು, ನಾಟಕಕಾರರು, ಕಲಾವಿದರನ್ನು ಸ್ಮರಿಸಲು, ದಾಖಿಲಿಸಲು ಆಗದೆ ಕಣ್ತಪ್ಪಿ ಹೋಗಿರಬಹುದು. ಅಂತಹ ವಿವರಗಳನ್ನು ಬರೆದು ತಿಳಿಸಿದರೆ, ಮಾಹಿತಿ ನೀಡಿದರೆ, ರಂಗ ಇತಿಹಾಸದ ಮುಂದಿನ ದಾಖಲೆಗಳಲ್ಲಿ ಸೇರಿಸಿ ಕೊಳ್ಳಬಹುದು.

ಈ ಮಾಹಿತಿ ಸಂಗ್ರಹದ ಸದವಕಾಶವನ್ನು ನನಗೆ ನೀಡಿದ ಅಕಾಡೆಮಿ ಅಧ್ಯಕ್ಷರಾದ ಶ್ರೀ ಎಲ್. ಬಿ. ಶೇಖ (ಮಾಸ್ತರ) ಅವರಿಗೂ ರಜಿಸ್ಟ್ರಾರ ಶ್ರೀ ಬಿ. ಮಂಜುನಾಥ ಆರಾಧ್ಯ ಅವರಿಗೂ, ಸದಸ್ಯರಾದ ಶ್ರೀ ಗುಡಿಹಳ್ಳಿ ನಾಗರಾಜ ಅವರಿಗೂ, ಶ್ರೀ ವ್ಹಿ. ಎನ್. ಅಕ್ಕಿ ಅವರಿಗೂ ಮತ್ತು ಎಲ್ಲಾ ಸದಸ್ಯ ಬಂಧುಗಳಿಗೂ ಹೃತ್ಪೂರ್ವಕ ಧನ್ಯವಾದಗಳು.

ವಂದನೆಗಳು,

**ಚಂದ್ರಗುಪ್ತ ಶಿವಪ್ಪಾ ಚಾಂದಕವಠೆ**

# ಪರಿವಿಡಿ


| | | |
|---|---|---|
| ಅಧ್ಯಕ್ಷರ ನುಡಿ | | iii |
| ಇದು ಆರಂಭ | | v |
| ನಿಮ್ಮೊಂದಿಗೆ | | viii |
| ೧. | ಪೀಠಿಕೆ | ೩ |
| ೨. | ಬೀದರ ಜಿಲ್ಲೆಯ ರಂಗಭೂಮಿಯ ಹಿನ್ನೆಲೆ | |
| | ಎ) ಸಣ್ಣಾಟಗಳು (ಡಪ್ಪಿನಾಟ) | ೬ |
| | ಬಿ) ಬಯಲಾಟಗಳು (ದೊಡ್ಡಾಟಗಳು) | ೮ |
| | ಸಿ) ಕೋಲಾಟ | ೯ |
| ೩. | ಅರೆ ವೃತ್ತಿ ರಂಗಭೂಮಿ (ಹವ್ಯಾಸಿ) | ೧೧ |
| ೪. | ವೃತ್ತಿ ರಂಗಭೂಮಿ | ೧೮ |
| ೫. | ನಾಟಕಕಾರರು, ನಾಟಕಗಳು | ೨೩ |
| ೬. | ಹವ್ಯಾಸಿ ರಂಗ ತಂಡಗಳು | ೨೮ |
| ೭. | ಎದೆ ತುಂಬಿ ಹಾಡಿದ ರಂಗ ಗೀತೆಗಳು | ೪೩ |
| ೮. | ಮಕ್ಕಳ ರಂಗ ನಾಟಕಗಳು | ೪೬ |
| ೯. | ಸಂಘಟಕರು, ಕಲಾವಿದರು, ಸಂಗೀತಕಾರರು, ನೇಪಥ್ಯ ಕಲಾವಿದರು, ಕಲಾವಿದೆಯರು | ೪೯ |
| ೧೦. | ನಾಟಕ, ಸಂಗೀತ ಪರಿಕರಗಳು ದೊರೆಯುವ ಸ್ಥಳ | ೯೨ |
| ೧೧. | ರಂಗ ಮಂದಿರಗಳು ಒಂದು ನೋಟ | ೯೩ |
| ೧೨. | ವಿವಿಧ ನಾಟಕ ಶಾಲೆಗಳ ಪದವಿ ಪಡೆದವರು | ೯೪ |
| ೧೩. | ಚಲನಚಿತ್ರಗಳಲ್ಲಿ ನಟಿಸಿದ ಕಲಾವಿದರು | ೯೫ |
| ೧೪. | ಕರ್ನಾಟಕ ನಾಟಕ ಅಕಾಡೆಮಿಯ ಪ್ರಶಸ್ತಿ ಪುರಸ್ಕೃತರು | ೯೭ |
| ೧೫. | ಸಮಾರೋಪ | ೯೮ |
| ೧೬. | ಗ್ರಂಥ ಋಣ | ೯೯ |
| ೧೭. | ಕಲಾವಿದರ ಮತ್ತು ನಾಟಕಗಳ ಚಿತ್ರಗಳು | ೧೦೦ |

# ಬೀದರ್

# ಪೀಠಿಕೆ

**"ಆಂಗಿಕಂ ಭುವನಂ ಯಸ್ಯ, ವಾಚಿಕಂ ಸರ್ವ ವಾಙ್ಮಯಂ।**
**ಆಹಾರ್ಯಂ ಚಂದ್ರ ತಾರಾದಿ ತಂ ನಮ: ಸಾತ್ವಿಕಂ ಶಿವಂ॥"**

ರಂಗಭೂಮಿಯೆಂದರೆ, ಕನಸುಗಳನ್ನು ಸೃಷ್ಟಿಸುವ ದಿವ್ಯತಾಣ, ದಿನ ನಿತ್ಯದ ಜಂಜಾಟ, ಬದುಕಿನ ಏಕತಾನತೆಯನ್ನು ಬದಿಗಿಟ್ಟು, ಮನೋಲ್ಲಾಸಗೊಳಿಸುವ ಸುಂದರ ಮೆಟ್ಟಿಲು. ಬದುಕನ್ನು ತಿದ್ದುವ, ಬದಲಾಯಿಸುವ ಭಾವನೆಗಳನ್ನು ಕೆರಳಿಸಿ ಸಂತೈಸುವ ಶಕ್ತಿ ಕೇಂದ್ರ. ಇದರ ಕಾಂತಕ್ಷೇತ್ರದಲ್ಲಿ ಬರುವವರನ್ನು ಸೆಳೆದು ಅಪ್ಪಿಕೊಳ್ಳುವ ಶಕ್ತಿ ರಂಗಭೂಮಿಗೆ ಇದೆ.

ಕಲ್ಯಾಣ ಕರ್ನಾಟಕದ ಕಿರೀಟವಾಗಿ ಕಂಗೊಳಿಸುವ ಬೀದರ ಜಿಲ್ಲೆ, ಮಹಾರಾಷ್ಟ್ರ, ತೆಲಂಗಾಣ ರಾಜ್ಯಗಳೊಂದಿಗೆ ತನ್ನ ಗಡಿಯನ್ನು ಹಂಚಿಕೊಂಡಿದ್ದು, ಮಿಶ್ರ ಭಾಷಾ ಸೊಗಡಿನಿಂದ ಕೂಡಿದೆ. ಬೀದರ ಜಿಲ್ಲೆಯಲ್ಲಿ ಬೀದರ, ಬಸವಕಲ್ಯಾಣ, ಔರಾದ, ಭಾಲ್ಕಿ, ಹುಮನಾಬಾದ ಐದು ತಾಲೂಕುಗಳನ್ನು ಒಳಗೊಂಡಿದೆ. ಕಾರಂಜಾ, ಮಾಂಜರಾ ನದಿಗಳು ಇಲ್ಲಿನ ಜೀವ ನಾಡಿಗಳು. ಡೆಕ್ಕನ ಪ್ರಸ್ಥಭೂಮಿಯ ಪ್ರದೇಶ, ಕೆಂಪು ಮಣ್ಣಿನಿಂದ ಕಂಗೊಳಿಸುತ್ತಲಿದೆ. ಜೋಳ, ಉದ್ದು, ಹೆಸರು, ಕಬ್ಬು ಇಲ್ಲಿನ ಮುಖ್ಯ ಬೆಳೆಗಳಾಗಿವೆ.

ಪ್ರವಾಸಿ ಕೇಂದ್ರವಾಗಿ ಅಭಿವೃದ್ಧಿ ಹೊಂದುತ್ತಿರುವ, ಬೀದರ ಜಿಲ್ಲೆಯ ಬಸವಕಲ್ಯಾಣ, ಹನ್ನೆರಡನೆಯ ಶತಮಾನದ ಸಮಾನತೆಯ ಹರಿಕಾರ, ಅಣ್ಣ ಬಸವಣ್ಣನವರ ಕಾರ್ಯ ಕ್ಷೇತ್ರವಾಗಿದೆ. ಎಲ್ಲ ಶರಣರು ನೆಲೆಸಿದ ಗುಹೆಗಳು, ಅನುಭವ ಮಂಟಪ, ಬಸವೇಶ್ವರ ದೇವಸ್ಥಾನ, ನೂರಾಎಂಟು ಅಡಿ ಎತ್ತರದ ಬಸವೇಶ್ವರ ಮೂರ್ತಿ ನೆಚ್ಚಿನ ತಾಣಗಳಾಗಿವೆ. ನಾರಾಯಣಪೂರ,ಜಲಸಂಗಿಗಳಲ್ಲಿ ಸುಂದರ ಕೆತ್ತನೆಯ ದೇವಾಲಯ ಗಳಿವೆ. ಬೀದರ ನಗರದಲ್ಲಿ ನರಸಿಂಹ ಝರನಾ ಗುಹಾಂತರ್ಗತ ದೇವಾಲಯ, ಗುರು ನಾನಕರ ಝರನಾ, ಪಾಪನಾಶ ದೇವಾಲಯ, ಅಷ್ಟೂರ ಗುಂಬಜಗಳು, ಬೀದರ ಕೋಟೆ, ದರ್‌ವಾರ್ಝಾಗಳು, ಚೌಬಾರಾ, ಮೊಹಮ್ಮದ್ ಗವಾನ ಮದರಸಾ (ಕಾಜಿನ ಖಂಭ), ಜಾಮಾ ಮಸಜಿದ್, ಚರ್ಚಗಳು, ಭಾರತೀಯ ವಾಯುಪಡೆಯ ತರಬೇತಿ ಕೇಂದ್ರ, ಹೀಗೆ ಸರ್ವ ಜನಾಂಗದ ಶಾಂತಿಯ ತೋಟವಾಗಿ ಕಂಗೊಳಿಸುತ್ತಿದೆ.

ಸ್ವಾತಂತ್ರ್ಯಪೂರ್ವದಲ್ಲಿ, ಬೀದರ ಜಿಲ್ಲೆ ಹೈದರಾಬಾದ ನಿಜಾಮರ

ಆಡಳಿತಕ್ಕೊಳಪಟ್ಟಿದ್ದರಿಂದ ಇಲ್ಲಿ ಉರ್ದು ಶಿಕ್ಷಣದ ಮಾಧ್ಯಮವಾಗಿತ್ತು. ವ್ಯವಹಾರದಲ್ಲಿ ಉರ್ದು, ಹಿಂದಿ, ಕನ್ನಡ, ಮರಾಠಿ, ತೆಲಗು ಭಾಷೆಗಳು ಹೀಗಾಗಿ ಕನ್ನಡ ಉಳಿದು ಬಂದದ್ದೇ ಹೆಚ್ಚು. ಕನ್ನಡ ಭಾಷೆಯನ್ನು ಉಳಿಸುವ ನಿಟ್ಟಿನಲ್ಲಿ, ಹಲವಾರು ಮಹನೀಯರು ಎಲೆಮರೆಯ ಕಾಯಿಯಂತೆ ಕಾರ್ಯ ಮಾಡಿದ್ದಾರೆ. ಪ್ರಮುಖವಾಗಿ ಭಾಲ್ಕಿಯ ಹಿರೇಮಠ, ಕನ್ನಡದ ಮಠವೆಂದೇ ಖ್ಯಾತಿ ಪಡೆದಿದೆ. ಪೀಠಾಧಿಕಾರಿಗಳಾದ ಶತಾಯುಷಿ ಡಾ. ಚನ್ನಬಸವ ಪಟ್ಟದೇವರು ಕನ್ನಡದ ಉಳಿವಿಗಾಗಿ ಬಹಳ ಶ್ರಮ ಪಟ್ಟವರು. ತೆಲಂಗಾಣದ ಮೋರಗಿಯಲ್ಲಿ ಕನ್ನಡ ಶಾಲೆ ಪ್ರಾರಂಭಿಸಿದರು. ಅವರು ನಡೆಸುತ್ತಿದ್ದ ಶಾಲೆಗಳಲ್ಲಿ ಹೊರಗಡೆ ಉರ್ದು ಬೋರ್ಡ್ ಹಾಕಿ ಒಳಗೆ ಕನ್ನಡದ ಪಾಠ ಮಾಡಿಸುತ್ತಿದ್ದರಂತೆ, ಹೀಗೆ ಹಲವಾರು ಮಹನೀಯರ ಪರಿಶ್ರಮದ ಫಲವಾಗಿ ಕನ್ನಡ ಭಾಷೆ ತನ್ನತನ ಉಳಿಸಿಕೊಂಡಿದೆ. ಇಲ್ಲಿಯ ಭಾಷಾ ಸೊಗಡು ಅನುಪಮವಾಗಿದೆ. ಹಳೆಗನ್ನಡದ, ಅಚ್ಚಕನ್ನಡದ, ಪಡೆನುಡಿಗಳನ್ನು ಬಳಸುತ್ತ ಜೀವಂತವಾಗಿಟ್ಟಿರುವವರು, ನಮ್ಮ ಜಿಲ್ಲೆಯ ಜಾನಪದರು. ಹಿಂದೂ, ಮುಸ್ಲಿಮ ಭೇದವೆಣಿಸದೆ ಕೋಮು ಸೌಹಾರ್ದತೆಯಿಂದ ತತ್ವಪದ, ಸಣ್ಣಾಟ, ಬಯಲಾಟಗಳನ್ನು ಬರೆದು, ತತ್ವ ಪದಗಳನ್ನು ಹಾಡಿ, ನಾಟಕ ಮಾಡಿಸಿರುವರು.

ಕನ್ನಡ ಸಾಹಿತ್ಯ, ಸಂಸ್ಕೃತಿಗೆ ಬೀದರಿನ ಕೊಡುಗೆ ಅಪಾರವಾಗಿದೆ. ಜಗತ್ಪ್ರಸಿದ್ಧ ಬಿದರಿ ಕಲೆ, ಸಾಹಿತ್ಯ, ದೇಶೀ ಸಂಸ್ಕೃತಿಗೆ ತವರುನೆಲ. ಹಲವಾರು ರಾಜಮನೆತನಗಳ ಆಳ್ವಿಕೆಗೆ ಒಳಪಟ್ಟು, ರಾಜಧಾನಿಯಾಗಿ ಮೆರೆದಿದೆ. ಇತಿಹಾಸಕಾರರು ದಾಖಲಿಸುವಂತೆ, ಕನ್ನಡದ ಮೊಟ್ಟ ಮೊದಲನೆಯ ಗದ್ಯ ಕೃತಿ 'ಆರಾಧನಾ ಕರ್ಣಾಟ ಟೀಕಾ' ಎಂಬ ಗದ್ಯ ಕೃತಿ ರಚಿಸಿದ 'ಬ್ರಾಜಿಷ್ಣು' ಬೀದರ ಜಿಲ್ಲೆಯ ಹಳ್ಳಿಖೇಡ (ಬಿ) ಗ್ರಾಮದವರು. ಕಲ್ಯಾಣ ಚಾಲುಕ್ಯರ ಎಡನೆಯ ತೈಲಪರ ಆಸ್ಥಾನ ಕವಿ ರನ್ನ ಕಾವ್ಯ ಬರೆದದ್ದು ಈ ನೆಲದಲ್ಲಿಯೇ. ಬಿಲ್ಹಣನ ವಿಕ್ರಮಾಂಕ ದೇವಚರಿತ ಬರೆದದ್ದು ಇಲ್ಲಿಯೇ. ಇನ್ನು ನ್ಯಾಯಶಾಸ್ತ್ರ ಗ್ರಂಥವಾದ 'ಮಿತಾಕ್ಷರ'ವನ್ನು ಬರೆದ ವಿಜ್ಞಾನೇಶ್ವರರು ಬೀದರ ಜಿಲ್ಲೆಯ ಮಾಸಿಮಾಡು ಗ್ರಾಮದವರು. ಆರನೇ ವಿಕ್ರಮಾದಿತ್ಯನ ಮಗ ಮೂರನೆ ಸೋಮೇಶ್ವರ ಬರೆದ ಮಾನಸೋಲ್ಲಾಸ, ಅಭಿಲಾಷಿತಾರ್ಥ ಚಿಂತಾಮಣಿ ಪ್ರಖ್ಯಾತವಾಗಿವೆ. ಜನಪದ ಸಾಹಿತ್ಯ, ತತ್ವಪದ ಸಾಹಿತ್ಯ, ಸೂಫಿ ಸಂತರ ಸಾಹಿತ್ಯ, ಹನ್ನೆರಡನೆಯ ಶತಮಾನದ ವೈಚಾರಿಕ ನೆಲೆಗಟ್ಟಿನ ವಚನ ಸಾಹಿತ್ಯವನ್ನು ರಚನೆ ಮಾಡಿದ ಶರಣರ ವಚನಗಳು ವಿಶ್ವಕ್ಕೆ ಮಾದರಿಯಾಗಿವೆ. ಸಮಾನತೆಯ ಸಂದೇಶ ಸಾರಿವೆ.

ಬೀದರ ಜಿಲ್ಲೆಯ ಶಾಸನಗಳಿಂದ ತಿಳಿದುಬಂದಂತೆ, ಕಲ್ಯಾಣದ ಚಾಲುಕ್ಯ ಚಕ್ರವರ್ತಿ ಆರನೇ ವಿಕ್ರಮಾದಿತ್ಯನು, ಸಂಗೀತಾದಿ ಲಲಿತ ಕಲೆಗಳಿಗೆ ಅಗ್ರಸ್ಥಾನ ಕಲ್ಪಿಸಿದವನು. ಆತನ ಪಟ್ಟದರಸಿ ಚಂದಲದೇವಿ ಮಹಾನ್ ಸಂಗೀತ ವಿದುಷಿ, ಅವಳಿಗೆ ಅಭಿನವ ಸರಸ್ವತಿ, ನೃತ್ಯವಿದ್ಯಾಧರೆ ಎಂಬ ಬಿರುದುಗಳಿದ್ದವು. ನೃತ್ಯ, ಸಂಗೀತ, ನಾಟಕಗಳಲ್ಲಿ ಪ್ರವೀಣೆಯಾಗಿದ್ದಳು. ಹುಮನಾಬಾದ ತಾಲೂಕಿನ ಜಲಸಂಗಿಯ ಈಶ್ವರ ದೇವಸ್ಥಾನದಲ್ಲಿ ಶಾಸನ ಬರೆಯುತ್ತಿರುವ ಶಿಲಾಬಾಲಿಕೆಯ ಕಲಾಕೃತಿ ನೋಡಿದಾಗ, ಆಗಿನ ಕಾಲದಿಂದಲೂ ಮಹಿಳೆಯರು ಲಲಿತ ಕಲೆಗಳಲ್ಲಿ ಪರಿಣತಿ ಪಡೆದಿದ್ದರೆಂದು ತಿಳಿದುಬರುವದು.

ಬಸವಕಲ್ಯಾಣದ ಬಳಿಯಿರುವ ಗೋರ್ಟಾ ಅಗ್ರಹಾರ ಮತ್ತು ತಾಂಬಾಳ ಗ್ರಾಮಗಳು ವಿದ್ಯಾ ಕೇಂದ್ರಗಳಾಗಿದ್ದವೆಂದು ಶಾಸನಗಳಿಂದ ತಿಳಿದುಬರುವದು. ಚಾಲುಕ್ಯರ ವಿದ್ಯಾಗುರು ರುದ್ರಮಿಶ್ರ ಎಂಬುವರು, ಗೋರ್ಟಾಗೆ ಬಂದು ನೆಲೆಸಿದ್ದರು. ಇಲ್ಲಿ ದೊಡ್ಡ ಪ್ರಮಾಣದ ವೇದ ಸಂಗೀತ ಶಾಲೆ ಇತ್ತು.

ಹನ್ನೆರಡನೆಯ ಶತಮಾನದಲ್ಲಿ ಬಿಜ್ಜಳನ ಆಸ್ಥಾನದಲ್ಲಿ ಪ್ರಧಾನಿಯಾಗಿದ್ದ ಅಣ್ಣ ಬಸವಣ್ಣನವರು ಬಸವಕಲ್ಯಾಣದಲ್ಲಿ ಅನುಭವ ಮಂಟಪವನ್ನು ಸ್ಥಾಪಿಸಿದರು. ಇದು ಕಾಯಕ, ಪ್ರಸಾದ ಮತ್ತು ದಾಸೋಹದ ಮಹತ್ವವನ್ನು ಸಾರುತ್ತಲೇ, ವರ್ಗ, ವರ್ಣ, ಜಾತಿ, ಲಿಂಗಭೇದವಿಲ್ಲದ ಸಮಾಜದ ನಿರ್ಮಾಣದಲ್ಲಿ ತೊಡಗಿದರು. ಶರಣರು ವಚನಕಾರರಾಗಿ, ಕಾಯಕ ಮಾಡುತ್ತಲೇ, ಸಮಾನತೆಯ ಹರಿಕಾರರಾಗಿ ವಿಶ್ವ ಪ್ರಸಿದ್ಧರಾದವರು. ವೈಚಾರಿಕ ನೆಲೆಗಟ್ಟಿನ ವಚನ ಸಾಹಿತ್ಯ ರಚನೆ ಮಾಡಿದ ಶರಣರ ಜೊತೆಗೆ ಇದ್ದ ಬಹುರೂಪಿ ಚೌಡಯ್ಯನವರು, ಶರಣ ನಗೆಮಾರಿ ತಂದೆಯವರು ಶ್ರಮಜೀವಿಗಳನ್ನು ನಗಿಸಿ ಅವರ ಆಯಾಸ ಕಳೆಯುತ್ತಿದ್ದರು ಎಂಬುದಾಗಿ ತಿಳಿದುಬರುವದು.

ಹದಿನಾಲ್ಕನೇ ಶತಮಾನದಲ್ಲಿ ಬಹಮನಿ ಸುಲ್ತಾನರ ಆಡಳಿತದಲ್ಲಿ, ಇರಾನಿನಿಂದ ಬಂದ ಮೇಧಾವಿ ಮಹಮೂದ್ ಗವಾನ ಇಲ್ಲಿ ಪ್ರಧಾನಿಯಾಗಿ ವಿಶ್ವ ಪ್ರಸಿದ್ಧ ಶಿಕ್ಷಣ ಕೇಂದ್ರವಾದ ಮಹಮೂದ್ ಗವಾನ ಮದರಸಾವನ್ನು ಸ್ಥಾಪಿಸಿ, ಬೀದರನ್ನು ವಿದ್ಯಾ ಕೇಂದ್ರವಾಗಿಸಿದರು. ರಷ್ಯಾದ ಪ್ರವಾಸಿ ಅಥನಾಸಿ ನಿಕಿಟಿನ್ ಇಲ್ಲಿ ಭೇಟಿ ನೀಡಿದ್ದು ಇತಿಹಾಸದಲ್ಲಿ ದಾಖಲಾಗಿದೆ.

ನಿಜಾಮರ ಆಡಳಿತದಲಿದ್ದ ಬೀದರ ಜಿಲ್ಲೆಯಲ್ಲಿ ಸ್ವಾತಂತ್ರ್ಯಕ್ಕಾಗಿ ಎರಡು ಬಾರಿ ಹೋರಾಟ ಮಾಡಬೇಕಾಗಿ ಬಂತು. ೧೯೪೮ರಲ್ಲಿ ಭಾರತ ಸರಕಾರದ ಪೊಲೀಸ್ ಕಾರ್ಯಾಚರಣೆ ನಂತರ ನಿಜಾಮರ ಆಡಳಿತದಿಂದ ಮುಕ್ತಿ ಪಡೆದು, ದೇಶ ಸ್ವಾತಂತ್ರ್ಯದ ನಂತರ ಒಂದು ವರ್ಷ ತಡವಾಗಿ ಸ್ವಾತಂತ್ರ್ಯ ಪಡೆದ ನಮ್ಮ ಜಿಲ್ಲೆಯಲ್ಲಿ ಕನ್ನಡ ತನ್ನ ಅಸ್ತಿತ್ವ ಪಡೆದುಕೊಳ್ಳಲು ಹತ್ತು ಹದಿನೈದು ವರ್ಷಗಳೇ ಬೇಕಾದವು.

ಈ ಎಲ್ಲಾ ಹಿನ್ನೆಲೆಯಲ್ಲಿಯೂ ಇಲ್ಲಿ ಜನ ಮಾನಸದ ಮನರಂಜನೆಯ ಭಾಗವಾಗಿ ರಂಗಭೂಮಿ ತನ್ನತನವನ್ನು ಮೆರೆದಿದೆ. ಅರೆ ವೃತ್ತಿ ರಂಗಭೂಮಿ ಇಂದಿಗೂ ಹಳ್ಳಿಗಳಲ್ಲಿ ಉಳಿದು ಬೆಳೆಯುತ್ತಲಿದೆ.

೧೯೭೦ರ ಆಸು ಪಾಸಿನಲ್ಲಿ, ನಾಡಿನೆಲ್ಲೆಡೆ ಹವ್ಯಾಸಿ ರಂಗ ಚಟುವಟಿಕೆಗಳು ಪ್ರಾರಂಭಿಸಿದಂತೆ, ಬೀದರ ಜಿಲ್ಲೆಯಲ್ಲೂ ಹವ್ಯಾಸಿ ರಂಗಭೂಮಿ ಕುಡಿಯೊಡೆಯಲು ಪ್ರಾರಂಭಿಸಿತು. ಹೊರಗಿನ ತಂಡಗಳು ಬೀದರಿಗೆ ಬಂದು ನಾಟಕ ಮಾಡಲು ಪ್ರಾರಂಭಿಸಿದಾಗ, ಇಲ್ಲಿಯ ಹವ್ಯಾಸಿ ರಂಗಾಸಕ್ತರು ಸೇರಿ ತಂಡಗಳನ್ನು ಕಟ್ಟಲು ಪ್ರಾರಂಭ ಮಾಡಿದರು.

# ಬೀದರ ಜಿಲ್ಲೆಯ ರಂಗಭೂಮಿ ಹಿನ್ನೆಲೆ

## ಎ) ಸಣ್ಣಾಟಗಳು (ಡಪ್ಪಿನಾಟ)

ಸಣ್ಣಾಟವೆಂದೇ ಗುರುತಿಸಲ್ಪಡುವ ಡಪ್ಪಿನಾಟ, ಸಂಗೀತ ನಾಟಕವಾಗಿದ್ದು ೧೯ನೆಯ ಶತಮಾನದ ಪೂರ್ವಾರ್ಧದಿಂದ ಚಾಲ್ತಿಯಲ್ಲಿದೆ ಎಂದು ತಿಳಿದುಬರುವದು. ವಚನ ಪರಂಪರೆಯಲ್ಲಿ ಸ್ವರವಚನಕಾರರು, ದಾಸ ಸಾಹಿತ್ಯ ಪರಂಪರೆಯ ಕೀರ್ತನಕಾರರಂತೆ, ಅನುಭಾವ ಪರಂಪರೆಯಲ್ಲಿ ತತ್ವಪದಕಾರರು ಸಹಿತ ಖ್ಯಾತನಾಮರಾಗಿದ್ದರು. ಹಾಗೇ, ಧುಮ್ಮನಸೂರಿನ ಸಿದ್ಧಪ್ರಭುಗಳು ತತ್ವ ಪದಗಳೊಂದಿಗೆ, 'ಭೂ ಕೈಲಾಸ' ಮತ್ತು 'ಚಂದ್ರಶಿರೋಮಣಿ' ಸಣ್ಣಾಟಗಳನ್ನು (ಡಪ್ಪಿನಾಟ) ರಚಿಸಿರುವರು. ಇವು ಚಂಪೂ ಕಾವ್ಯದಂತೆ ಗದ್ಯ ಪದ್ಯದಲ್ಲಿವೆ. ಇನ್ನೊಂದು ವಿಶೇಷತೆ ಎಂದರೆ, ನಾಟಕದಲ್ಲಿ ಉರ್ದು ಶ್ಲೋಕಗಳನ್ನು ಬಳಸಿರುವುದು ಭಾಷಾ ಬಾಂಧವ್ಯದ ಬೆಸುಗೆಯನ್ನು ಬಿಂಬಿಸುವದು, ಹುಮನಾಬಾದಿನ ಹಿರಿಯ ಸಾಹಿತಿಗಳು, ಜಾನಪದ ಸಂಶೋಧಕರಾದ ಶ್ರೀ ಕಾಶೀನಾಥ ರೆಡ್ಡಿಯವರು ಈ ಕೃತಿಗಳನ್ನು ಸಂಪಾದಿಸಿರುವರು.

ಸಣ್ಣಾಟವನ್ನು ರಚಿಸಿ, ಸಂಗೀತ ಅಳವಡಿಸಿ ಡಪ್ಪಿನೊಂದಿಗೆ ಹಾಡುವದು ಮತ್ತು ಪ್ರದರ್ಶನ ಏರ್ಪಡಿಸುವದು, ಎಲ್ಲವನ್ನೂ ನಾಟಕ ಕಲಿಸುವ ಮಾಸ್ತರರೆ ಆಗಿದ್ದರಿಂದ ಇವರು ಬಹಳ ಮುಖ್ಯವಾಗುತ್ತಿದ್ದರು. ಇಲ್ಲಿ ಮಹಾಮಹಿಮರ ಜೀವನದ ಆಗುಹೋಗುಗಳನ್ನು ಬಿತ್ತರಿಸುವದು ಮತ್ತು ವಾಸ್ತವತೆಯೆ ಪ್ರಧಾನವಾಗಿ ಇರುವದರಿಂದ ಭವ್ಯವಾದ ವೇಷಭೂಷಣ, ಅಬ್ಬರದ ಕುಣಿತವಿರದೇ, ಶರಣರ ಸಂತರ, ಸಮಾಜ ಬಂಧುಗಳ ಜೀವನವೇ ಕಥಾವಸ್ತುವಾಗಿ ಮೂಡಿ ಬಂದಿವೆ. ಸಣ್ಣಾಟದ ಹಾಡುಗಳು ಜನಪದ ಧಾಟಿಯಲ್ಲಿದ್ದು, ರಂಜಕ ಗುಣ ಹೊಂದಿವೆ. ಸಮಾಜದ ಅಂಕುಡೊಂಕು ತಿದ್ದುವದನ್ನೂ, ತತ್ವಪದದಂತೆ ಸಣ್ಣಾಟಗಳಲ್ಲೂ ಬಳಸಿಕೊಳ್ಳುತ್ತಿದ್ದರು. ಇವರುಗಳಲ್ಲಿ ಪ್ರಮುಖರಾದವರು ರಚಿಸಿದ ಸಣ್ಣಾಟಗಳನ್ನು ಈ ಕೆಳಗಿನಂತೆ ವಿಂಗಡಿಸಬಹುದು.

ಶರಣರಾಟದ ಹೇಮರೆಡ್ಡಿ ಮಲ್ಲಮ್ಮ, ಕಬೀರ ಕಮಲ, ಭೂಕೈಲಾಸ, ಶಿವಶಂಕರ, ಸತ್ವ ಪರೀಕ್ಷೆ, ಮತ್ತು ಚಂದ್ರ ಶಿರೋಮಣಿ ಪ್ರಮುಖವಾಗಿವೆ.

ರಾಜಾನಾಟದ ಮನಚಂದ ರಾಜಾ, ಭಿಕ್ಷುಕ ರಾಜಾ, ಧರ್ಮಪಾಲ ರಾಜಾ, ಅಂಬರ ರಾಜಾ, ನಳ ದಮಯಂತಿ, ಸೋನಾರಂಗಿ ಮುಂತಾದವು.

ದಾಸರಾಟ ದಲ್ಲಿ ಕಬೀರದಾಸ ಆಟಾ, ಕೋಮಟಿಗ್ಯಾನ ಆಟಾ, ಫಕೀರನ ಆಟಾ, ಬಿಚ್ಚುಕಾರನ ಆಟಾ, ಐನಾಪೂರ ಆಟಾ, ಮುಂತಾದವು ಒಳಗೊಂಡಿವೆ.

ಸಾಮಾಜಿಕ ಆಟ ದಲ್ಲಿ ಭಾಗ್ಯಶಾಲಿ, ಸತ್ಯ ಭಗಿಣಿ, ಲೋಕ ಸುಂದರಿ, ಮೈದುನ ಮಾಯಾ, ಗುಣವಂತ, ತೌರ ಮನೆ, ಬಂಧುಪ್ರೇಮ, ಮೀನಾಕ್ಷಿ, ಬಡ ಬಸವಂತ ಮುಂತಾದವುಗಳನ್ನು ದಾಖಲಿಸಬಹುದು.

ಬಸವಕಲ್ಯಾಣ ತಾಲೂಕಿನ ಗೋಕುಳ ಗ್ರಾಮದ ಮಹ್ಮದ್ ಶಿಲಾರಸಾಬ ತತ್ವ ಪದಕಾರರಾಗಿ ಹಿಂದೂ–ಮುಸ್ಲೀಮ ಧರ್ಮ ಸಂಸ್ಕೃತಿಗಳ ಸಮನ್ವಯತೆ ಸಾಧಿಸಿದವರು. ಇವರು ಕಲಿಸಿದ 'ಸ್ನಾಯನಪಾಳ ರಾಜಾ', 'ದಕ್ಷಬ್ರಹ್ಮ', 'ಲವಕುಶ' ಮುಂತಾದವು ಪ್ರಸಿದ್ಧವಾಗಿವೆ. ಕೋಳಾರ ಗ್ರಾಮದ ಶ್ರೀ ಇಮಾಮಸಾಬರು: ಇವರು ರಚಿಸಿದ ಕೋಮಟಿಗ್ಯಾನ ಆಟ, ಕಬೀರದಾಸನ ಆಟ, ಭಾಗ್ಯ ಶಾಲಿ ಆಟ, ಸತ್ಯ ಭಗಿಣಿ ಆಟ, ಐನಾಪೂರ ಆಟ, ಮೈದುನ ಮಾಯಾ ಮುಂತಾದವು ತುಂಬ ಪ್ರಸಿದ್ಧವಾಗಿವೆ. ಚಳಕಾಪೂರದ ಬಸಪ್ಪಾ ಬೆಟ್ಟದ ಅವರು ರಚಿಸಿದ ಅಂಬರ ರಾಜಾ, ಮನಚಂದ ರಾಜಾನ ಆಟ, ಧರ್ಮಪಾಲ ರಾಜಾನ ಆಟ, ಸೋನಾರಂಗಿ ಆಟ ಹೀಗೆ ಹಲವಾರು ಸಣ್ಣಾಟಗಳನ್ನು ರಚಿಸಿ ಎಲ್ಲೆಡೆ ಪ್ರದರ್ಶನ ನೀಡಿರುವರು. ಬೇಲೂರು ಬಸವಂತ ರಾಯರು ರಚಿಸಿದ ಹೇಮರೆಡ್ಡಿ ಮಲ್ಲಮ್ಮ ಸಣ್ಣಾಟ, ನರೋಣಾ ಕಾಶಿನಾಥ ರಚಿಸಿದ ಕಬೀರ ಕಮಲ ಆಟ, ಗೋರ್ಟಾ (ಬಿ)ಯ ಶಿವಲಿಂಗಯ್ಯಾ ಸ್ವಾಮಿಗಳ ಸತ್ವಪರೀಕ್ಷೆ, ಉಚ್ಚಾ ಚೆನ್ನಬಸಪ್ಪಾ ಸ್ವಾಮಿಯವರು ರಚಿಸಿದ ಲೋಕ ಸುಂದರಿ, ಶಿವಶಂಕರ, ಐನಾಪೂರ ಮಾರುತಿಯವರ ಮೈದುನ ಮಾಯಾ, ಗುಣವಂತ, ಮುಂತಾದವು. ಬೇವಿನಚಿಂಚೋಳಿಯ ಗಿರೆಪ್ಪಾ ಜಮಾದಾರರು ಬರೆದ ಮೀನಾಕ್ಷಿ, ಬಡ ಬಸವಂತ, ತವರುಮನೆ, ಬಂಧು ಪ್ರೇಮ, ಹೀಗೆ ಹಲವಾರುಕೃತಿ ರಚಿಸಿ ಪ್ರದರ್ಶನ ನೀಡಿರುವರು. ಕೋಸಮ್ ದ ಹಣಮಂತಪ್ಪಾ ಬಿರಾದಾರರು ಐನಾಪೂರ ಆಟಾ, ಫಕೀರನ ಆಟಾ, ಬಿಚ್ಚುಕಾರನ ಆಟಾ, ನಳದಮಯಂತಿ, ಚಂಪಾವತಿ, ಹೀಗೆ ಹಲವಾರು ಡಪ್ಪಿನಾಟಗಳನ್ನು ಕಲಿಸಿ ಈ ಪ್ರಕಾರವನ್ನು ಜೀವಂತವಾಗಿ ಇಟ್ಟಿರುವರು. ಪಕ್ಕದ ನಾರಯಣಖೇಢ ತಾಲೂಕಿನ ಚಾಪ್ಟಾದ ದಿ. ಮಲ್ಲಪ್ಪಾ ಹಡಪದ ಇವರು ಡಪ್ಪು ಬಾರಿಸುವದರಲ್ಲಿ ನಿಷ್ಣಾತರು, ಮೊಹರಂಗಳಲ್ಲಿ ವೇಷ ಹಾಕಿ ಹಾಸ್ಯ ಮಾಡುವದರೊಂದಿಗೆ, ಬಿಚ್ಚುಕಾರನಾಟ, ಸಾರಂಗಧರ ನಾಟ, ಹೇಮರೆಡ್ಡಿ ಮಲ್ಲಮ್ಮ ನಾಟಕಗಳನ್ನು ಮಾಡುತ್ತಿದ್ದರು ಎಂದು ಇವರ ಮಗನಾದ ತತ್ವಪದಕಾರ ರಘುನಾಥ ಹಡಪದ ಅವರು ನೆನೆಸುವರು. ಔರಾದ ತಾಲೂಕಿನ ನಾಗೂರ (ಬಿ) ಗ್ರಾಮದ ನರಸಿಂಗ ಮಾಸ್ಟರ್ ಇವರು ತಮ್ಮ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಮಾಡಿಸಿದ 'ಸತ್ಯಹರಿಶ್ಚಂದ್ರ', ಧನಪಾಲ ರಾಜಾ, ನೀಲಕಂಠ ರಾಜಾ, ತಾಯಿ ಕರಳು, ಮಡದಿ ಮಾಂಗಲ್ಯ

ಪ್ರಸಿದ್ಧವಾಗಿವೆ. ಸಿಂದಬಂದಗಿಯವರು ಆಡುತ್ತಿದ್ದ ಗೋರಾ ಕುಂಬಾರ ಆಟ, ದುಬಲಗುಂಡಿಯವರು ಆಡುತ್ತಿದ್ದ ಗೋವಾ ಸ್ವಾತಂತ್ರ್ಯ ಸಂಗ್ರಾಮ ಪ್ರಮುಖವಾಗಿವೆ. ಇವುಗಳನ್ನು ಊರಿನ ಜಾತ್ರೆಗಳಲ್ಲಿ ಆಡಿಸುತ್ತಿದ್ದರು. ಜನರು ಗಾಡಿ ಕಟ್ಟಿಕೊಂಡು ಬಂದು ನಾಟಕ ನೋಡಲು ಬರುತಿದ್ದರು.

## ಬಿ) ಬಯಲಾಟಗಳು (ದೊಡ್ಡಾಟಗಳು):

ಬೀದರ ಜಿಲ್ಲೆಯ ರಂಗಭೂಮಿ ಸಮೃದ್ಧವಾಗಿದ್ದು ಬಯಲಾಟ, ಸಣ್ಣಾಟಗಳ ಅಪಾರವಾದ ಸಾಹಿತ್ಯ ಇಲ್ಲಿಮೂಡಿಬಂದಿದೆ. ಅವುಗಳನ್ನು ಸಂಗ್ರಹಿಸುವ ಕ್ಷೇತ್ರ ಕಾರ್ಯ ಮಾಡಿದರೆ, ನಮ್ಮ ಅಮೂಲ್ಯವಾದ ಸಾಹಿತ್ಯವನ್ನು ರಕ್ಷಿಸಿದಂತಾಗುತ್ತದೆ. ಕೊಳ್ಳೂರು ಗ್ರಾಮದ ಶ್ರೀ ಇಮಾಮಸಾಬರು ಇವರಿಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು ರಾಜ್ಯ ಪ್ರಶಸ್ತಿ ನೀಡಿ ಸನ್ಮಾನಿಸಿರುವರು. ಇವರು ರಚಿಸಿ ಪ್ರದರ್ಶಿನ ಮಾಡಿದ, ದ್ರೌಪದಿಯ ವಸ್ತ್ರಾಪಹರಣ, ಐರಾವಣ ಮೈರಾವಣ, ಕನಕಾಂಗಿ ಮುಂತಾದವುಗಳು ಮನೆ ಮಾತಾಗಿವೆ.

ಕೊಳ್ಳೂರಿನ ಶ್ರೀ ಹುಸನಾಸಾಬರು ಬಾಣಾಸುರ ಬಯಲಾಟದಿಂದ ಪ್ರಸಿದ್ಧಿ ಪಡೆದಿರುವರು. ಮತ್ತು ಇವರುಗಳಲ್ಲದೆ, ಕೋಸಮ್ ಗ್ರಾಮದ ಶ್ರೀ ಹಣಮಂತ ಬಿರಾದಾರ, ಹುಲಸೂರಿನ ಶ್ರೀ ಶಂಭು, ಬೇನಚಿಂಚೋಳಿಯ ಶ್ರೀ ಗಿರೆಪ್ಪಾ ಜಮಾದಾರರ 'ದಕ್ಷಬ್ರಹ್ಮ' ನಾಟಕ ಪ್ರಮುಖವಾಗಿವೆ. ಅಲ್ಲದೇ ನಾಟಕದ ಮಾಸ್ತರ ಎಂದು ಪರಿಚಿತರು ಇವರೂ ಸಹ ಹಲವಾರು ಬಯಲಾಟಗಳನ್ನು ಕಲಿಸುತ್ತಿದ್ದರು.

## ಗಂಗಾಳ ಮಂಟಪದ ವಿಶಿಷ್ಟತೆ:

ಮುಚಳಂಬಿಯ ಶ್ರೀ ಗದಿಗೆಯ್ಯಾ ಮಾಸ್ತರರು 'ಕೃಷ್ಣಾರ್ಜುನ ಕಾಳಗ' ದೊಡ್ಡಾಟದಲ್ಲಿ ವಿಶಿಷ್ಟವಾಗಿ ಅಟ್ಟಕ್ಕೆ ಗಂಗಾಳ ಮಂಟಪವನ್ನು ರಚಿಸುತ್ತಿದ್ದರು. ಬಯಲಾಟದ ಅಟ್ಟಕ್ಕೆ ಹಿತ್ತಾಳೆಯ ಗಂಗಾಳಗಳನ್ನು ಕಟ್ಟಿಸುತ್ತಿದ್ದರು. ಪಾತ್ರಗಳು ಕುಣಿದಾಗ ಇವು ನವಿರಾಗಿ ಅಲುಗಾಡಿ ಒಂದಕ್ಕೊಂದು ತಾಗಿ, ಗಂಗಾಳಗಳಿಂದ ಉಂಟಾಗುತ್ತಿದ್ದ ವಿಶಿಷ್ಟ ನಾದ, ಮತ್ತು ಜಗಮಗಿಸುವ ಬೆಳಕಿನಲ್ಲಿ ಥಳಥಳ ಹೊಳೆದು, ಕಿನ್ನರ ಲೋಕ ಸೃಷ್ಟಿಯಾಗುತ್ತಿತ್ತು. ಗಂಗಾಳದ ಗುಂಜಾರವದೊಂದಿಗೆ ಹೊಮ್ಮಿಬರುವ, ವೀರರ ಶೌರ್ಯದ ಮಾತುಗಳಿಗೆ ಠೇಂಕಾರದ ಹಿನ್ನೆಲೆ ಸಂಗೀತವಾಗಿ ಬಯಲಾಟಕ್ಕೆ ರಂಗು ರಂಗೇರಿಸುತ್ತಿತ್ತು. ಜನಪದರ ಮೈಮನಗಳಲ್ಲಿ ಬಯಲಾಟಗಳು ವಿಶಿಷ್ಟ ಛಾಪು ಮೂಡಿಸಿದ್ದು, ಬೀದರ ಜಿಲ್ಲೆಯ ವಿಶೇಷತೆಯಾಗಿದೆ.

ಮೊದಲಿಗೆ ವೀರರಸ ಪ್ರಧಾನವಾದ ಬಯಲಾಟಗಳಾದ ವೀರ ಅಭಿಮನ್ಯು, ಕೀಚಕ ವಧೆ, ಜಯದ್ರಥ, ರಕ್ತರಾತ್ರಿ, ತ್ರಿಪುರ ಸಂಹಾರ, ರಾಮಾಯಣ, ಮಹಾಭಾರತದ

ಪ್ರಸಂಗಗಳನ್ನು ಬಯಲಾಟದಲ್ಲಿ ಬಳಕೆ ಮಾಡುತ್ತಿದ್ದರು. ನಂತರದಲ್ಲಿ ಸಾಮಾಜಿಕ ಪರಿವರ್ತನೆಯ ದ್ಯೋತಕಗಳಾಗಿ ಮೂಡಿಬಂದಂಥವು, ಭಕ್ತಿರಸ ಪ್ರಧಾನವಾದ ಭಕ್ತ ಸಿರಿಯಾಳ, ಮಹಾತ್ಮಾ ಬಸವೇಶ್ವರ, ನೆಲ್ಲೂರು ನಂಬಿಯಕ್ಕ, ಭಕ್ತ ಮಾರ್ಕಂಡೇಯ, ತರದ ಬಯಲಾಟಗಳು ಹಳ್ಳಿ ಹಳ್ಳಿಗಳಲ್ಲಿ ಪ್ರದರ್ಶನಗೊಂಡಿವೆ.

ಬಯಲಾಟದ ಮಾಸ್ತರರೆಂದೇ ಪ್ರಖ್ಯಾತಗೊಂಡ ಶ್ರೀ ಅಮೀರ ಅಲಿ ಚಟ್ನಾಳ, ಶ್ರೀ ಬಾಬುರಾವ  ನಾಗವಾರ, ಕಟಕ ಚಿಂಚೋಳಿಯ ಮಹಾರುದ್ರಯ್ಯಾ ಡಾಕುಳಗಿ, ಶ್ರೀ ನಾಗಶೆಟ್ಟಿ ಶೀಲವಂತ, ರಾಜೆಶ್ವರದ ಶ್ರೀ ಅಣ್ಣೆಪ್ಪಾ ಮಾಸ್ಟರ್ (ಅಂಧ ಕಲಾವಿದರು), ನಿರ್ಣಾದ ರಾಮಚಂದ್ರಪ್ಪಾ ಬಹುರೂಪಿ ಮುಂತಾದವರು ಪ್ರಮುಖರಾಗಿದ್ದಾರೆ.

ಔರಾದ ತಾಲೂಕಿನ ಜೀರ್ಗಾದ ದೊಡ್ಡಾಟ ಮಾಸ್ತರರಾಗಿ, ಪಾತ್ರಧಾರಿಗಳಾಗಿ ಸೇವೆ ಸಲ್ಲಿಸುತ್ತಿರುವ ಹಿರಿಯರಾದ ಗುರುನಾಥ ಉಂಗುರಶೆಟ್ಟಿ ಇವರು ದೇವಿ ಆಟಾ, ಬಸವೇಶ್ವರ ದೊಡ್ಡಾಟ  ಆಡಿಸುತ್ತಾರೆ. ಇವರಿಗೆ ಕರ್ನಾಟಕ ಜಾನಪದ ಅಕಾಡೆಮಿ ಪ್ರಶಸ್ತಿ ನೀಡಿ ಗೌರವಿಸಿದೆ. ಇವರ ಒಂದು ತಂಡ ಜೀರ್ಗಾದಲ್ಲಿ ದೊಡ್ಡಾಟ ಮಾಡುವದರಲ್ಲಿ ನಿರತವಾಗಿದೆ. ಮತ್ತು ಗುರಪ್ಪಾ ಕೋಟೆ, ರಾಮಶೆಟ್ಟಿ ಬಂಬಳಗೆ, ಲಕ್ಷ್ಮಣರಾವ ಬಂಬಳಗೆ, ಪ್ರಖ್ಯಾತರಾಗಿರುವರು. ಸಾಮಾಜಿಕ ನಾಟಕ, ಶರಣರ ಕುರಿತ ನಾಟಕಗಳಲ್ಲಿ ನರಸಿಂಗರಾವ ದೇಸಾಯಿ, ಹಾಗೂ ಮುಧೋಳದ ಹಾವಗಿರಾವ ವಟಗೆ ಅವರು, ಚಂದ್ರಕಾಂತ ಬಿಚಕುಂದೆ ಅವರು ಎದ್ದು ಕಾಣುತ್ತಾರೆ. ಹೆಡಗಾಪೂರದ ಶಿವರಾಮ ಎಡಗೆ ಮಾಸ್ಟರ್ ಜೊತೆಗಾರರಾದ ಶಿವಮೂರ್ತೆಪ್ಪಾ ಕುಣಕೇರಿ, ವೀರಭದ್ರಪ್ಪಾ ಕುಣಕೇರಿ, ಚೆನ್ನಪ್ಪಾ ಎರನಾಳೆ, ಸಿದ್ರಾಮ ಕರೆ, ಸಂತಪೂರದ ಶಿವಮೂರ್ತಯ್ಯಾ ಸ್ವಾಮಿ, ಕೌಠಾ(ಬಿ)ಯ ಸಿದ್ರಾಮಯ್ಯಾ ಹಿರೇಮಠ ಮಾಸ್ಟರ್, ಭಾಲ್ಕಿ ತಾಲೂಕಿನ ಹಜನಾಳದ ಸನ್ಮುಕಪ್ಪನವರು ಮುಂತಾದವರು ಜಿಲ್ಲೆಯ್ಯಾದ್ಯಂತ ಬಯಲಾಟಗಳನ್ನು ಮಾಡಿಸಿರುವರು.

## ಸಿ) ಕೋಲಾಟ:

ಬೀದರ ಜಿಲ್ಲೆಯಲ್ಲಿ ಕೋಲಾಟವು ಸಹ ರಂಗ ಪ್ರಯೋಗವಾಗಿಯೇ ಜನಪ್ರಿಯವಾಗಿದೆ. ಕೋಲಾಟ  ಪ್ರಸಂಗಗಳು, ಹಾಡು, ಸಾಹಿತ್ಯ, ಸಂಗೀತ, ನೃತ್ಯಗಳಿಂದ ಕೂಡಿದ ಕೋಲಾಟವು ರಾತ್ರಿಯಲ್ಲಿ ಆಟ ಮಾಡುವರು, ಅವರು ಹಾಕುವ ವೇಷ ಭೂಷಣಗಳು, ಅವರ ಕುಣಿತ ನೋಡಿಯೇ ಆನಂದಿಸಬೇಕು. ಲಂಬಾಣಿ ಹೆಣ್ಣುಮಕ್ಕಳು ಹಾಕುವ ಕೋಲಾಟ ತುಂಬ ಪ್ರಸಿದ್ಧಿ ಪಡೆದಿದೆ. ಅಪರೂಪದ ಜಡೆ ಕೋಲಾಟ ಹಗ್ಗವನ್ನು ಬಳಸಿ ಆಡುವ ತಂಡಗಳು  ಜನ ಮೆಚ್ಚುಗೆ ಪಡೆದಿವೆ.

ಕಲಾವಿದರು ಹಾಕುವ ಪಾತ್ರಗಳು ಜೋಡಿಯಲ್ಲಿರುವುದು. ಕೃಷ್ಣ–ರಾಧಾ, ಶಿವ–

ಪಾರ್ವತಿ, ರಾಮ–ಸೀತಾ, ಒಕ್ಕಲಿಗ–ಒಕ್ಕಲಗಿತ್ತಿ, ಮಾರವಾಡಿ–ಸೇಠಾಣಿ, ಸರದಾರಜಿ–ಸರದಾರಣಿ, ಮುಸ್ಲಿಂ ಗಂಡು–ಬುರಖಾ ಹೆಣ್ಣು ಹೀಗೆ ಸಮಾಜದ ಎಲ್ಲಾ ತರಹದ ವೇಷಭೂಷಣಗಳನ್ನು ಹಾಕಿ, ಕೈಯಲ್ಲಿ ಕೋಲು ಹಿಡಿದು, ತಾಳ ಲಯಬದ್ಧತೆಯಿಂದ ಕುಣಿತದ ಹೆಜ್ಜೆ ಹಾಕುವರು. ಕೋಲಾಟವನ್ನು ಕಲಿಸುವ ಮಾಸ್ತರನ್ನು ಕರೆಸಿ, ತಾಲೀಮು ಮಾಡಿ ಪ್ರದರ್ಶನಕ್ಕೆ ಅಣಿಯಾಗುವರು. ಶ್ರೀ ನಾಗಪ್ಪಾ ದಾಸರೆ ಬೀದರ, ಶ್ರೀಪತಿ ಖಡ್ಕೆ ಸಂತಪೂರ, ಪ್ರತಾಪನಗರದ ಮಾಣಿಕಪ್ಪಾ ಸಂಗೋಳಗಿ, ಕಮಲನಗರದ ನರಸಪ್ಪಾ ಹಡಪದ, ಕೋಸಮ್‌ದ ಹಣಮಂತಪ್ಪಾ ಬಿರಾದಾರ, ಕಾಶಿನಾಥ ಮೇತ್ರೆ ಮುಂತಾದವರು ಪ್ರಸಿದ್ಧರಾಗಿರುವರು. ಇಲ್ಲಿನ ಕೋಲಾಟದ ಧಾಟಿಯು ಬೇರೆಲ್ಲ ಕಡೆಗಿಂತ ಭಿನ್ನವಾಗಿದ್ದು, ತನ್ನದೇ ಆದ ಸ್ವಂತಿಕೆಯನ್ನು ಉಳಿಸಿ ಕೊಂಡಿದೆ. ಭಾಲ್ಕಿಯ ಡಾ. ಸೋಮನಾಥ ನುಚ್ಚಾ ಅವರು ಬೀದರ ಜಿಲ್ಲೆಯ ಕೋಲಾಟ ಕುರಿತು ಸಂಶೋಧನೆ ಮಾಡಿ ಪ್ರಬಂಧ ಮಂಡಿಸಿರುವರು.

●

# ಬೀದರ ಜಿಲ್ಲೆಯ ಅರೆವೃತ್ತಿ ರಂಗಭೂಮಿ (ಹವ್ಯಾಸಿ)

## ಕೆಳಗಲ್ಲಿಯ ರುದ್ರೇಶ್ವರ ನಾಟ್ಯ ಸಂಘ ಗೋರ್ಟಾ.ತಾ.ಬಸವಕಲ್ಯಾಣ:

೧೯ನೇ ಶತಮಾನದ ಪೂರ್ವಾರ್ಧದಲ್ಲಿ, ಬಸವಕಲ್ಯಾಣ ತಾಲೂಕಿನ ಗೋರ್ಟಾ ಗ್ರಾಮ, ಸಂಗೀತ ಕಲೆಗಳ ಅಗ್ರಹಾರವಾಗಿತ್ತೆಂದು ತಿಳಿದುಬರುವದು. ಶ್ರೀ ಶಿವಲಿಂಗಯ್ಯಾ ಮಠಪತಿಯವರು ಈ ಭಾಗದಲ್ಲಿ ಪ್ರಥಮ ಬಯಲಾಟವನ್ನು ಬರೆದು ರಂಗಕ್ಕೆ ತಂದವರು. ಗೋರ್ಟಾದ 'ಕೆಳಗಲ್ಲಿಯ ರುದ್ರೇಶ್ವರ ನಾಟ್ಯ ಸಂಘ'ಕ್ಕೆ ಶತಮಾನದ ಇತಿಹಾಸವಿದೆ. ಸದ್ಯ 'ವಿಶ್ವ ಶಾಂತಿ ಸೇವಾ ನಾಟ್ಯ ಸಂಘ'ದ ಹೆಸರಿನಲ್ಲಿ ಪ್ರತಿವರ್ಷವೂ ನಾಟಕ ಮಾಡುವದನ್ನು ಮುಂದುವರಿಸಿಕೊಂಡು ಬಂದಿದ್ದಾರೆ. ಮತ್ತು ಗೋರ್ಟಾದ 'ಮೇಲಗಲ್ಲಿಯ ಬಸವೇಶ್ವರ ನಾಟ್ಯ ಸಂಘದ', ಶ್ರೀ ವಿರುಪಾಕ್ಷಯ್ಯಾ ಸ್ವಾಮಿ ಶಿವಲಿಂಗಯ್ಯಾ ಮಠಪತಿ (ಜನನ-೧೯೨೯) ಮೇಲಗಲ್ಲಿಯವರಿಂದಲೂ ಪ್ರತಿ ವರ್ಷ ನಾಟಕಗಳನ್ನು ಮಾಡಿಸುತ್ತಿರುವರು.

ಗೋರ್ಟಾದ ಹುತಾತ್ಮ, ರಾಚೋಟಿ ಸ್ವಾಮಿಗಳು (ರಜಾಕಾರರೊಂದಿಗೆ ನಡೆದ ಹೋರಾಟದಲ್ಲಿ ಹುತಾತ್ಮರಾದವರು, ಗೋರ್ಟಾವನ್ನು ಕರ್ನಾಟಕದ ಜಲಿಯನ್ ವಾಲಾಬಾಗಗೆ ಹೋಲಿಸುವರು), ನೂರೊಂದಪ್ಪ ಗವಯಿಗಳು, ವೇದಮೂರ್ತಿ ವಿರುಪಾಕ್ಷಯ್ಯಾ ಸ್ವಾಮಿಗಳು, ಪ್ರೊ. ಸಿದ್ರಾಮಯ್ಯಾ ವಿರುಪಾಕ್ಷಯ್ಯಾ ಮಠಪತಿ (ಜನನ-೧೯೩೮) ಮುಂತಾದವರು ಶಾಸ್ತ್ರೀಯ ಸಂಗೀತದ ಘಟಾನುಘಟಿಗಳು. ಜೊತೆಗೆ ಬಯಲಾಟ, ಸಣ್ಣಾಟಗಳಲ್ಲಿ ಶುದ್ಧ ಶಾಸ್ತ್ರೀಯ ಹಿಂದುಸ್ಥಾನಿ ಸಂಗೀತವನ್ನು ಬಳಸಿಕೊಂಡು, ಬಯಲಾಟಗಳಿಗಳಿಗೆ ಕಳೆ ತಂದುಕೊಟ್ಟವರು. ಒಂದೊಂದು ಹಾಡುಗಳೂ ಚೀಜ ಮಾದರಿಯಲ್ಲಿ ಇಂದಿಗೂ ಜನ ಮಾನಸದಲ್ಲಿ ಹಸಿರಾಗಿರುವವು. ಲಿಂಗೈಕ್ಯ. ರಾಚೋಟಿ ಸ್ವಾಮಿಗಳು 'ರೇಣುಕ ವಿಜಯ'ದ ಅಪೂರ್ಣ ಹಸ್ತಪ್ರತಿಯನ್ನು ಗ್ರಂಥಸ್ತ ಮಾಡಿ, ಅದರಲ್ಲಿ ಸ್ವರಚಿತ ಪದ್ಯಗಳನ್ನು ಸೇರಿಸಿರುವರು. ಹತ್ತಾರು ಬಾರಿ ಈ ನಾಟಕ ಪ್ರದರ್ಶನ ಮಾಡಿಸಿರುವರು.

'ಹೇಮರಡ್ಡಿ ಮಲ್ಲಮ್ಮ' ನಾಟಕದಲ್ಲಿ ಮಲ್ಲಮ್ಮನ ಪಾತ್ರದಲ್ಲಿ ವಿರುಪಾಕ್ಷಯ್ಯಾ ಸ್ವಾಮಿಯವರು ತನ್ಮಯತೆಯಿಂದ ಅಭಿನಯಿಸುತ್ತಿದ್ದರು. ನಾಟಕಗಳ ರಂಗ ಪರಿಕರ ನಿರ್ಮಿಸುತ್ತಿದ್ದ ಗೋರ್ಟಾದ ಗುರಪ್ಪಾ ಹೂಗಾರ, ಧೂಳಪ್ಪಾ ಬಡಿಗೇರ ಇವರು

ಅದ್ಭುತವಾದ ಚಲನಶೀಲತೆಯ ರಂಗಮಂಚವನ್ನು ನಿರ್ಮಿಸುತ್ತಿದ್ದರು. ಶಿವನು ಕೃಪಾಶೀರ್ವಾದ ಮಾಡಿದಾಗ 'ಬೀಸುವ ಕಲ್ಲು' ತಿರುಗುವದು, ಲಿಂಗದಲ್ಲಿ ಮಲ್ಲಯ್ಯನ ಉದ್ಭವವಾಗುವದು ಇಂತಹ ಚಮತ್ಕಾರಿಕೆಯನ್ನು ಅಟ್ಟದ ಮೇಲೆ ನೈಜವಾಗಿ ಮೂಡಿಸಿದಾಗ ಜನ ಸಾಮಾನ್ಯರು ಇದನ್ನು ಕಂಡು ದಂಗಾಗುತ್ತಿದ್ದರು.

ಮನೆಯನ್ನೇ ನಾಟಕದ ದೊಡ್ಡಿಯನ್ನಾಗಿ ಮಾಡಿಕೊಂಡು, ರಾತ್ರಿಯೆಲ್ಲಾ 'ಹಾಡಕ್ಕಿ' ಎಂದರೆ ರಂಗ ತಾಲೀಮು ಮಾಡುತ್ತಿದ್ದರಂತೆ. 'ಲಂಕಾದಹನ' ಬಯಲಾಟದಲ್ಲಿ ಹನುಮಂತನ ಬಾಲಕ್ಕೆ ಹಚ್ಚಿದ ಬೆಂಕಿಯಿಂದ ಲಂಕಾ ದಹನವನ್ನು ತೋರಿಸುವಾಗ, ನೈಜವಾಗಿ ಹನುಮಂತನ ಬಾಲಕ್ಕೆ ಬೆಂಕಿ ಹಚ್ಚಿ, ಅಟ್ಟದ ತುಂಬೆಲ್ಲಾ ರಾಕ್ಷಸರನ್ನು ಅಟ್ಟಾಡಿಸುತ್ತಿದ್ದುದು ಅದ್ಭುತ ಪರಿಣಾಮ ಬೀರುತ್ತಿತ್ತು. ಜೊತೆಗೆ ರಜಾಕಾರರ ದಬ್ಬಾಳಿಕೆಯನ್ನು ರಂಗದ ಮೇಲೆ ತಂದು 'ಹದಗೆಟ್ಟ ಹೈದ್ರಾಬಾದ್' ಎಂಬ ನಾಟಕವನ್ನು ಮಾಡುತ್ತಿದ್ದರು. ಸಾಮಾಜಿಕ ನಾಟಕಗಳಾದ 'ರತ್ನಮಾಂಗಲ್ಯ'ದಲ್ಲಿ ಸಹೋದರರಾದ ಪ್ರೊ. ಸಿದ್ದರಾಮಯ್ಯಾ ಮಠಪತಿಯವರು ಶಕೀಲಾ ಹೆಣ್ಣಿನ ಪಾತ್ರ ಮಾಡುತ್ತಿದ್ದರು. ಬದುಕು ಬಂಗಾರವಾಯಿತು, ಅಣ್ಣ ತಂಗಿ, ನಾಟಕಗಳನ್ನೂ ಪ್ರದರ್ಶನ ಮಾಡಿರುವರು. ಗೌರಿ ಗೆದ್ದಳು ನಾಟಕದಲ್ಲಿ ಗೌರಿ ಪಾತ್ರವನ್ನು ತಾವೇ ವಹಿಸುತ್ತಿದ್ದರು, ಎಂದು ಗೋರ್ಟಾದ ಡಾ. ರಾಜಶೇಖರ ಸ್ವಾಮಿಗಳು (ಜನನ–೧೯೬೭) ಹಳೆಯ ಮಧುರ ನೆನಪನ್ನು ಬಿಚ್ಚಿಡುವರು.

## ದಿ. ಮಹಾರುದ್ರಯ್ಯಾ ಕರಬಸಯ್ಯಾ ಡಾಕುಳಗಿಯವರು, ಖಟಕಚಿಂಚೋಳಿ ತಾ. ಭಾಲ್ಕಿ:

ಭಾಲ್ಕಿ ತಾಲೂಕಿನ ಖಟಕಚಿಂಚೋಳಿಯ ದಿ. ಮಹಾರುದ್ರಯ್ಯಾ ಕರಬಸಯ್ಯಾ ಡಾಕುಳಗಿಯವರು (ಜನನ–ಸುಮಾರು ೧೯೦೦) ಸ್ವತಃ ಸಂಗೀತಗಾರರಾಗಿದ್ದ ಇವರು, ಅಂದಿನ ದಿನಗಳಲ್ಲಿ ನಡೆಯುತ್ತಿದ್ದ ಬಯಲಾಟಗಳಿಂದ ಪ್ರಭಾವಿತರಾಗಿ, ಗೆಳೆಯರೊಂದಿಗೆ ಕೂಡಿಕೊಂಡು ಹುಲಕುಂಟಿ ಶಾಂತಲಿಂಗೇಶ್ವರ ಜಾತ್ರೆಯಲ್ಲಿ, ಹಬ್ಬ ಹರಿದಿನಗಳಲ್ಲಿ ತಾವೇ ನಾಟಕಗಳನ್ನು ಕಲಿಸಲು ಪ್ರಾರಂಭಿಸಿದರು. ಗ್ಯಾಸ ಲೈಟಿನ ಬೆಳಕಿನಲ್ಲಿ ಎತ್ತರವಾದ ರಂಗ ಮಂಟಪದ ಮೇಲೆ, ಮಿಂಚುವ ಪರದೆಗಳ ಮಧ್ಯೆ ಕಿರೀಟ, ಭುಜಕೀರ್ತಿಗಳು, ವೇಷ ಭೂಷಣಗಳು, ಜೊತೆಗೆ ತಬಲಾ, ಪೇಟಿ, ಚಳ್ಳಂಗಳ ಸಂಗೀತದೊಂದಿಗೆ ಬೇರೆಯದೇ ಲೋಕಕ್ಕೆ ಸೆಳೆದೊಯ್ಯುತ್ತಿದ್ದ ದೊಡ್ಡಾಟಗಳಾದ ಜಯದ್ರಥ, ಕೀಚಕನ ವಧೆ, ವೀರ ಅಭಿಮನ್ಯು, ರಕ್ತರಾತ್ರಿ, ಪಾರಿಜಾತ ಮುಂತಾದವು ಪೌರಾಣಿಕ ನಾಟಕಗಳು ಮೂಡಿಬಂದವು.

ಭಕ್ತಿ ಪ್ರಧಾನ ನಾಟಕಗಳಾದ ಭಕ್ತ ಸಿರಿಯಾಳ, ಭಕ್ತ ಮಾರ್ಕಂಡೇಯ, ನೆಲ್ಲೂರು ನಂಬಿಯಕ್ಕ, ಹೇಮರಡ್ಡಿ ಮಲ್ಲಮ್ಮ, ಮಹಾತ್ಮಾ ಬಸವೇಶ್ವರ ನಾಟಕಗಳು, ನಂತರದಲ್ಲಿ

ಸಾಮಾಜಿಕ ನಾಟಕಗಳಾದ ಲಕ್ಷ್ಮಿ, ಅಣ್ಣ ತಂಗಿ ಮುಂತಾದವುಗಳನ್ನು ನೋಡಿದ ಜನ ಇಂದಿಗೂ ನೆನೆಸುವರು. ಇವರ ಜೊತೆಗೆ ನಾಗಶೆಟ್ಟಿ ಶಿಲವಂತ ಪೇಟಿ ವಾದಕರು ಶಿವಪ್ಪಾ ಕುಂಬಾರ ತಬಲಾವಾದಕರು, ಸರಫುದ್ದೀನ, ಇಸ್ಮೈಲಸಾಬ ಹಾಡುಗಾರ ರಾಗಿದ್ದರು. ಸುಮಾರು ೭೫ ವರ್ಷಗಳ ತುಂಬು ಜೀವನ ನಡೆಸಿದ ಇವರು ೧೯೭೪ರಲ್ಲಿ ದೈವಾಧೀನರಾದರು. ನಾಟಕ ರತ್ನರೆಂದೇ ಜನಮನದಲ್ಲಿ ಉಳಿದುಕೊಂಡಿರುವರು.

## ದಿ. ಶ್ರೀ ಗುರಪ್ಪಾ ಚನ್ನಪ್ಪಾ ನಾನಕೇರಿ, ಬೀದರ:

ಬೀದರಿನ ಸಂಗೀತ ಕಲಾವಿದರಾದ ದಿ. ಶ್ರೀಗುರಪ್ಪಾ ಚನ್ನಪ್ಪಾ ನಾನಕೇರಿ (೧೯೦೦-೧೯೭೩) ಇವರು ನಾಟಕಗಳನ್ನು ಕಲಿಸುವ ಮಾಡಿಸುವ ಮಾಸ್ಟರ್ ಆಗಿದ್ದರು. ನಾಟಕಗಳ ಎಲ್ಲ ಪರಿಕರಗಳನ್ನೂ ಸಂಗ್ರಹಿಸಿ ಬಾಡಿಗೆಗೆ ಕೊಡುತ್ತಿದ್ದರು. ನಾಟಕಗಳ ಪರದೆ, ತಬಲಾ, ಕಾಲುಪೇಟಿ, ಭುಜಕಟ್ಟು, ಕಿರೀಟ, ಅಂಗವಸ್ತ್ರ, ಖಡ್ಗಗಳು, ತಲವಾರಗಳು ಹೀಗೆ ಎಲ್ಲ ತರದ ಪರಿಕರಗಳನ್ನು ಇಟ್ಟುಕೊಂಡವರು. ಇವರು ಮಾಡಿಸಿದ ನಾಟಕಗಳಲ್ಲಿ ರೋಹಿಣಿ ಬಹಳ ಪ್ರಸಿದ್ಧವಾಗಿತ್ತು. ಚೌಬಾರಾ ರಸ್ತೆಯಲ್ಲಿರುವ ದೇವಡಿ ಎಂಬ ಖಾಲಿ ಜಾಗದಲ್ಲಿ ಮಾಡಿಸಿದಾಗ ಆಗಿನ ಲಕ್ಷ್ಮಿ, ಚಿತ್ರಾ ಚಿತ್ರಮಂದಿರಗಳು ನಾಟಕ ಮುಗಿಯುವವರೆಗೆ ಬಂದ ಇರುತ್ತಿದ್ದವಂತೆ. ಮತ್ತು ಕುರುಕ್ಷೇತ್ರ, ರಾಮವಿಜಯ, ಕೀಚಕವಧೆ ಮುಂತಾದವುಗಳು ಪ್ರಖ್ಯಾತವಾಗಿದ್ದವು.

ಗೋರನಳ್ಳಿಯಲ್ಲಿ ಬಸವೇಶ್ವರ ನಾಟಕ ಪ್ರತಿ ವರ್ಷ ಆಡಿಸುತ್ತಿದ್ದರು. ಚಿಮಕೋಡ, ಚಿಲ್ಲರಗಿ, ರತನಾಪೂರ, ಇಮಾಮಬಾದ, ಕಾರಾಮುಂಗಿ, ಕಪಲಾಪೂರ, ಹಳ್ಳದಕೇರಿ, ಕುಂಬಾರಗೇರಿಗಳಲ್ಲಿ ೧೯೪೦ರಿಂದ ೧೯೭೦ ರವರೆಗೆ ನಾಟಕಗಳನ್ನು ಮಾಡಿಸಿರುವರು. ಇವರ ಶಿಷ್ಯರಾದ ಅಮೀರಲಿ ಚಿಟ್ನಾಳ, ಬಸವಣ್ಣಪ್ಪಾ ಸಂಗಮ, ರಂಜೇರಿಯ ಶಿವರಾಮ ಪಾಂಚಾಳ, ಕಮಾಲನಗರದ ಫತೆ ಅಹಮ್ಮದ್ ಮಾಸ್ತರ, ಭಂಗೂರನ ರಘುನಾಥ ಮಾಸ್ತರ, ನೌಬಾದನ ಮಲ್ಲಿಕಾರ್ಜುನ ಜೊನ್ನಿಕೇರಿ, ಚಿಂತಾಕಿಯ ಆಗಮಯ್ಯಾ ಮಾಸ್ತರ ಮತ್ತು ತಬಲಾದಲ್ಲಿ ಬಸವರಾಜ ನಾನಕೇರಿ, ಹುಮನಾಬಾದ ಘಾಟಬೋರಾಳನ ಕೇಶವರಾವ ವಾಘಮಾರೆ, ಏಕನಾಥ ಕಪಲಾಪುರೆ, ಅಂಧ ಕಲಾವಿದರಾದ ತುಕಾರಾಮ, ಹಾರೂರಗೇರಿಯ ದತ್ತಾತ್ರೇಯ ಗೋಂಧಳಿ, ಭಾಲ್ಕಿಯ ಭೀಮಾಶಂಕರ ಮುಂತಾದವರು ಪ್ರಖ್ಯಾತರಾಗಿರುವರು. ಇವರ ಪುತ್ರರಾದ ಸಂಗೀತ ಕಲಾವಿದರಾದ ಜಗನ್ನಾಥ ಗುರಪ್ಪಾ ನಾನಕೇರಿಯವರು ಸರಸ್ವತಿ ಸಂಗೀತ ಪರಿಕರಗಳ ಭಂಡಾರವನ್ನು ನಡೆಸುತ್ತಿದ್ದು, ತಬಲಾ, ಹಾರ್ಮೋನಿಯಂ ಮುಂತಾದ ಸಂಗೀತ ಪರಿಕರಗಳ ಮಾರಾಟ ಮತ್ತು ರಿಪೇರಿಯ ಕಾರ್ಯ ಮಾಡುತ್ತಿರುವರು.

## ಶತಾಯುಷಿ ದಿ ಶ್ರೀ ಸಂಗ್ರಾಮಪ್ಪಾ ಹಾವಪ್ಪಾ ಪಾಟೀಲರು ಹಾರೂರಗೇರಿ, ಬೀದರ:

ಬೀದರಿನ ಹಾರೂರಗೇರಿಯಲ್ಲಿ ೧೯೪೦ರಿಂದಲೇ ಹಿರಿಯರಾದ ಶತಾಯುಷಿ ಶ್ರೀ ಸಂಗ್ರಾಮಪ್ಪಾ ಹಾವಪ್ಪಾ ಪಾಟೀಲರು ಬಸವಜಯಂತಿಯನ್ನು ಪ್ರತಿವರ್ಷ ವಿಜೃಂಭಣೆಯಿಂದ ಆಚರಿಸುತ್ತ ಬಂದಿರುವರು. ಅದರ ಅಂಗವಾಗಿ, 'ಜಗಜ್ಯೋತಿ ಮಹಾತ್ಮಾ ಬಸವೇಶ್ವರ' ನಾಟಕದಲ್ಲಿ ಬಸವೇಶ್ವರರ ಪಾತ್ರವನ್ನು ೪೦ ವರ್ಷಗಳಿಂದ ಮಾಡಿದ್ದು ದಾಖಲೆಯೇ ಆಗಿದೆ. ಇವರ ಜೊತೆಗೆ ಬಿಜ್ಜಳನಾಗಿ ಚನ್ನಪ್ಪಾ ಪಾಟೀಲ ಭಾಗವಹಿಸುತ್ತಿದ್ದರು. ಗುರಪ್ಪಾ ಮಾಸ್ಟರ್ ತಲೋಡಿಯವರು ನಾಟಕಕ್ಕೆ ಸಂಗೀತ ನೀಡುತ್ತಿದ್ದರು. ಮತ್ತು ಕೌಟುಂಬಿಕ, ನೀತಿಬೋಧೆಯ, ಸಾಮಾಜಿಕ ನಾಟಕಗಳನ್ನು ಮಾಡಿಸುತ್ತಿರುವ, ಖೇಳಗಿಯ ಬೆಳೆಂಬಗಿ ಶರಣಪ್ಪಾ, ಕಾಳಮದರ್ಗಿಯ ಶರಣಪ್ಪಾ ಮಾಸ್ತರ, ಕಪಲಾಪೂರದ ಕಲ್ಯಾಣರಾವ ಮಾಸ್ತರ್, ಬೀದರಿನ ಸಂಗಪ್ಪಾ ಮಾಸ್ತರ, ಹುಮನಾಬಾದನ ಶ್ರೀ ಕೇಶವರಾವ ವಾಘಮಾರೆ, ಭಾಲ್ಕಿಯ ಶ್ರೀ ಶೇಖ ಹನ್ನುಮಿಯ್ಯಾ ಮಾಸ್ತರ, ಮುಂತಾದವರು ರಂಗಸೇವೆ ಮಾಡಿದ್ದು ಕಂಡುಬರುವದು.

ನಾಟಕಗಳಿಗೆ ಸಂಗೀತ ಸಂಯೋಜನೆ ಮಾಡುವ ಸಂಗೀತಗಾರರು, ನಾಟಕದ ಮಾಸ್ತರರಾಗಿ ನಾಟಕಗಳನ್ನು ಕಲಿಸುವದರಲ್ಲಿ, ಮಾಡಿಸುವದರಲ್ಲಿ ಇವರ ಸೇವೆ ಶ್ಲಾಘನೀಯವಾಗಿದೆ. ದೇಶಾಂಶ ಹುಡುಗಿಯವರು ಹುಮನಾಬಾದ ತಾಲೂಕಿನ ಹುಡುಗಿ ಗ್ರಾಮದಲ್ಲಿ ಸಾಮಾಜಿಕ ನಾಟಕಗಳಲ್ಲಿ ತಾವೂ ನಟಿಸಿ, ರಂಗಕ್ಕೆ ತಂದಿರುವರು. ಪ್ರಮುಖವಾಗಿ ೧೯೫೦ರಲ್ಲಿ ಗಾಂಧಿ ಟೊಪಿ ನಾಟಕ, ೧೯೫೭ರಲ್ಲಿ ಅಶಿಕ್ಷಿತರ ಗೋಳು ೧೯೫೭ರಲ್ಲಿ ರಕ್ತದೀಪ, ೧೯೫೮ರಲ್ಲಿ ಪ್ರಪಂಚ ಪರೀಕ್ಷೆ, ನಾಟಕಗಳನ್ನು ಯಶಸ್ವಿಯಾಗಿ ಪ್ರಯೋಗಿಸಿದರು. ನಂತರ ಪ್ರೇಮಬಂಧನ, ಅಣ್ಣ ತಮ್ಮ, ಸುನಂದಾ ಹೀಗೆ ಹಲವಾರು ನಾಟಕಗಳನ್ನು ಮಾಡಿದರು.

## ಶ್ರೀ ವೀರಭದ್ರೇಶ್ವರ ನಾಟ್ಯ ಸಂಘ, ಭಾತಂಬ್ರಾ ತಾ. ಭಾಲ್ಕಿ:

ಸುಮಾರು ೫೦ ವರ್ಷಗಳಿಂದ ಔರಾದ ತಾಲೂಕಿನ ಭಾತಂಬ್ರಾ ಗ್ರಾಮದ ಶ್ರೀ ವೀರಭದ್ರೇಶ್ವರ ಜಾತ್ರಾ ಮಹೋತ್ಸವ ಪ್ರತಿವರ್ಷ ಮಾಡಲಾಗುತ್ತಿದೆ. ಬಸವಜಯಂತಿಯ ಪೂರ್ವದಲ್ಲಿ ಈ ಜಾತ್ರೆಯನ್ನು ಹಮ್ಮಿಕೊಳ್ಳುತ್ತಾರೆ. ಐತಿಹಾಸಿಕ, ಧಾರ್ಮಿಕ, ಸಾಮಾಜಿಕ ನಾಟಕಗಳನ್ನು ಪ್ರತಿವರ್ಷ ಇಲ್ಲಿ ಆಡಲಾಗುತ್ತಿದೆ. ಇತ್ತೀಚೆಗೆ ಸ್ತ್ರೀ ಪಾತ್ರಧಾರಿಗಳನ್ನು ಹೊರಗಿನಿಂದ ತಂದು ಸ್ಥಳೀಯ ಯುವಕರು ಪುರುಷ ಪಾತ್ರಧಾರಿಗಳಾಗಿ ನಾಟಕವನ್ನು ಆಡುತ್ತಿದ್ದಾರೆ.

ಮಹತ್ಮಾ ಬಸವೇಶ್ವರ, ರೈತನ ರಕ್ತ, ಭಲೇ ಮಗಳು, ಬಂಗಾರದ ಮನುಷ್ಯ,

ಕುಂಟ ಕುಲಕರ್ಣಿ ತುಂಟ ತಳವಾರ, ತಾಯಿಗೆ ತಕ್ಕ ಮಗ, ಸತ್ಯ ಎಲ್ಲಿದೆ ಕೈಯೆತ್ತಿ ಹೇಳಿ, ರತ್ನಮಾಂಗಲ್ಯ, ಅಣ್ಣತಂಗಿ, ರಕ್ತದೀಪ ಮೊದಲಾದ ನಾಟಕಗಳನ್ನು ಆಡಿದ್ದಾರೆ. ಶ್ರೀ ಬಸಲಿಂಗಯ್ಯ ಸ್ವಾಮಿ ಹುಲಸೂರು, ಶ್ರೀ ರೇವಣಪ್ಪ ಪಾಂಚಾಳ ಮುಚಳಂಬ, ಅಮೀರ ಅಲಿ ಸಿರಕಟ್‌ನಳ್ಳಿ, ನಾಗಶೆಟ್ಟಿ ಹೂಗಾರ ಮದಕಟ್ಟಿ, ರಮೇಶ ದೇಸಾಯಿ ಡೋಣಗಾಂವ, ರಾಜಕುಮಾರ ದೇಸಾಯಿ ಡೋಣಗಾಂವ, ವಿಜಯಕುಮಾರ ಪರಶಣ್ಣೆ ದಾಡಗಿ ಮೊದಲಾದವರು ನಾಟಕ ಮಾಸ್ತರಾಗಿ ಭಾತಂಬ್ರಾ ಗ್ರಾಮದ ಕಲಾವಿದರನ್ನು ಪ್ರೋತ್ಸಾಹಿಸಿ ಬೆಂಬಲಿಸಿದ್ದಾರೆ. ನಾಟಕ ಕಲೆಯನ್ನು ಕಲಿಸಿದ್ದಾರೆ.

ಭಾತಂಬ್ರಾ ಗ್ರಾಮದ ಮನೋಹರ ಸಗರ, ಶಿವಾಜಿ ಸಗರ, ವೈಜಿನಾಥ ಗಾಮಾ, ಕಂಟೆಪ್ಪ ಬೇಲೂರೆ, ಶಿವರಾಜ ಶೀಲವಂತ, ಚೆನ್ನಪ್ಪ ಚಕೋತೆ, ಜಗನ್ನಾಥ ಟೋಕರೆ, ಶಿವಶಂಕರ ಟೋಕರೆ, ವಿಶ್ವನಾಥ ಟೋಕರೆ, ಮನೋಹರ ಖಿರಾಬೆ, ರಘುನಾಥ ಖಿರಾಬೆ, ರಮೇಶ ಖಿರಾಬೆ, ಶ್ರೀಮಂತ ಮೇತ್ರೆ, ಪ್ರಕಾಶ ರಾಮಶೆಟ್ಟೆ, ಸೂರ್ಯಕಾಂತ ಕಳಸದಾಳೆ, ಸಂಗಶೆಟ್ಟಿ ಬಿರಾದಾರ, ಶಿವರಾಜ ಹಲಬುರ್ಗೆ, ಯುವರಾಜ ಬಿರಾದಾರ, ಡಾ. ಸತೀಷ ಸ್ವಾಮಿ, ಸತೀಷ ಭಂಡೆ, ಮಲ್ಲೇಶಿ ದಾಡಗೆ, ಸಂಗಮೇಶ ಸೋಲಾಪೂರೆ, ಸತೀಷ ಬಿರಾದಾರ, ಪರಮೇಶ್ವರ ಸೀತಾ, ನಾಮದೇವ ಜ್ಯಾಂತೆ, ಜಗನ್ನಾಥ ಬಿರಾದಾರ, ಯುವರಾಜ ಬಿರಾದಾರ, ಸಂಗಮೇಶ ಅಪ್ಪಾರಾವ ಬಿರಾದಾರ, ವಿಶ್ವನಾಥ ಉಚಾಟೆ, ಮಾಣಿಕಪ್ರಭು ಪಾಂಚಾಳ, ಮಹಾದೇವ ಬೇಲೂರೆ, ಮಹೇಶ ಶರಣಪ್ಪ ರಾಚೋಟೆ ಮೊದಲಾದ ಕಲಾವಿದರು ತಮ್ಮ ಕಲೆ ಪ್ರದರ್ಶಿಸಿದ್ದಾರೆ.

## ಶ್ರೀ ಶಿವಲಿಂಗೇಶ್ವರ ನಾಟ್ಯ ಸಂಘ (ರಿ) ಮುಧೋಳ (ಬಿ), ತಾ. ಔರಾದ (ಬಿ):

ಔರಾದ ತಾಲೂಕಿನ, ಮುಧೋಳ (ಬಿ)ಯ ಪ್ರೊ. ಹಾವಗಿರಾವ ವಟಗೆಯವರು, ಸಧ್ಯ ಅಮರೇಶ್ವರ ಪದವಿ ಮಹಾವಿದ್ಯಾಲಯದಲ್ಲಿ ದೈಹಿಕ ಶಿಕ್ಷಣ ಬೋಧಕರಾಗಿ ಸೇವೆ ಸಲ್ಲಿಸುತ್ತಿರುವರು. ಕಲಾವಿದ, ಜಾನಪದ ಹಾಡುಗಾರ, ಸಾಹಿತಿ ಬಹುಮುಖ ಪ್ರತಿಭೆಯವರು. ೧೯೮೦ರಿಂದ ರಂಗ ಸೇವೆ ಮಾಡುತ್ತಲಿರುವರು. ತಮ್ಮ ಊರಲ್ಲಿ ಶ್ರೀ ಶಿವಲಿಂಗೇಶ್ವರ ನಾಟ್ಯ ಸಂಘವನ್ನು ಸ್ಥಾಪಿಸಿರುವರು. ನಾಟಕದ ವ್ಯವಸ್ಥಾಪಕರಾಗಿ, ನಿರ್ದೇಶಕರಾಗಿ, ಕಲಾವಿದರಾಗಿ ಸಾಮಾಜಿಕ, ಧಾರ್ಮಿಕ ನಾಟಕಗಳನ್ನು ಊರಿನ ಜಾತ್ರೆಯಲ್ಲಿ ಮಾಡಿಸಿರುವರು. ಇವರ ರಂಗ ಸೇವೆಯನ್ನು ಗುರುತಿಸಿ ಜಿಲ್ಲಾಡಳಿತ ಕನ್ನಡ ರಾಜ್ಯೋತ್ಸವದಲ್ಲಿ ಪ್ರಶಸ್ತಿ ನೀಡಿ ಗೌರವಿಸಿದೆ.

ಸತಿ ಸಂಸಾರದ ಜ್ಯೋತಿ, ಕಲಿತ ಕಳ್ಳ, ಕೆಟ್ಟ ಮೇಲೆ ಬುದ್ಧಿ ಬಂತು, ಬಸವರಾಜ ಗುಡಗೇರಿಯವರ ವಿಧಿಯ ಕೈವಾಡ, ಮಹಾದೇವಪ್ಪಾ ಬಣಕಾರರ ಕಲ್ಯಾಣ ಕ್ರಾಂತಿ,

ವಿ. ಸಿದ್ದರಾಮಣ್ಣನವರ ಶಿವಶರಣ ಹರಳಯ್ಯಾ, ಶಿವಶರಣೆ ನೆಲ್ಲೂರು ನೆಂಬಿಯೆಕ್ಕಾ, ಕಿತ್ತೂರು ಚೆನ್ನಮ್ಮಾ, ಸಿಂಧೂರು ಲಕ್ಷ್ಮಣ, ಹಾವಗಿರಾವ ವಟಗೆಯವರು ಬರೆದ ಸಂಗೊಳ್ಳಿ ರಾಯಣ್ಣಾ, ಮುಂತಾದ ನಾಟಕಗಳನ್ನು ಪ್ರದರ್ಶನ ಮಾಡಿರುವರು.

ಸಹೋದರರ ಸೇಡು, ಕಳ್ಳ ಕಟ್ಟಿದ ತಾಳಿ, ಗರತಿ ಹೆಣ್ಣಿಗೆ ಗರ್ವದ ಗಂಡ, ತಂಗಿ ತೀರಿಸಿದ ಅಣ್ಣನ ಋಣ, ಹೀಗೆ ಹಲವಾರು ನಾಟಕಗಳು ಮೂಡಿಬರಲು ಕಾರಣರಾಗಿದ್ದಾರೆ. ಇವರ ಜೊತೆಗಾರರಾಗಿ ಕಲಾವಿದರಾದ ಪ್ರಭುಲಿಂಗ ಸ್ವಾಮಿ, ಕಲ್ಯಾಣರಾವ ನೌಬಾದೆ, ಔರಾದನ ಅಡಿವೆಪ್ಪಾ ಪಟ್ನೆ, ವಿಜಯಕುಮಾರ ಸ್ವಾಮಿ, ಬಾಬುರಾವ ಪೂಜಾರಿ, ಬಸವರಾಜ ಒಂಟೆ, ಬಸವರಾಜ ಬಿರಾದಾರ, ರಮೇಶ ಹೂಗಾರ, ಡಿ.ಪಿ. ಬೋಳೆಗಾಂವೆ ಮತ್ತು ಕಲಾವಿದೆಯರಾದ ಔರಾದನ ಚಿನ್ನಮ್ಮಾ ಲಾಧಾ, ಮಹಾದೇವಿ ಮುಸ್ತಾಪುರೆ, ಭಾಲ್ಕಿಯ ಗಂಗಮ್ಮಾ ಮುರಾಳೆ ಮುಂತಾದವರು ಭಾಗವಹಿಸಿರುವರು.

ಮುಧೋಳ (ಬಿ) ಅಲ್ಲದೆ ಮುರ್ಕಿ, ಸಂತಪೂರ, ಔರಾದ, ಭಾಲ್ಕಿ ತಾಲೂಕಿನ ಭಾತಂಬ್ರಾ, ಬೀದರ, ಸೇಡಂ ತಾಲೂಕಿನ ಬಿಜನಳ್ಳಿಯಲ್ಲೂ ಪ್ರರ್ದಶನ ಮಾಡಿರುವರು. ಇವರು ಸುಸಜ್ಜಿತವಾದ ನಾಟಕದ ಪರದೆ, ತಬಲಾ ಹಾರಮೋನಿಯಂ, ಮೈಕಸೆಟ್‌ಗಳು ಹೀಗೆ ನಾಟಕದ ರಂಗ ಪರಿಕರಗಳನ್ನು ಸಂಗ್ರಹಿಸಿ ಹವ್ಯಾಸಿ ತಂಡವನ್ನು ಕಟ್ಟಿ ಬೆಳೆಸುತ್ತಿರುವರು.

ಮುಧೋಳ (ಬಿ)ಯ ಮೋಹನ ಗಣಪತಿ ಪಾಂಚಾಳ ಇವರು ಸಹ ಕಲಾವಿದರಾಗಿದ್ದು, ಮಹಾದೇವರ ಜಾತ್ರೆಯಲ್ಲಿ ಪ್ರತಿ ವರ್ಷ ನಾಟಕಗಳನ್ನು ಮಾಡುತ್ತಾ ಬಂದಿರುವರು. ಪ್ರಮುಖವಾಗಿ ರಾಮಾಯಣ ಬಯಲಾಟ, ಸೋತು ಗೆದ್ದ ಸಾಧ್ವಿ, ದಸರಾ, ದೀಪಾವಳಿ, ಕರುಳಿನ ಕೊಲೆ, ಅಣ್ಣ ತಂಗಿ, ಕಲಿತ ಕಳ್ಳ, ಸತಿ ಸಂಸಾರದ ಜ್ಯೋತಿ ಮುಂತಾದವು. ಇವರ ಜೊತೆಗೆ ಸಂಗೀತ ನೀಡಿದವರು ಮುಚಳಂಬಿಯ ರೇವಣಪ್ಪಾ ಪಾಂಚಾಳ ಹಾರ್ಮೋನಿಯಮ್, ಮುಧೋಳ(ಬಿ)ಯ ಚಂದ್ರಕಾಂತ ಬಿಚಕುಂದೆ ತಬಲಾ ಸಾಥ ನೀಡುತ್ತಿದ್ದರು. ಹಾವಗಿರಾವ ಅಂಬಲಗೆ, ವಿಜಯ ಕುಮಾರ ಜಾಜಿ, ಕಲ್ಲಪ್ಪಾ ಬಿರಾದಾರ, ಶಿವರಾಜ ಸಂಗ್ರಾಮ ಕಲಂಬರೆ, ಮಹಾದೇವ ರಾಗಾ ಮುಂತಾದ ಕಲಾವಿದರು ಭಾಗವಹಿಸುತ್ತಿದ್ದರು.

ಗಡಿನಾಡು ತೆಲಂಗಾಣದ ನಾರಾಯಣಖೇಡತಾಲೂಕಿನ ಮಾವಿನಹಳ್ಳಿಯಲ್ಲಿ ಶ್ರೀ ಚನ್ನಬಸವೇಶ್ವರ ನಾಟ್ಯ ಸಂಘದಿಂದ ರಾಮ ವಿಜಯ ಬಯಲಾಟ ನಾಟಕವನ್ನು ಊರಿನ ಜನರೆಲ್ಲ ಕೂಡಿ ಮಾಡಿರುವರು.

ಹೆಡಗಾಪೂರದ ಎಸ್. ರಾಮಕೃಷ್ಣನ್ ಸಾಳೆ(೧೯೫೨) ನಿವೃತ್ತ ಬ್ಯಾಂಕ್

ಅಧಿಕಾರಿ ಸದ್ಯ ಬೀದರ ವಾಸಿಯಾಗಿದ್ದು ಇವರು ಬಾಲ್ಯದಲ್ಲಿ ಕತ್ತಲೆ ಬೆಳಕು ನಾಟಕವನ್ನು ರಚಿಸಿ ನಟಿಸಿರುವರು. ಶಿವರಾಯ ಎಡಗೆ ಇವರ ನಿರ್ದೇಶನದಲ್ಲಿ ಮಾಡಿಸಿದ ಮಹಾತ್ಮಾ ಬಸವೇಶ್ವರ ನಾಟಕದಲ್ಲಿಮಂಚಣ್ಣನ ಪಾತ್ರವಹಿಸಿದ್ದರಂತೆ, ಮತ್ತು ಗೆಳೆಯನ ಸಂಸಾರ ನಾಟಕವನ್ನು ನಿರ್ದೇಶಿಸಿ ನಟಿಸಿರುವರು.

ಸಾಹಿತಿ, ಕಲಾವಿದ ಬಾನಾ ಸೋಲಾಪುರೆ (ಬಾಲಕ) ಬಾಬು ನಾಗಪ್ಪಾ ಸೋಲಪುರೆ (ಜನನ–೧೯೫೨)ಯವರು ಕಮಾಲನಗರದಲ್ಲಿ ಸಮಾಜ ಪರಿವರ್ತನೆಯ ವಿಷಯಗಳನ್ನು ನಾಟಕದ ಮೂಲಕ ಹೇಳುವ ಗಯ್ಯಾಳಿ ಒಳ್ಳೆಯವಳಾಗಿದ್ದು, ಸ್ವಾಮಿಗಳ ಭಂಡಾಟ, ನಮ್ಮ ಬೋರ್ಡ್ ಪರೀಕ್ಷೆಗಳು ಹೀಗೆ ಹಲವಾರು ನಾಟಕಗಳಲ್ಲಿ ಭಾಗವಹಿಸಿರುವರು.

ಹಳ್ಳಿಹಳ್ಳಿಗಳಲ್ಲಿ ಹವ್ಯಾಸಿ ವೃತ್ತಿರಂಗ ನಾಟಕಗಳನ್ನು ಮಾಡುತ್ತಿರುವರು. ಆದರೆ ರಂಗ ದಾಖಲೆಯನ್ನು ಮಾಡದಿರುವದರಿಂದ, ಬಹಳಷ್ಟು ಪ್ರತಿಭಾನ್ವಿತರು ಬೆಳಕಿಗೆ ಬರದೇ ಹೋಗಿರುವುದು, ಮತ್ತು ಎಲೆಮರೆಯ ಕಾಯಿಯಂತೆ ಅವರು ಸೇವೆ ಮಾಡಿದ್ದರೂ ಕೂಡ, ಮುಂದಿನ ಪೀಳಿಗೆಗೆ ಮಾಹಿತಿಯಿಲ್ಲದಂತಾಗಿದೆ.

●

# ಬೀದರ ಜಿಲ್ಲೆಯ ವೃತ್ತಿ ರಂಗಭೂಮಿ

ಕನ್ನಡದ ಕಲೆಯನ್ನು ಕಂಡು..... ಕುಲುಕುಲು ನಗುತ್ತಿರುವ..... ಕನ್ನಡದ ಕಲಾಭಿಮಾನಿಗಳೇ....! ಮರೆಯದಿರಿ.....ಮರೆತು ಮರುಗದಿರಿ.....! ನಿಮ್ಮ ಊರಿನ ಸುಸಜ್ಜಿತವಾದ ಭವ್ಯ ರಂಗ ಮಂದಿರದಲ್ಲಿ....! ವಿದ್ಯುತ್ ದೀಪಗಳ ಭವ್ಯ ಬೆಳಕಲ್ಲಿ.....! ಸುಂದರ ಸಾಮಾಜಿಕ ನಾಟಕ....! ನೋಡಲು ಮರೆಯದಿರಿ..... ಮರೆತು ನಿರಾಶರಾಗದಿರಿ..! ಜನಾಗ್ರಹದ ಮೇರೆಗೆ......! ಇನ್ನು ಕೆಲವೇ ಪ್ರದರ್ಶನಗಳು ಮಾತ್ರ....! ಎಂದು ಟಾಂಗಾಗಳಲ್ಲಿ, ಸೈಕಲ್ ರಿಕ್ಷಾಗಳಲ್ಲಿ ಕುಳಿತು ಭೋಂಗಾದಲ್ಲಿ ಲಯಬದ್ಧವಾಗಿ ಕೂಗಿ ಕೂಗಿ ಪ್ರಚಾರ ಮಾಡುತ್ತಿದ್ದ ಆ ಧ್ವನಿ ಇಂದು ಬಹು ಮಾಧ್ಯಮಗಳ ಭರಾಟೆಯಲ್ಲಿ ಕ್ಷೀಣವಾಗಿ ಕರಗಿ ಹೋದಂತಾಗಿದೆ. ಮತ್ತೆ ತನ್ನ ಗತವೈಭವ ಪಡೆಯಲೆಂಬುದೇ ಎಲ್ಲ ಕಲಾವಿದರ ಕನಸಾಗಿದೆ.

ಅನುಕರಣೆ ಮಾನವನ ಹುಟ್ಟುಗುಣ, ಮನುಷ್ಯನ ಹುಟ್ಟಿನೊಂದಿಗೇ ರಂಗಭೂಮಿಯ ಆವಿಷ್ಕಾರಕ್ಕೆ ನಾಂದಿಯಾಯಿತು ಎನ್ನಬಹುದು. ಮಿಶ್ರ ಸಂಸ್ಕೃತಿಯ ಬೀದರಿನಲ್ಲಿ ಯಾವುದೇ ವಿಶಿಷ್ಟವಾದ ರಂಗ ಪ್ರಕಾರ ಬೆಳೆಯದೇ ಹೋದರೂ, ಜಾನಪದ ರಂಗಕಲೆ ತನ್ನ ಗಟ್ಟಿತನದೊಂದಿಗೆ ಇಂದಿಗೂ ಪ್ರಸ್ತುತವಾಗಿದೆ. ಬೀದರ, ಭಾಲ್ಕಿ, ಬಸವಕಲ್ಯಾಣ, ಹುಮನಾಬಾದ, ಚಿಟಗುಪ್ಪಾಗಳಲ್ಲಿ ನಾಡಿನ ಪ್ರಸಿದ್ಧ ನಾಟಕ ಕಂಪನಿಗಳು ಕ್ಯಾಂಪ ಹಾಕಿ ನಾಟಕಗಳನ್ನು ಆಡುತ್ತಿರುವರು. ಹೀಗೆ ಬೇರೆ ಊರಿನ ನಾಟಕ ಸಂಸ್ಥೆಗಳು, ಜಾತ್ರೆಗಳಲ್ಲಿ, ಬೀದರ ಜಿಲ್ಲೆಯಲ್ಲಿ ಕ್ಯಾಂಪ್ ಮಾಡಿ ನಾಟಕಗಳನ್ನು ಆಡಿಸಿದಾಗ, ಅದನ್ನು ನೋಡಿ ಇಲ್ಲಿಯ ಹಲವಾರು ಕಲಾಸಕ್ತರು ಸೇರಿ ನಾಟಕ ಕಂಪನಿಗಳನ್ನು ಪ್ರಾರಂಭಿಸಿದರು. ಬೀದರ ಜಿಲ್ಲೆಯ ಹುಮನಾಬಾದ ತಾಲೂಕಿನಲ್ಲಿ ಬಹುತೇಕ ವೃತ್ತಿ ರಂಗ ತಂಡಗಳು ಕ್ರಿಯಾಶೀಲ ವಾಗಿವೆ.

ಬೀದರ ಜಿಲ್ಲೆಯಲ್ಲಿ ಬಹಳಷ್ಟು ಪ್ರಸಿದ್ಧಿ ಪಡೆದ ವೃತ್ತಿ ರಂಗ ತಂಡಗಳು. ಇರದೇ ಹೋದರೂ ಇಂದಿಗೂ ಬೆರಳೆಣಿಕೆಯಷ್ಟು ತಂಡಗಳು ಕಲಾಸೇವೆ ಮಾಡುತ್ತಲಿವೆ. ಇಂದಿನ ಮಾಹಿತಿ, ತಂತ್ರಜ್ಞಾನದ ಭರಾಟೆಯಲ್ಲಿ, ಪ್ರೇಕ್ಷಕರನ್ನು ನಾಟಕ ನೋಡಲು ರಂಗ ಮಂದಿರಕ್ಕೆ ಸೆಳೆತರುವದು ಕಷ್ಟದ ಕೆಲಸವಾಗಿದೆ. ವೃತ್ತಿ ರಂಗಭೂಮಿ ಕುಟುಕು ಜೀವದಿಂದ ಬದುಕಿರುವುದೇ ದೊಡ್ಡ ಸಂಗತಿಯಾಗಿದೆ. ಸರಕಾರದ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ನಾಟಕ ಅಕಾಡೆಮಿಗಳು ವೃತ್ತಿ ರಂಗಭೂಮಿ ಕಲಾವಿದರಿಗೆ

ಸಹಾಯಧನ ನೀಡುತ್ತಲಿದ್ದು, ಇನ್ನು ಹೆಚ್ಚಿನ ಸಹಾಯ ಸಹಕಾರದ ಅವಶ್ಯಕತೆ ಇದೆ, ಸಂಬಂಧಿಸಿದವರು ಈ ಕುರಿತು ಕ್ರಮ ತೆಗೆದುಕೊಳ್ಳಬೇಕು ಎಂದು ಹಿರಿಯ ಕಲಾವಿದರ ಒತ್ತಾಸೆಯಾಗಿದೆ. ಬೀದರ ಜಿಲ್ಲೆಯಲ್ಲಿ ಬೆರಳೆಣಿಕೆಯಷ್ಟು ವೃತ್ತಿ ರಂಗ ತಂಡಗಳು ಕುಟುಕು ಜೀವ ಹಿಡಿದು ಕಲಾ ಸೇವೆ ಮಾಡುತ್ತಿರವವು. ಅವುಗಳಲ್ಲಿ ಪ್ರಮುಖ ತಂಡಗಳ ಪರಿಚಯ ಕೆಳಗಿನಂತಿದೆ.

## ದಿ. ಶ್ರೀ ಏಕನಾಥ ಬಹುರೂಪಿ. ಶ್ರೀ ಸಿದ್ಧರಾಮೇಶ್ವರ ನಾಟ್ಯ ಸಂಘ ನಿರ್ಣಾ ಹುಮನಾಬಾದ:

ಹುಮನಾಬಾದ ತಾಲೂಕಿನ ನಿರ್ಣಾ ಗ್ರಾಮದಲ್ಲಿ, ಬಹೂರೂಪಿಯ ಹಗಲು ವೇಷ ಧರಿಸುತ್ತಿದ್ದ ದಿ. ಶ್ರೀ ಏಕನಾಥ ಬಹುರೂಪಿ ತಂದೆ ಗಂಗಾರಾಮ ಇವರು ಬಹಳ ಪ್ರಸಿದ್ಧರಾಗಿದ್ದರು. ಇವರಿಗೆ ೧೯೯೫ರಲ್ಲಿ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿಯನ್ನು ನೀಡಿ ಗೌರವಿಸಿತು. ತಮ್ಮ ಕುಟುಂಬದ ಜೊತೆಗೆ ವೇಷಗಳು ಧರಿಸುತ್ತಿದ್ದು ಸಂಗೀತದೊಂದಿಗೆ ಪೌರಾಣಿಕ ಪ್ರಸಂಗಗಳನ್ನು ಪ್ರದರ್ಶಿಸುತ್ತಿದ್ದರು. ನಂತರದಲ್ಲಿ ಇವರ ಮುಂದಾಳತ್ವದಲ್ಲಿ ಶ್ರೀ ಸಿದ್ಧರಾಮೇಶ್ವರ ನಾಟ್ಯ ಸಂಘ ನಿರ್ಣಾ ಹುಮನಾಬಾದ ಹೆಸರಿನ ವೃತ್ತಿರಂಗ ತಂಡ ಕಟ್ಟಿದರು. ತಮ್ಮ ಸಹೋದರರು, ಮಕ್ಕಳು ಎಲ್ಲ ಸೇರಿ ಪೌರಾಣಿಕ, ಸಾಮಾಜಿಕ ನಾಟಕಗಳನ್ನು ಬೀದರ, ಚಿಂಚೋಳಿ ತಾಲೂಕಿನ ಹಳ್ಳಿಗಳಲ್ಲಿ ಜಾತ್ರೆಗಳಲ್ಲಿ ಜನರ ಆಹ್ವಾನದ ಮೇರೆಗೆ ಆ ಊರಿನಲ್ಲಿ ಟೆಂಟ್ ಹಾಕಿ ಸಾಮಾಜಿಕ ನಾಟಕ ಮಾಡುತ್ತಲಿರುವರು. ಸಂಪತ್ತಿಗೆ ಸವಾಲ್, ತಾಯಿಯ ಕರುಳು, ರತ್ನಮಾಂಗಲ್ಯ ಮುಂತಾದ ನಾಟಕಗಳನ್ನು ಪ್ರದರ್ಶಿಸಿರುವರು.

## ಶ್ರೀ ಗುರುಪಾದಲಿಂಗೇಶ್ವರ ನಾಟ್ಯ ಸಂಘ ಮುತ್ತಂಗಿ, ತಾಲೂಕು ಹುಮನಾಬಾದ:

ಕಲಾವಿದ ಶ್ರೀ ಲಕ್ಷ್ಮಣರಾವ ಸಿದ್ರಾಮಪ್ಪಾ ಎಣ್ಣಿ ಮುತ್ತಂಗಿಯವರಿಗೆ (ಜನನ-೧೯೪೯), ಕರ್ನಾಟಕ ನಾಟಕ ಅಕಾಡೆಮಿ ಬೆಂಗಳೂರು ೨೦೦೯ರಲ್ಲಿ ಮೈಸೂರಿನಲ್ಲಿ ಕೆ. ಹಿರಣ್ಣಯ್ಯ ಪುರಸ್ಕಾರ ನೀಡಿ ಗೌರವಿಸಿದೆ. ಇವರು ೧೯೮೩ ರಲ್ಲಿ ಶ್ರೀ ಗುರುಪಾದ ಲಿಂಗೇಶ್ವರ ನಾಟ್ಯ ಸಂಘ ಮುತ್ತಂಗಿ ಹೆಸರಿನ ನಾಟಕ ಕಂಪನಿಯನ್ನು ಪ್ರಾರಂಬಿಸಿರುವರು.ಇವರ ನಾಟಕ ಕಂಪನಿಯ ಪ್ರಮುಖ ನಾಟಕಗಳಾದ ರಾಜಾ ಸತ್ಯ ಹರಿಶ್ಚಂದ್ರ, ಹೇಮರೆಡ್ಡಿ ಮಲ್ಲಮ್ಮ, ತಾಯಿಯ ಕರುಳು, ಮಾತು ಬಿದ್ದಿತು ಮೌನ ಗೆದ್ದಿತು, ಕಳ್ಳ ಗುರು ಸುಳ್ಳ ಶಿಷ್ಯ, ಹಸಿರು ಬಳೆ, ಕೈಲಾಗದ ಗಂಡ ಕೈಲಾಸ ಕಂಡ, ಅಪ್ಪ ಹಂಗ ಮಗ ಹಿಂಗ, ಬಸ್ ಕಂಡಕ್ಟರ್, ಚಿನ್ನದ ಗೊಂಬೆ ಮುಂತಾದವು ಜನಾಗ್ರಹದ ಮೇರೆಗೆ ಮರಳಿ ಪ್ರಯೋಗ ಕಾಣುತ್ತಿದ್ದವು. ಇವರು ಬೀದರ ಜಿಲ್ಲೆಯಾದ್ಯಂತ ಜಾತ್ರೆಗಳಲ್ಲಿ ಕ್ಯಾಂಪ ಹಾಕುತ್ತಾ ಬಂದಿರುವರು.

ಕಲಬುರ್ಗಿ ಜಿಲ್ಲೆಯ ಫರಹತಾಬಾದ, ಜೇವರಗಿ, ಶಾಪೂರ, ಯಾದಗಿರ, ವಿಜಯಪೂರದ ಕನ್ನೂರ, ಬೆಳಗಾಂವನ ರಾಯಬಾಗ, ಶಮನಾವಾಡಿ, ಭಾವನ ಸವದತ್ತಿ, ತಿಂತಣಿ ಹೀಗೆ ಎಲ್ಲೆಡೆಗೆ ತಮ್ಮ ನಾಟಕ ಕಂಪನಿಯೊಂದಿಗೆ ತಿರುಗಾಟ ಮಾಡಿರುವರು.

## ಜೈ ಭವಾನಿ ರಂಗಭೂಮಿ ಕಲಾವಿದರ ಸಂಘ (ರಿ) ಚಿಟ್ಟಾ, ತಾ.ಜಿ. ಬೀದರ:

ಬಿದರ ಸಮೀಪದ ಚಿಟ್ಟಾ ಗ್ರಾಮದ ಶ್ರೀ ಶೆಷಪ್ಪಾ ಕಲ್ಲಪ್ಪಾ ನಡುವಿನದೊಡ್ಡಿ (ಜನನ: ೧೯೬೯) ಉತ್ಸಾಹಿ ಕಲಾವಿದರಾದ ಇವರು 'ಜೈ ಭವಾನಿ ರಂಗಭೂಮಿ ಕಲಾವಿದರ ಸಂಘ'ವನ್ನು ಸ್ಥಾಪಿಸಿರುವರು. ಹಳ್ಳಿಗಳಲ್ಲಿ, ತಗಡಿನ (ಪತ್ರಾ) ಟೆಂಟಗಳನ್ನು ಹಾಕಿ ಜಾತ್ರೆಯ ಸಮಯದಲ್ಲಿ ಸಾಮಾಜಿಕ ನಾಟಕಗಳನ್ನು ಮಾಡುವರು. ಇವರೇ ನಾಟಕಗಳನ್ನು ಕಲಿಸುವರು.ಮತ್ತು ಹಾರ್ಮೋನಿಯಂ, ತಬಲಾಗಳಿಗೆ ಸಂಗೀತ ಕಲಾವಿದರನ್ನು ಕರೆಸುವರು. ಆಕರ್ಷಣೆಗಾಗಿ ನೃತ್ಯ ಮಾಡುವ ಕಲಾವಿದೆಯರಿಂದ ಜನಪ್ರಿಯ ಚಿತ್ರಗೀತೆಗಳಿಗೆ ಡಾನ್ಸ ಇಟ್ಟುಕೊಳ್ಳುವರು.

ನಾಡಿನೆಲ್ಲೆಡೆ ಪ್ರಸಿದ್ಧವಾದ ಸಾಮಾಜಿಕ ನಾಟಕಗಳಾದ 'ರತ್ನ ಮಾಂಗಲ್ಯ', ಮಿಸ್ಟರ್. ಗುಂಡೂರಾವ, ಬಸ್ ಕಂಡಕ್ಟರ್, ಸಂಪತ್ತಿಗೆ ಸವಾಲ್, ಬಸ್ ಹಮಾಲ್, ಕೈಲಾಗದ ಗಂಡ ಕೈಲಾಸ ಕಂಡ, ಚನ್ನಪ್ಪ ಚನಗೌಡಾ, ತಾಯಿಯ ಕರಳು ಮುಂತಾದ ನಾಟಕಗಳನ್ನು ಜನಾಗ್ರಹದ ಮೇರೆಗೆ ಮಾಡಿಕೊಂಡು ಹೋಗುವರು. ನಾಟಕಗಳಲ್ಲಿ ಕಲಾವಿದರಾಗಿ ಇವರ ಕುಟುಂಬದ ಸದಸ್ಯರೆಲ್ಲಾ ಸೇರಿ ನಾಟಕ ಮಾಡುವರು. ಇವರು ಉತ್ಸಾಹಿ ಕಲಾವಿದರಾಗಿದ್ದು ರಂಗಭೂಮಿ ಸೇವೆಗೆ ಸದಾ ಮುಂದೆ ಬರುವರು.

## ಶ್ರೀ ಅಲ್ಲಮ ಪ್ರಭುಲಿಂಗೇಶ್ವರ ನಾಟ್ಯ ಸಂಘ ಬೆನಕೆಪಳ್ಳಿ, ಭಾಲ್ಕಿ:

ಕಲಾವಿದ ಶ್ರೀ ಸುರೇಶ ಬಿ ಕಟ್ಟಿಮನಿ ಬೆನಕೆಪಳ್ಳಿಯವರು (ಜನನ-೧೯೭೨) ಇವರ ತಂದೆ ಶ್ರೀ ಸಿದ್ರಾಮಪ್ಪಾ ಇವರು ಬಹುರೂಪಿ, ಹಗಲು ವೇಷದ ಕಲಾವಿದರಾಗಿದ್ದರಿಂದ ತಮ್ಮ ಮನೆಯ ಸದಸ್ಯರೊಂದಿಗೆ ವೇಷಗಳನ್ನು ಹಾಕುತ್ತಿದ್ದರು. ಇವರ ಪ್ರಭಾವದಿಂದಾಗಿ ಸುರೇಶ ಅವರು ಮನೆಯ ಹಾಗೂ ಹಲವಾರು ಕಲಾವಿದರನ್ನು ಜೊತೆ ಸೇರಿಸಿಕೊಂಡು, ೧೯೯೯ರಲ್ಲಿ ಶ್ರೀ ಅಲ್ಲಮಪ್ರಭು ಲಿಂಗೇಶ್ವರ ನಾಟ್ಯ ಸಂಘ ಬೆನಕೆಪಳ್ಳಿ ಹೆಸರಿನಿಂದ ಸುಸಜ್ಜಿತವಾದ ತಂಡ ಪ್ರಾರಂಭಿಸಿದರು. ಸದ್ಯ ಭಾಲ್ಕಿಯಲ್ಲಿ ಕ್ಯಾಂಪ ಹಾಕಿದ್ದು ಬೀದರ ಜಿಲ್ಲೆಯ ಬೇರೆ ಬೇರೆ ಊರುಗಳಲ್ಲೂ ಮತ್ತು ಪಕ್ಕದ ಕಲಬುರಗಿ ಜಿಲ್ಲೆಯ ಚಿಂಚೋಳಿ, ಸೇಡಂ, ಚಿತಾಪೂರ, ಅಫಜಲಪೂರ ತಾಲೂಕಿನ ಹಳ್ಳಿಗಳಲ್ಲೂ ತಮ್ಮ ಕ್ಯಾಂಪಗಳನ್ನು ಮಾಡಿರುವರು. ತೆಲಂಗಾಣದ ಕಾರಾಮುಂಗಿ, ಮಾಯಿನಳ್ಳಿ, ಮತ್ತು ಮಹಾರಾಷ್ಟ್ರದ ಗಡಿ ಭಾಗದಲ್ಲೂ ನಾಟಕಗಳನ್ನು ಮಾಡಿರುವರು.

ಇವರ ಪ್ರಸಿದ್ಧ ನಾಟಕಗಳಾದ ಶಿವಶರಣ ಹರಳಯ್ಯ, ರಾಜಾ ಸತ್ಯ ಹರಿಶ್ಚಂದ್ರ, ಹೇಮರೆಡ್ಡಿ ಮಲ್ಲಮ್ಮ, ಮಲಮಗಳು, ಬದುಕು ಬಂಗಾರವಾಯಿತು, 'ರತ್ನ ಮಾಂಗಲ್ಯ ಅರ್ಥಾತ್ ಕಳ್ಳ ಗುರು ಸುಳ್ಳ ಶಿಷ್ಯ', ಮಿಸ್ಟರ್. ಗುಂಡೂರಾವ, ಬಸ್ ಕಂಡಕ್ಟರ್ ಅರ್ಥಾತ್ ಖಾನಾವಳಿ ಚೆನ್ನಿ, ಸಂಪತ್ತಿಗೆ ಸವಾಲ್, ಬಸ್ ಹಮಾಲ್, ಕೈಲಾಗದ ಗಂಡ ಕೈಲಾಸ ಕಂಡ, ಚನ್ನಪ್ಪ ಚನಗೌಡಾ, ತಾಯಿಯ ಕರಳು ಅರ್ಥಾತ್ ಸೊಕ್ಕಿನ ಸೊಸೆ, ಗೌಡ ಮೆಚ್ಚಿದ ಹುಡುಗಿ ಅರ್ಥಾತ್ ಹೈದ್ರಾಬಾದಿ ಛೆಕ್ಕಾ, ತಂಗಿ ಮಾಡಿದ ತಪ್ಪು ಅರ್ಥಾತ್ ರೈತನ ಕೊಲೆ, ತಾಯಿ ಇಲ್ಲದ ತವರು ಅರ್ಥಾತ್ ಲೋಫರ್ ಮಾವ ಸೂಪರ್ ಅಳಿಯ, ಒಡ ಹುಟ್ಟಿದವರು, ಮುಂತಾದ ನಾಟಕಗಳನ್ನು ಜನಾಗ್ರಹದ ಮೇರೆಗೆ ಮರುಪ್ರದರ್ಶನಗಳನ್ನೂ ಮಾಡಿಸುತ್ತಿರುವರು. ಇವರು ನಾಟಕಗಳಲ್ಲಿ ಹೆಚ್ಚಿನ ಆಕರ್ಷಣೆಗಾಗಿ ಹೊರಗಿನಿಂದ ಡಾನ್ಸರ್‌ಗಳನ್ನು ಕರೆಸಿ ನೃತ್ಯ ಮಾಡಿಸುವದರಿಂದ ನಾಟಕ ನೋಡಲು ಜನ ಬರುವರೆಂದು ಹೇಳುವರು.

## ಶ್ರೀ ಗುರುಬಸವಲಿಂಗೇಶ್ವರ ನಾಟ್ಯ ಸಂಘ ನಿರ್ಣಾ, ಹುಮನಾಬಾದ:

ಶ್ರೀ ಯಲ್ಲಪಾ ತಂದೆ ಏಕನಾಥ ಇವರ ನೇತೃತ್ವದಲ್ಲಿ ಶ್ರೀ ಗುರುಬಸವಲಿಂಗೇಶ್ವರ ನಾಟ್ಯ ಸಂಘ ನಿರ್ಣಾ, ತಾ. ಹುಮನಾಬಾದ. ಬೀದರ ಜಿಲ್ಲೆಯ ಬೇರೆ ಬೇರೆ ಊರುಗಳಲ್ಲೂ ಮತ್ತು ಪಕ್ಕದ ಕಲಬುರಗಿ ಜಿಲ್ಲೆಯ ಚಿಂಚೋಳಿ ತಾಲೂಕಿನಲ್ಲೂ ತಮ್ಮ ಕ್ಯಾಂಪಗಳನ್ನು ಮಾಡಿರುವರು. ಇವರು ಪ್ರಸಿದ್ಧ ನಾಟಕಗಳಾದ ರತ್ನ ಮಾಂಗಲ್ಯ, ಮಿಸ್ಟರ್. ಗುಂಡೂರಾವ, ಬಸ್ ಕಂಡಕ್ಟರ್, ಸಂಪತ್ತಿಗೆ ಸವಾಲ್, ಬಸ್ ಹಮಾಲ, ಕೈಲಾಗದ ಗಂಡ ಕೈಲಾಸ ಕಂಡ, ಚನ್ನಪ್ಪ ಚನಗೌಡಾ, ತಾಯಿಯ ಕರಳು ಮುಂತಾದ ನಾಟಕಗಳನ್ನು ಮಾಡಿಸುತ್ತಿರುವರು.

## ಶ್ರೀ ಗುತ್ತಿ ಬಸವೇಶ್ವರ ನಾಟ್ಯ ಸಂಘ ನಿರ್ಣಾ, ಹುಮನಾಬಾದ:

ಹುಮನಾಬಾದ ತಾಲೂಕಿನ ನಿರ್ಣಾದ ಶ್ರೀ ಕುಪೇಂದ್ರ ಕಟ್ಟಿಮನಿಯವರು ಶ್ರೀ ಗುತ್ತಿ ಬಸವೇಶ್ವರ ನಾಟ್ಯ ಸಂಘ ಕಟ್ಟಿಕೊಂಡು ರಂಗಸೇವೆ ಮಾಡುತ್ತಲಿರುವರು. ಬೀದರ, ಹುಮನಾಬಾದ, ಚಿಂಚೋಳಿ ತಾಲೂಕಿನ ಹಳ್ಳಿಗಳಲ್ಲಿ ಜನಪ್ರಿಯ ನಾಟಕಗಳಾದ ತಾಯಿಯ ಕರುಳು, ರತ್ನ ಮಾಂಗಲ್ಯ, ಬಸ್ ಕಂಡಕ್ಟರ್, ಚಿನ್ನದ ಗೊಂಬೆ, ತಾಯಿ ಇಲ್ಲದ ತವರು ಮುಂತಾದ ನಾಟಕಗಳನ್ನು ತಮ್ಮ ಮನೆಯವರು, ಸಹೋದರರ ಜೊತೆ ಕೂಡಿ ಆಡಿರುವರು. ಅರೆ ವೃತ್ತಿ ರಂಗ ಕಲಾವಿದರಾಗಿರವದರಿಂದ ಬೇಸಿಗೆಯ ಕಾಲದಲ್ಲಿ ಮಾತ್ರ ತಮ್ಮ ಕಲೆಯನ್ನು ಪ್ರದರ್ಶಿಸುವರು. ಉಳಿದ ಸಮಯ ತಮ್ಮ ಕುಲ ಕಸುಬನ್ನು ಮಾಡುವರು.

## ಶ್ರೀ ಚನ್ನವೀರೇಶ್ವರ ನಾಟಕ ಸಂಘ ಹುಮನಾಬಾದ:

ಶ್ರೀ ಚೆನ್ನವೀರೇಶ್ವರ ನಾಟಕ ಸಂಘ ಹುಮನಾಬಾದ ತಂಡದ ಶ್ರೀಮತಿ ಕಾವೇರಿ ಗಂಡ ಶಿವಾಜಿ ವಾಂಜರಿಯವರು ನಾಟಕ ತಂಡವನ್ನು ಕಟ್ಟಿ ಜಾತ್ರೆಗಳಲ್ಲಿ ನಾಟಕ ಮಾಡಿಸುವರು. ಹೊರಗಡೆಯಿಂದ ಕಲಾವಿದರನ್ನು ಕರೆಸಿ ನಾಟಕಗಳನ್ನು ಆಡಿಸುವದರಿಂದ ಕಲೆಕ್ಷನ್ ಹೆಚ್ಚಾಗುವದು, ಹಾಗೂ ಬಹಳ ದಿನ ಒಂದೇ ಊರಿನಲ್ಲಿ ಕ್ಯಾಂಪ್ ಮಾಡಲು ಅನುಕೂಲವಾಗುವದು ಎಂಬುದು ನಾಟಕಗಳಿಗೆ ಪ್ರೇಕ್ಷಕರ ಕೊರತೆಯನ್ನು ಸೂಚಿಸುವದು. ಇವರು ಮಾಡುವ ಪ್ರಸಿದ್ಧ ಸಾಮಾಜಿಕ ನಾಟಕಗಳಾದ ರತ್ನಮಾಂಗಲ್ಯ, ತಾಯಿಯ ಕರುಳು, ಚಿನ್ನದ ಗೊಂಬೆ, ಚೆನ್ನಪ್ಪಾ ಚನಗೌಡಾ, ಬಸ್ ಕಂಡಕ್ಟರ್ ಮುಂತಾದವು ಜನಮನ್ನಣೆ ಪಡೆದಿವೆ. ಬೀದರ ಜಿಲ್ಲೆ, ಕಲಬುರ್ಗಿ ಜಿಲ್ಲೆಯ ಹಳ್ಳಿಗಳಲ್ಲೂ ಕ್ಯಾಂಪಗಳನ್ನು ಹಾಕುವರು.

## ಶ್ರೀ ಸಮರ ಪಂಚಲಿಂಗೇಶ್ವರ ನಾಟ್ಯ ಸಂಘ ವಿಠಲಪೂರ, ಹುಮನಾಬಾದ:

ಹುಮನಾಬಾದ ತಾಲೂಕಿನ ವಿಠಲಪೂರದ ಶ್ರೀ ನಾಗೇಶ ಸಿದ್ರಾಮಪ್ಪಾ ಇವರು ಶ್ರೀ ಸಮರ ಪಂಚ ಲಿಂಗೇಶ್ವರ ನಾಟ್ಯ ಸಂಘವನ್ನು ಸ್ಥಾಪಿಸಿಕೊಂಡು ಬೀದರ ಕಲಬುರ್ಗಿ ಜಿಲ್ಲೆಗಳಲ್ಲಿ ನಾಟಕಗಳನ್ನು ಮಾಡಿಸುತ್ತಿರುವರು. ಇವರು ಮಲಮಗಳು, ಬದುಕು ಬಂಗಾರವಾಯಿತು, ರತ್ನಮಾಂಗಲ್ಯ, ಮಿಸ್ಟರ್. ಗುಂಡೂರಾವ, ಬಸ್ ಕಂಡಕ್ಟರ್, ಸಂಪತ್ತಿಗೆ ಸವಾಲ್, ಬಸ್ ಹಮಾಲ್, ಕೈಲಾಗದ ಗಂಡ ಕೈಲಾಸ ಕಂಡ, ಚನ್ನಪ್ಪ ಚನಗೌಡಾ, ತಾಯಿಯ ಕರಳು, ಒಡ ಹುಟ್ಟಿದವರು ಮುಂತಾದ ಸಾಮಾಜಿಕ ನಾಟಕಗಳನ್ನು ಪ್ರದರ್ಶಿಸುವರು.

## ಶ್ರೀ ಸಿರಡಿ ಸಾಯಿಬಾಬಾ ನಾಟ್ಯ ಸಂಘ ನಿರ್ಣಾವಾಡಿ,ತಾಲೂಕು ಹುಮನಾಬಾದ:

ಕಲಾವಿದ ರಾಮಚಂದ್ರಪ್ಪಾ ಸಿದ್ರಾಮಪ್ಪಾ ಎಣ್ಣೆ ಇವರು ಶ್ರೀ ಸಿರಡಿ ಸಾಯಿಬಾಬಾ ನಾಟ್ಯ ಸಂಘ, ನಿರ್ಣಾವಾಡಿ ಹೆಸರಿನ ನಾಟಕ ಕಂಪನಿಯನ್ನು ಪ್ರಾರಂಭಿಸಿರುವರು.ಹಲವಾರು ಹಳ್ಳಿಗಳಲ್ಲಿ ಸಾವಾಜಿಕ ನಾಟಕಗಳನ್ನು ಮಾಡುತ್ತಲಿರುವರು.

## ಕೆ.ಎ.ಎಫ್ ನಾಟ್ಯ ಸಂಘ ಬೀದರ:

ಕಲಾವಿದ ವಿನೋದಕುಮಾರ ಲಕ್ಷ್ಮಣರಾವ ಮುತ್ತಂಗಿ, ಇವರು ಹುಮನಾಬಾದನ ವಾಂಜರಿಯಲ್ಲಿರುವರು. ಕೆ.ಎ.ಎಫ್ ನಾಟ್ಯ ಸಂಘ ಸ್ಥಾಪಿಸಿ ಸಾಮಾಜಿಕ ನಾಟಕಗಳನ್ನು ಮಾಡುತ್ತಲಿರುವರು.

# ಬೀದರ ಜಿಲ್ಲೆಯ ನಾಟಕಕಾರರು, ನಾಟಕಗಳು

ಬೀದರ ಜಿಲ್ಲೆಯಲ್ಲಿ, ಸ್ವಾತಂತ್ರ್ಯ ಪೂರ್ವದಿಂದಲೂ, ರಂಗಾಸಕ್ತ ಶಿಕ್ಷಕರು ಶಾಲಾ ಕಾಲೇಜುಗಳಲ್ಲಿ ಏಕಾಂಕ ನಾಟಕಗಳನ್ನು ಸ್ವತಃ ಬರೆದು ಮಾಡಿಸುತ್ತಿದ್ದರು. ರಂಗ ಸಾಹಿತ್ಯದ ಇತಿಹಾಸವನ್ನು ನೋಡಿದಾಗ, ನಾಟಕಗಳನ್ನು ಬರೆದ ನಾಟಕಕಾರರಲ್ಲಿ, ಕವಿ, ತತ್ವಪದಕಾರ ದಿ. ಶೀಲಪ್ಪಾಸ್ವಾಮಿ ಇವರು 'ಚಿತ್ರಸೇನ' ನಾಟಕ ಬರೆದಿರುವರು. ಶಿವಪ್ಪಾ ಗಾದಗಿಯವರು 'ಮೃತ್ಯುಂಜಯ' ನಾಟಕ ಬರೆದಿರುವರು.

ಹಿರಿಯ ಸಾಹಿತಿಗಳಾದ ಶ್ರೀ ಪಂಚಾಕ್ಷರಿ ಪುಣ್ಯಶೆಟ್ಟಿ (ಜನನ-೧೯೩೫)ಯವರು ೧೯೬೭ರಲ್ಲಿ ರಚಿಸಿದ 'ಚಂದ್ರಶೇಖರ ಆಜಾದ್' ನಾಟಕ ಸ್ವಾತಂತ್ರ್ಯವೀರರ ಆದರ್ಶಗಳನ್ನು ಎತ್ತಿ ಹಿಡಿಯುವಲ್ಲಿ ಯಶಸ್ವಿಯಾಗಿದೆ. ಇವರ ನಾಟಕಕ್ಕೆ ವರಕವಿ ದ.ರಾ. ಬೇಂದ್ರೆಯವರು ಮೆಚ್ಚುಗೆ ಸೂಚಿಸಿರುವರು. ಡಾ. ಮಾಣಿಕರಾವ ಧನಾಶ್ರೀಯವರ 'ಕಡ್ಡಾಯ ಶಿಕ್ಷಣದ ಕರೆ' ನಾಟಕ ಶಿಕ್ಷಣದ ಮಹತ್ವವನ್ನು ಸಾರುವದು ಹಲವಾರು ಪ್ರಯೋಗಗಳನ್ನು ಮಾಡಿಸಿರುವರು. ಶ್ರೀಬಸವರಾಜ ಸೈನೀರ ಅವರು ಬರೆದ 'ಮಿತ್ರದ್ರೋಹಿ' ಸಾಮಾಜಿಕ ಕಳಕಳಿಯ ನಾಟಕವಾಗಿದೆ.

ಬಹು ಭಾಷಾ ಸಾಹಿತಿ, ಕಲಾವಿದರಾದ ಶ್ರೀ ದತ್ತಾ.ಮೈಲೂರಕರರು 'ಹಣ ಹದ್ದು', 'ಸತ್ಯಕ್ಕೆ ಸಾವಿಲ್ಲ', 'ಅಪರಾಧಿ', ಕನ್ನಡ ನಾಟಕಗಳಾದರೆ, ಸಾಷ್ಟಾಂಗ ನಮಸ್ಕಾರ, ಪೈಸಾ, ಸಮಾಜ ಕೆ ಬಂಧನ, ದಹೇಜ ಮುಂತಾದ ಹನ್ನೆರಡು ಹಿಂದಿ ನಾಟಕಗಳನ್ನು ಬರೆದು, ನಿರ್ದೇಶಿಸಿ, ಅಭಿನಯವನ್ನೂ ಮಾಡಿ, ತಮ್ಮ 'ಮಿತ್ರವೃಂದ' ಹವ್ಯಾಸಿ ತಂಡದಿಂದ ಪ್ರಯೋಗಿಸಿರುವರು.

ಔರಾದನ ಶ್ರೀ ಕಾಶೀನಾಥ ಮಾದಪ್ಪಾ ಮಹಿಮಾಕರ (ಜನನ-೧೯೫೪) ಅವರು 'ಶೀಲವತಿಗೆ ಸುಖ ಯಾವಾಗ' ಸಾಮಾಜಿಕ ನಾಟಕ ಬರೆದಿರುವರು ಶ್ರೀ ಎನ್.ಆರ್. ಲೂಕ್ ಅವರ 'ಕ್ರಿಸ್ತನ ಜನನ' ನಾಟಕ, ಶ್ರೀ ಶಂಕರರಾವ ದಾಸ್ ಮುತ್ತಂಗಿಯವರು ಬರೆದ 'ಕಲಿತ ಹುಡುಗಿ' ನಾಟಕ ಹಲವಾರು ರಂಗ ಪ್ರಯೋಗ ಕಂಡಿದೆ.

ಭಾಲ್ಕಿಯಲ್ಲಿ ಹಿರಿಯ ಸಾಹಿತಿ, ಬಸವ ತತ್ವ ಪ್ರಚಾರಕರಾದ ಶ್ರೀ ವಿ ಸಿದ್ಧರಾಮಣ್ಣನವರು (ಜನನ-೧-೮-೧೯೨೨) ಬರೆದ ಸಂಗೀತ ನಾಟಕಗಳು, ಶರಣರ

ಜೀವನದ ಕುರಿತಾಗಿವೆ. 'ಷಟ್‌ಸ್ಥಲ ಜ್ಯೋತಿ ಷಣ್ಮುಖ ಶಿವಯೋಗಿಗಳು (೧೯೭೯)', 'ಶಿವಶರಣ ಹರಳಯ್ಯ', 'ವೀರ ವಿರಾಗಿಣಿ ಅಕ್ಕಮಹಾದೇವಿ', 'ಶಿವಶರಣ ನನ್ನಯ್ಯ', 'ವಿಶ್ವಗುರು ಬಸವಣ್ಣ', 'ಅಂಬಿಗರ ಚೌಡಯ್ಯಾ' ಮುಂತಾದವು ವಚನಗಳಿಂದ ಶರಣ ಸಂಸ್ಕೃತಿಯನ್ನು ಎತ್ತಿ ಹಿಡಿಯುವಲ್ಲಿ ಪ್ರಸಿದ್ಧವಾಗಿವೆ. ಮತ್ತು ಹಲವಾರು ತಂಡಗಳು ಇಂದಿಗೂ ಈ ನಾಟಕಗಳನ್ನು ರಂಗದ ಮೇಲೆ ತರುತ್ತಿರುವರು. ಇವರು ಬರೆದ 'ಬರದ ಬೆಂಗುಡಿ' ಸಾಮಾಜಿಕ ನಾಟಕವಾಗಿದ್ದು ಹಲವಾರು ಪ್ರದರ್ಶನ ಏರ್ಪಡಿಸಿರುವರು.

ಭಾಲ್ಕಿ ಹಿರೇಮಠ ಸಂಸ್ಥಾನದ ಪೀಠಾಧೀಪತಿಗಳಾದ ಪೂಜ್ಯಶ್ರೀ ಡಾ. ಬಸವಲಿಂಗ ಪಟ್ಟದ್ದೇವರು (ಜನನ–೨೫–೮–೧೯೫೦), ಶರಣರ ಕುರಿತು ಹಲವಾರು ನಾಟಕಗಳನ್ನು ರಂಗದ ಮೇಲೆ ತರುವಲ್ಲಿ ಸಹಕಾರ ನೀಡಿರುವರು. 'ಶಿವಶರಣ ಹರಳಯ್ಯಾ' ನಾಟಕದಲ್ಲಿ ಹರಳಯ್ಯನ ಪಾತ್ರದಲ್ಲಿ ನಟಿಸಿ, ಭಕ್ತಿ ಪಂಥದ ನಾಟಕಗಳನ್ನು ಪ್ರದರ್ಶಿಸಿರುವರು.

ಭಾಲ್ಕಿಯ ಹಿರಿಯ ಸಾಹಿತಿ ಡಾ. ಜಿ.ಬಿ. ವಿಸಾಜಿಯವರು (ಶಿವಗಾಂಗೇಯ) (ಜನನ–೫–೧–೧೯೪೩) 'ಪ್ರತಿಫಲ' ನಾಟಕ ಬರೆದಿರುವರು. ಬೀದರ ಜಿಲ್ಲೆಯ ಪ್ರಸಿದ್ಧ ಡಪ್ಪಿನಾಟ, ಬಯಲಾಟ ಹಾಗೂ ತತ್ವಪದಕಾರರಾದ ಕೊಳ್ಳೂರು ಹುಸನಾ ಸಾಹೇಬರು ಕುರಿತು ಕೃತಿ ರಚಿಸಿರುವರು. ಭಾಲ್ಕಿಯ ಶ್ರೀ ವೀರಶೆಟ್ಟಿ ಬಾವುಗೆಯವರು ರಚಿಸಿದ 'ನಿರಂಜನ ಮೂರ್ತಿ ಅಲ್ಲಮಪ್ರಭು ದೇವರು' ನಾಟಕ ದಾಖಲಾರ್ಹವಾಗಿವೆ.

ಭಾಲ್ಕಿಯ ಸಾಹಿತಿ ಶರಣಯ್ಯಾ ಮಠಪತಿ (ಎಲದಗುಂಡಿ ಪರಮೇಶ್ವರ) ನಿವೃತ್ತ ಉಪನ್ಯಾಸಕರು (ಜನನ–೧೯೪೭) ಇವರು 'ಪಶ್ಚಾತಾಪ' ನಾಟಕವನ್ನು ರಚಿಸಿರುವರು.

ಸಾಹಿತಿ, ನಾಟಕಕಾರ, ಡಾ. ಬಸವರಾಜ ಸಬರದ ಅವರು 'ಅಭಿನಯ ಗಂಗೋತ್ರಿ' ಹವ್ಯಾಸಿ ರಂಗ ತಂಡವನ್ನು ಪ್ರಾರಂಭಿಸಿದರು, ನಾಟಕಗಳಲ್ಲಿ ಭಾಗವಹಿಸುವದರೊಂದಿಗೆ, ನಾಟಕಗಳಿಗೆ ರಂಗಗೀತೆಗಳನ್ನು ರಚಿಸಿರುವರು. ಅಲ್ಲದೇ ಅಸಂಗತ ನಾಟಕಗಳಾದ, 'ಪ್ರತಿರೂಪ', 'ಸ್ವಾಮಿ', ನಾಟಕಗಳಲ್ಲಿ ಜೀವನದ ಗೊಂದಲ, ಸಾಂಕೇತಿಕತೆ, ಅಸಂಗತತೆಯಿಂದ ಕೂಡಿದ್ದು ಯಶಸ್ವಿ ಪ್ರಯೋಗ ಕಂಡಿವೆ. ನಂತರ ಬಂಡಾಯ ಚಳುವಳಿಯೊಂದಿಗೆ ಗುರುತಿಸಿಕೊಂಡ ಇವರು, 'ರೆಕ್ಕೆ ಮೂಡಿದಾಗ', 'ಬೆಳ್ಳಿ, ಬೆಳಕಿನೆಡೆಗೆ', 'ಹುಲಿಗೆಮ್ಮ', ಮತ್ತು 'ನರಬಲಿ' (ಉಡುಪಿ ರಂಗಭೂಮಿಯಿಂದ ಬಹುಮಾನಿತ) ನಾಟಕಗಳನ್ನು ರಚಿಸಿದ್ದು ಇವು ಜಾನಪದ ಸೊಗಡಿನಿಂದ ಕೂಡಿದ್ದು, ಶೋಷಣೆ, ಅನಕ್ಷರತೆ, ಮೂಢನಂಬಿಕೆಗಳ ವಿರುದ್ಧ ಧ್ವನಿ ಎತ್ತಿವೆ. 'ಬೆಳ್ಳಕ್ಕಿ ಸಾಲು'

ಗೀತ ನಾಟಕವಾಗಿದೆ, ಇವರು ಬರೆದ ಬೀದಿ ನಾಟಕಗಳಾದ, ಮೂರು ಬೀದಿ ನಾಟಕಗಳು, ನಾಲ್ಕು ಬೀದಿ ನಾಟಕಗಳು ಪ್ರಸಿದ್ಧವಾಗಿವೆ. ಇವುಗಳಲ್ಲಿ ಹನುಮಾಯಣ, ರಂಪಾಯಣ, ರೇಣುಕಾ ಮೇಡಮ್‌ಗಳಲ್ಲಿ ಶೋಷಿತರ ಬದುಕನ್ನು ಚಿತ್ರಿಸಿರುವರು. ಜೊತೆಗೆ ಹಲವಾರು ಬಾನುಲಿ ನಾಟಕಗಳನ್ನೂ ರಚಿಸಿರುವರು.

ಸಾಹಿತಿ, ನಾಟಕಕಾರ, ಜಾನಪದ ತಜ್ಞ, ಡಾ. ರಾಜೇಂದ್ರ ಯರನಾಳೆ (ಕುಯವೀರಾ) (ಜನನ-೧೫-೧೦-೧೯೬೬)ಯವರು ಬರೆದ ನಾಟಕ 'ಗೌಡನ ತಂತ್ರ ರಾಣಿಗೆ ಮಂತ್ರ' (೧೯೮೭) ಏಕಾಂಕ ನಾಟಕದಲ್ಲಿ, ಸೌಂದರ್ಯವೇ ಸರ್ವಸ್ವ ಎಂದು ಅಹಂಕಾರದಿಂದ ಮೆರೆಯುವ ಮಗಳಿಗೆ ಸೌಂದರ್ಯಕ್ಕಿಂತ ಗುಣ ಮುಖ್ಯ ಎಂದು ಬಿಂಬಿಸಿರುವರು, ಇದು ಹಲವಾರು ಪ್ರಯೋಗ ಕಂಡಿದೆ. ಅಪ್ಪಟ ಬೀದರ ಭಾಷೆಯಲ್ಲಿ ರಚಿಸಿದ 'ಹುಗ್ಗಿ ತುಪ್ಪ ಮಜಾ ಮಜಾ ನೋಡಪ್ಪಾ' (೨೦೦೦) ಏಕಾಂಕ ನಾಟಕದಲ್ಲಿ ಎರಡೆರಡು ಹೆಸರುಗಳನ್ನು ಇಟ್ಟುಕೊಂಡಿದ್ದರಿಂದ ಆಗುವ ಅವಾಂತರಗಳನ್ನು ಹಾಸ್ಯಮಯವಾಗಿ ರೂಪಿಸಿರುವರು. ವರದಕ್ಷಿಣೆಯ ಅವಾಂತರಗಳ ಕುರಿತ 'ಭಿಕ್ಷುಕರೋ, ಹೆಡ್ಡರೋ' ಸಾಮಾಜಿಕ ನಾಟಕ ೫-೬ ಪ್ರಯೋಗ ಕಂಡಿದೆ. ಕನ್ನಡ ಸಾಹಿತ್ಯ ಪರಿಷತ್ತು ಬೀದರ ಪ್ರಕಟಿಸಿದ, ಬೀದರ ಜಿಲ್ಲೆಯ ಸಾಹಿತಿ-ಕಲಾವಿದರು (೨೦೦೪) ಕೃತಿ ಸಂಪಾದನೆ ಮಾಡಿರುವರು ಇದು ರಂಗ ಇತಿಹಾಸಕ್ಕೆ ಅಪೂರ್ವ ಕೊಡುಗೆಯಾಗಿದೆ.

ಕಲಾವಿದ ಡಾ. ಅನೀಲಕುಮಾರ ಮುಗಳಿ ಅವರು ಬರೆದ 'ಆಲದ ಮರ' ನಾಟಕ, ರಂಗ ಪ್ರಯೋಗದೊಂದಿಗೆ, ಆಕಾಶ ವಾಣಿ ಕಲಬುರಗಿಯಿಂದ (ನಿ. ಚಂದ್ರಗುಪ್ತ ಚಾಂದಕವಠೆ) ಮೂಡಿಬಂದಿದೆ.

ಕಲಾವಿದ ದಿ. ಶ್ರೀ ಬಸವರಾಜ ಕೊಡಗೆ ಅವರು ಬರೆದ 'ತಮಾಷಾ' ಬೀದಿ ನಾಟಕ, ಬೀದರ ಜಿಲ್ಲೆಯಾದ್ಯಂತ ಬೀದರ ಸಮುದಾಯದಿಂದ ೨೦೦ಕ್ಕೂ ಹೆಚ್ಚು ಪ್ರಯೋಗ ಕಂಡಿದೆ.

ಬೀದರಿನ ಹಿರಿಯ ಸಾಹಿತಿ ಎಸ್.ಎಮ್. ಜನವಾಡಕರ ಅವರು 'ಬುದ್ಧ ಗೆದ್ದ ಮಾರನ ಯುದ್ಧ' ಮತ್ತು 'ಹಸಿರು ಕ್ರಾಂತಿ' ನಾಟಕಗಳನ್ನು ಬರೆದಿರುವರು.

ಬೀದರಿನ ಶ್ರೀ ಎಸ್. ಬಿ. ಕುಚಬಾಳ ಇವರು ರಚಿಸಿದ ಸಾಮಾಜಿಕ ನಾಟಕಗಳಾದ 'ಮಾತೆಯ ಮಮತೆ', 'ಪ್ರೇಮಿಸಿದ ಹೆಣ್ಣು ಅರ್ಥಾತ್ ಸತ್ಯಶೀಲ ಸಂಗಮೇಶ', 'ಅತ್ತಿಗೆ ಅವತಾರ', 'ಪ್ರಪಂಚದ ಪಾಡು', 'ವರದಕ್ಷಿಣೆಯ ಪಿಡುಗು', 'ಕಲಿಯುಗದ ಕಂತ್ರಾಟ', 'ಹಿಂಗಾದರೆ ಹ್ಯಾಂಗ್', 'ಕಳ್ಳರ ಜಾತ್ರೆ', ಮುಂತಾದವು ಅಪ್ರಕಟಿತವಾಗಿದ್ದು ನಾಟಕ ಪ್ರದರ್ಶನ ಕಂಡಿವೆ.

ಬೀದರಿನ ಸಾಹಿತಿ, ಕಲಾವಿದ ಡಾ. ರಮೇಶ ಮೂಲಗೆ ಸದ್ಯ ಉದಗಿರನಲ್ಲಿ

ಸೇವೆ ಸಲ್ಲಿಸುತ್ತಿರುವರು. ೧೯೯೯ರಲ್ಲಿ ಇವರು ರಚಿಸಿದ 'ನಾ ಕಂಡ ಮನೆ' ನಾಟಕವನ್ನು ಪ್ರಕಟಿಸಿರುವರು.

ಬೀದರಿನ ಶ್ರೀ ರಾಮಬಾಣ ಕೆ.ಎಸ್. (ಜನನ-೧೯೫೫) ಅವರು 'ಒಂದಾಗಿ ಬಾಳೋಣ' (೨೦೦೪) ನಾಟಕ ರಚಿಸಿರುವರು.

ಭಾಲ್ಕಿಯ ಕವಿ, ಕಲಾವಿದ ಸಾಹಿತಿ ಡಾ. ವಿಕ್ರಮ ವಿಸಾಜಿ (ಜನನ-೧೯೭೬) ಸದ್ಯ ಕೇಂದ್ರೀಯ ವಿಶ್ವವಿದ್ಯಾಲಯ ಕಲಬುರ್ಗಿ ಕನ್ನಡ ವಿಭಾಗದ ಮುಖ್ಯಸ್ಥರಾಗಿ ಸೇವೆ ಸಲ್ಲಿಸುತ್ತಿದ್ದು, ಡಾ. ಚಂದ್ರಶೇಖರ ಕಂಬಾರರ ನಾಟಕಗಳು ಕೃತಿಯನ್ನು ಸಂಪಾದಿಸಿರುವರು.

ಕಲಾವಿದ, ಶಿಕ್ಷಕ ಎಮ್.ಎಸ್. ಮನೋಹರ ಅವರು 'ಮಾಟ ಮಂತ್ರ' ವೈಜ್ಞಾನಿಕ ಜಾಗೃತಿಯ ನಾಟಕ ರಚಿಸಿರುವರು.

ಬೀದರನಲ್ಲಿ ಆರಕ್ಷಕರಾಗಿ ಸೇವೆ ಸಲ್ಲಿಸುತ್ತಿರುವ ಶ್ರೀ ಪ್ರಭು ಮಾಲೆಯವರು 'ಮಹಾತ್ಮಾ ಜ್ಯೋತಿಬಾ ಫುಲೆ' ನಾಟಕವನ್ನು ಬರೆದಿರುವರು.

ಭಾಲ್ಕಿಯ ಸಾಹಿತಿ ಗಣಪತಿ ಭೂರೆ ಅವರು ಬರೆದ ಗ್ರಹಣ ಬಿಟ್ಟ ಚಂದ್ರ ನಾಟಕ ಅಚ್ಚಿನಲ್ಲಿದೆ.

ಮಹಿಳೆಯರಲ್ಲಿ ಮುಖ್ಯವಾಗಿ, ಹಿರಿಯ ಸಾಹಿತಿ ಸದ್ಯ ವಿಜಯಪೂರ ಮಹಿಳಾ ವಿಶ್ವ ವಿದ್ಯಾಲಯದ ಪ್ರಾಧ್ಯಾಪಕಿ ಡಾ. ವಿಜಯಶ್ರೀ ಸಬರದ ಅವರು 'ಉರಿಲಿಂಗ ಪೆದ್ದಿ' ಶರಣರ ಕುರಿತ ನಾಟಕ ಮತ್ತು 'ಹೂವಿನ ತೇರನೇರಿ ಹೂವಾದವರು' ನಾಟಕ ಬರೆದಿರುವರು.

ಶ್ರೀಮತಿ ಕಸ್ತೂರಿ ಪಟಪಳ್ಳಿಯವರು ಲಂಕೇಶರ ನಾಟಕಗಳ ಕುರಿತು ಪ್ರಬಂಧ ಮಂಡಿಸಿರುವರು.

ಕಥೆಗಾರ್ತಿ ಶ್ರೀಮತಿ ಅರುಂಧತಿ ಚಾಂದಕವಠೆ ಇವರು ಬರೆದ ವರದಕ್ಷಿಣೆ ಪಿಡುಗು ಕುರಿತು 'ಮನೆ ಮನೆಯ ಕಥೆ' ನಾಟಕ, ಸ್ವದೇಶಿ ವಿಚಾರಧಾರೆಯನ್ನು ಬಿಂಬಿಸುವ 'ಇದ್ದಿಲು ಪುಡಿ ಪ್ರಹಸನ', ಜಗಳದ ದುಷ್ಪರಿಣಾಮ ವಿವರಿಸುವ ಮಕ್ಕಳ ನಾಟಕ 'ಮಂಗನ ತೀರ್ಪು', ನಿಸರ್ಗ ಸಂಪತ್ತಿನ ಮಹತ್ವ ಎತ್ತಿ ತೋರಿಸುವ 'ಪರಿಸರ' ನಾಟಕ ರಚಿಸಿದ್ದು, ಅಪ್ರಕಟಿತ ಎಲ್ಲಾ ನಾಟಕಗಳು ರಂಗ ಪ್ರಯೋಗಗಳಾಗಿ ಯಶಸ್ವಿಯಾಗಿವೆ.

ಬಸವ ಸೇವಾ ಪ್ರತಿಷ್ಠಾನ ಬೀದರನ ಅಕ್ಕ ಅನ್ನಪೂರ್ಣಾ ತಾಯಿಯವರು ಮತ್ತು ಡಾ. ಗಂಗಾಂಬಿಕಾ ಪಾಟೀಲ ಅಕ್ಕನವರು ಶರಣ ಉದ್ಯಾನದಲ್ಲಿ, ಶರಣ,

ಶರಣೆಯರ ವಚನಗಳನ್ನು, ಜೀವನ ಚರಿತ್ರೆಗಳನ್ನು, ನೃತ್ಯ ರೂಪಕ, ನಾಟಕಗಳ ಮೂಲಕ ಕಟ್ಟಿಕೊಡುವ ರಂಗ ಕಾಯಕದಲ್ಲಿ,ತೊಡಗಿರುವರು.'ಮಹಾಮಹಿಮ ಸಂಗನ ಬಸವ' ಕೃತಿಯನ್ನು ರಚಿಸಿರುವರು. 'ಉಳವಿಯೆಡೆಗೆ', 'ಸಂಗನಬಸವಣ್ಣ', 'ಮೂಢತನ ಬಿಡಿ', 'ಕಲ್ಯಾಣ ಕತ್ತಲಾಯಿತು', ಮುಂತಾದ ನಾಟಕಗಳನ್ನು ರಚಿಸಿ ರಂಗಕ್ಕೆ ತಂದಿರುವರು.

ಕಲಾವಿದರಾದ ಶ್ರೀ ಚಂದ್ರಗುಪ್ತ ಚಾಂದಕವಠೆ, ಶ್ರೀ ಶಂಭುಲಿಂಗ ವಾಲದೊಡ್ಡಿ, ಪ್ರೊ. ಸಂಗ್ರಾಮ ಎಂಗಲೇ ಮುಂತಾದವರು, ನಮ್ಮ ಜಿಲ್ಲೆಯ ಜಾನಪದ ಪ್ರಸಂಗಗಳನ್ನು, ಪ್ರಚಲಿತ ಸಮಸ್ಯೆಗಳನ್ನಿಟ್ಟುಕೊಂಡು, ಹಲವಾರು ಬೀದಿ ನಾಟಕಗಳನ್ನು ರಚಿಸಿ, ಪ್ರದರ್ಶನ ಮಾಡಿಸಿರುವರು.

# ಬೀದರ ಜಿಲ್ಲೆಯ ಹವ್ಯಾಸಿ ರಂಗತಂಡಗಳು

## ೧. ಮಿತ್ರವೃಂದ ಹವ್ಯಾಸಿ ಕಲಾತಂಡ ಬೀದರ:

ಬೀದರಿನ ಹವ್ಯಾಸಿ ರಂಗಭೂಮಿಗೆ ಹೊಸ ಆಯಾಮ ದೊರಕಿದ್ದು ಸ್ವಾತಂತ್ರ್ಯಾನಂತರವೇ ಎಂದು ತಿಳಿದು ಬರುವದು. ಐವತ್ತರ ದಶಕದಲ್ಲಿ ಶಾಲೆ ಕಾಲೇಜುಗಳಲ್ಲಿ ಏಕಾಂಕ ನಾಟಕಗಳನ್ನು ಮಾಡಿಸುವಲ್ಲಿ ಶಿಕ್ಷಕರ ಪಾತ್ರ ಮುಖ್ಯವಾಗಿತ್ತು. ೧೯೫೦ರಲ್ಲಿ ಮಹಾರಾಷ್ಟ್ರದ ಮರಾಠಿ ನಾಟಕಗಳ ಪ್ರಭಾವದಿಂದ ಶಿಕ್ಷಕರಾದ ಶ್ರೀ ದತ್ತಾ ಮೈಲೂರಕರ ಮತ್ತು ಸಂಗಡಿಗರು 'ಮಿತ್ರವೃಂದ' ಹವ್ಯಾಸಿ ತಂಡದಿಂದ ಶ್ರೀ ಅತ್ರೇಯವರ, ಸಂಗೀತ ಸಾಷ್ಟಾಂಗ ನಮಸ್ಕಾರ, ಲಗ್ನಾಚಿ ಬೇಡಿ, ಕೌಡಿ ಚುಂಬಕ, ಮುಂತಾದ ಮರಾಠಿ ನಾಟಕಗಳನ್ನು ಪ್ರದರ್ಶಿಸಿದರು. ಹಿಂದಿಯಲ್ಲಿ ದಹೇಜ, ಪೈಸಾ, ಸಮಾಜ ಕೆ ಬಂಧನ, ಹಮ್ ಏಕ್ ಹೈ, ಹಾಗೂ ಕನ್ನಡದಲ್ಲಿ ಹಣ ಹದ್ದು, ಸತ್ಯಕ್ಕೆ ಸಾವಿಲ್ಲ, ಅಪರಾಧಿ ಮುಂತಾದ ನಾಟಕಗಳನ್ನು ರಚಿಸಿ ಪ್ರಯೋಗಿಸಿದರು. ಇವರು ಯಂಗ್ ಸ್ಟಾರ ಆರ್ಕೆಷ್ಟ್ರಾ ಸ್ಥಾಪಿಸಿ ಇನ್ನೂರಕ್ಕೂ ಮಿಕ್ಕಿ ಸಂಗೀತ ಕಾರ್ಯಕ್ರಮ ನಡೆಸಿ ಕೊಟ್ಟಿರುವರು. ಇವರೊಂದಿಗೆ ಬೆಳೆದು ಬಂದವರಲ್ಲಿ ಬಸವರಾಜ, ಚಂದ್ರಶೇಖರ ಚಕ್ಕಿ, ವಾಮನರಾವ ಕುಲಕರ್ಣಿ, ಕಲಾವಿದರು ಪ್ರಸಿದ್ಧಿ ಪಡೆದರು.

ಮರಾಠೀ ಸಾಹಿತ್ಯಮಂಡಳ ಬೀದರದಿಂದ ಶ್ರೀ ಕಾಳಿದಾಸರಾವ ದೇಶಪಾಂಡೆ, ಶ್ರೀ ದೇವೇಂದ್ರ ಕಮಲ, ಅನೀಲ ದೇಶಪಾಂಡೆ, ಸಂಗಮಕರ ವಕೀಲ ಮುಂತಾದವರು ಸೇರಿ ಮರಾಠಿ ನಾಟಕಗಳಾದ 'ತರುಣ ತುರ್ಕಮಾಹತಾರೆ ಅರ್ಕ, ವರ್ಚಾ ಮಜಲಾ ರಿಕಾಮಾ, ಚಾಂದಣೆ ಸಿಂಪಿತ ಜಾ' ಮುಂತಾದವುಗಳನ್ನು ಅಭಿನಯಿಸಿರುವರು.

## ೨. ಅಕ್ಷಯ ಹವ್ಯಾಸಿ ಕಲಾತಂಡ ಬೀದರ:

೧೯೭೦ರಲ್ಲಿ ಬೀದರಿನ ಕಲಾಸಕ್ತರು ಸೇರಿ ಸ್ಥಾಪಿಸಿದ ಅಕ್ಷಯ ಹವ್ಯಾಸಿ ತಂಡದಲ್ಲಿ ಬಿ.ವ್ಹಿ.ಬಿ ಕಾಲೇಜಿನ ಪ್ರೊ. ಬಸವರಾಜ ಅಂಬಲಗಿ ಶ್ರೀ ಮೂರ್ತಿ, ಶ್ರೀ ಐ.ಎಸ್. ನವಲಿ, ಎಫ್.ಪಿ.ಎ.ಐ.ನ ಶ್ರೀ ಮುಷ್ತಾಕ್ ಅಲಿ, ಡಾ. ವಿಶಾಲಾಕ್ಷಿ ಕರಡ್ಡಿ ಮುಂತಾದವರು ಕೂಡಿಕೊಂಡು, ಹಲವಾರು ನಾಟಕಗಳನ್ನು ಪ್ರದರ್ಶಿಸಿರುವರು. ಬಾಕಿ ಇತಿಹಾಸ, ಕುರಿ, ಜೈಸಿದ ನಾಯ್ಕ, ಮುಂತಾದ ನಾಟಕಗಳು ಮನಸೂರೆಗೊಂಡವು.

ಹೊಸ ಅಲೆಯ ನಾಟಕಗಳು ಜನರನ್ನು ಆಕರ್ಷಿಸಿಸುವಲ್ಲಿ ಯಶಸ್ವಿಯಾಗಿವೆ. ನಂತರದ ದಿನಗಳಲ್ಲಿ ಸಂಘಟಕರ ಕೊರತೆಯಿಂದ ಚಟುವಟಿಕೆ ಕಡಿಮೆಯಾಗಿವೆ.

## ೩. ಸಮುದಾಯ ಸಾಂಸ್ಕೃತಿಕ ಸಂಘಟನೆ ಬೀದರ:

ಕಲೆ ಕಲೆಗಾಗಿ ಅಲ್ಲ, ಬದುಕಿಗಾಗಿ, ಜನರಿಗಾಗಿ. ಎಂಬ ಆದರ್ಶ ಧ್ಯೇಯದೊಂದಿಗೆ ರಾಜ್ಯಾದ್ಯಂತ ಪ್ರತಿ ಜಿಲ್ಲೆಯಲ್ಲಿಯೂ ಹುಟ್ಟಿಕೊಂಡ ಸಮುದಾಯ ತಂಡ ತುರ್ತು ಸ್ಥಿತಿಯ ಕರಾಳ ಧೋರಣೆಗಳಿಗೆ ಪ್ರತಿರೋಧ ಸೂಚಿಸುತ್ತಲೇ, ಜನ ಸಾಮಾನ್ಯರ ಅಜ್ಞಾನ, ಮೂಢನಂಬಿಕೆ, ಅಂಧಶ್ರದ್ಧೆಗಳನ್ನು ಹೋಗಲಾಡಿಸಲು, ವೈಜ್ಞಾನಿಕ ಮನೋಭಾವದೊಂದಿಗೆ ಮಾನವೀಯ ಮೌಲ್ಯಗಳನ್ನು ರಂಗ ಮಾಧ್ಯಮದ ಮೂಲಕ ಎತ್ತಿ ಹಿಡಿಯುತ್ತ ಬಂದಿರುವರು. ಬೀದರ ಸಮುದಾಯ, ಜಿಲ್ಲೆಯಾದ್ಯಂತ ಮಾತ್ರವಲ್ಲದೆ, ನಾಡಿನ ಉದ್ದಗಲಕ್ಕೂ ಸಂಚರಿಸಿ, ಸದಭಿರುಚಿಯ ಸಾಮಾಜಿಕ ಕಳಕಳಿಯನ್ನು ಹವ್ಯಾಸಿ ನಾಟಕ, ಬೀದಿ ನಾಟಕ, ರಂಗಗೀತೆಗಳ ಮೂಲಕ ೪೦ ವರ್ಷಗಳಿಂದ ಕಾರ್ಯನಿರತವಾಗಿದೆ. ಜನರ ನಡುವಿನಿಂದ ಬಂದು, ಜನರೆಡೆಗೆ ರಂಗ ಕಲೆಯನ್ನು ಒಯ್ಯುತ್ತಲಿರುವರು.

೧೯೭೭ರಲ್ಲಿ ಬಿದರಿನ ಹಿರಿಯ ಪತ್ರಕರ್ತರಾದ ಶ್ರೀ ವಿಶ್ವನಾಥ ಪಾಟೀಲ (ದಮನ- ಹಿಂದಿ ದಿನ ಪತ್ರಿಕೆಯ ಸಂಪಾದಕರು), ಶ್ರೀ ಹಣಮಂತಪ್ಪಾ ಪಾಟೀಲ, ಶ್ರೀ ಎಸ್.ಕೆ. ಜೋಶಿ ಮುಂತಾದ ಹಿರಿಯರು ಬೀದರ ಸಮುದಾಯ ತಂಡ ಕಟ್ಟಿದರು. ಹೊಸ ರಂಗ ಪ್ರತಿಭೆಗಳಿಗೆ ವೇದಿಕೆ ಒದಗಿಸಿಕೊಟ್ಟರು. ಆಧುನಿಕ ರಂಗ ಪರಿಕರಗಳು, ಬೆಳಕು, ಧ್ವನಿಗಾಗಿ ವಿಶೇಷವಾದ ತಾಂತ್ರಿಕ ಸಲಕಲಣೆಗಳನ್ನು ಖರೀದಿಸಿ, ಸಂಗ್ರಹಿಸಿ ಸುಸಜ್ಜಿತ ರಂಗ ತಂಡವನ್ನು ಕಟ್ಟಿದರು.

## ರಂಗ ಪರಂಪರೆ:/ ಹವ್ಯಾಸಿ ನಾಟಕಗಳು:

೧೯೭೭ರಲ್ಲಿ ಸಮುದಾಯದ ಮೊದಲ ನಾಟಕವಾಗಿ ಮಕ್ಕಳಿಂದ 'ಅಲಿಬಾಬಾ ಮತ್ತು ನಲವತ್ತುಕಳ್ಳರು' ನಾಟಕವನ್ನು ಉತ್ಸಾಹಭರಿತ ಮಕ್ಕಳಿಂದ ವೈಭವಯುತವಾಗಿ ನಿರ್ಮಿಸಿದರು. ಬೀದರ, ಬೆಂಗಳೂರನಲ್ಲಿ ಪ್ರದರ್ಶನ ಮಾಡಿದರು. ನಂತರ 'ಮಾರೀಚನ ಬಂಧುಗಳು', 'ಕೆರೆಗೆ ಹಾರ', ಮತ್ತು 'ಕತ್ತೆ ಮತ್ತು ಧರ್ಮ' ನಾಟಕಗಳಿಂದ ಹೊರಹೊಮ್ಮಿದ ಹಲವಾರು ಪ್ರತಿಭೆಗಳಲ್ಲಿ ಶ್ರೀ ವಿಶ್ವನಾಥ ಪಾಟೀಲ ಅವರ ಪುತ್ರರಾದ ಶ್ರೀ ಮಹೇಶ ಪಾಟೀಲ ಇವರು ಹೈದ್ರಾಬಾದ ಕರ್ನಾಟಕದಲ್ಲಿಯೇ ಪ್ರಥಮರಾಗಿ, ದೆಹಲಿಯ ಎನ್.ಎಸ್.ಡಿ. ಪದವಿ ಪಡೆದವರು. ಸದ್ಯ ಮುಂಬಾಯಿಯಲ್ಲಿ ಟಿ.ವ್ಹಿ. ಮತ್ತು ಹಿಂದಿ ಚಲನಚಿತ್ರಗಳಲ್ಲಿ ಕೆಲಸ ಮಾಡುತ್ತಲಿರುವರು. ಶ್ರೀ ಬಸವರಾಜ ಕೊಡಗೆ ಇವರು ನೀ.ನಾ.ಸಂ. ಹೆಗ್ಗೋಡಿನಲ್ಲಿ ನಿರ್ದೇಶನದಲ್ಲಿ ಪದವಿ ಪಡೆದರು. ಮೈಸೂರಿನ ರಂಗಾಯಣದಲ್ಲಿ ಕಲಾವಿದರಾಗಿ ರಾಷ್ಟ್ರ ಅಂತರಾಷ್ಟ್ರದಲ್ಲೂ ರಂಗಾಯಣ ತಂಡದೊಂದಿಗೆ

ಪ್ರದರ್ಶನ ನೀಡಿರುವರು. ಜಾನಪದ ಗಾಯಕ ಶ್ರೀ ಶಂಭುಲಿಂಗ ವಾಲದೊಡ್ಡಿಯವರು ತಮ್ಮ ಇಂಪಾದ ಸಿರಿಕಂಠದಿಂದ ಮನಸೂರೆಗೊಂಡು ಸಮುದಾಯ ತಂಡದ ಸಕ್ರೀಯ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿರುವರು.

೧೯೮೨ರಲ್ಲಿ ಕರ್ನಾಟಕ ನಾಟಕ ಅಕ್ಯಾಡೆಮಿ ಸಹಯೋಗದಲ್ಲಿ ಶ್ರೀ ಜಯತೀರ್ಥ ಜೋಶಿ ಯವರು ರಂಗ ಶಿಬಿರ ಮಾಡಿದರು. ಆಗ ತೆಂಡೂಲ್ಕರರ 'ಸದ್ದು! ವಿಚಾರಣೆ ನಡೆಯುತ್ತಿದೆ' ನಾಟಕ ಮಾಡಿಸಿದರು. ೧೯೮೨ರಲ್ಲಿ ಅಕ್ಬರ್ ದಿ ಗ್ರೇಟ್, ಧ್ವನಿಬೆಳಕು ನಾಟಕ ಮತ್ತು ಶ್ರೀ ಎಮ್.ಎಸ್. ಸತ್ಯು ಅವರ 'ಬರ' ಚಲನಚಿತ್ರ ಬೀದರನಲ್ಲಿ ಚಿತ್ರೀಕರಣವಾದಾಗ ಸಮುದಾಯದ ಕಲಾವಿದರೂ ಭಾಗವಹಿಸಿ ಹೊಸ ಅನುಭವ ಪಡೆದರು.

೧೯೮೬ರಲ್ಲಿ ಶ್ರೀ ಸಿ. ಬಸವಲಿಂಗಯ್ಯನವರ ನಿರ್ದೇಶನದಲ್ಲಿ ಕರ್ನಾಟಕ ನಾಟಕ ಅಕಾಡೆಮಿ ಬೆಂಗಳೂರು ಸಹಯೋಗದಲ್ಲಿ ರಂಗಶಿಬಿರ ಮಾಡಿದರು. ಪ್ರಸನ್ನರ 'ಒಂದುಲೋಕ ಕಥೆ' ನಾಟಕ ಬೀದರನಲ್ಲಿ ಎರಡು ಪ್ರಯೋಗ, ಮತ್ತು ರಾಯಚೂರು, ಸುರಪುರ ಕಲಬುರಗಿ, ದಾವಣಗೆರೆ, ಬೆಂಗಳೂರು ಮತ್ತು ಮಂಡ್ಯದಲ್ಲಿ ೩೦ ಕಲಾವಿದರೊಂದಿಗೆ ತಿರುಗಾಟ ನಡೆಸಿ ಯಶಸ್ವಿ ಪ್ರಯೋಗಗಳಾದವು. ಹೊಸ ಕಲಾವಿದರು ಹವ್ಯಾಸಿ ನಾಟಕಗಳ ಹಾಡು ಅಭಿನಯದಿಂದ ಆಕರ್ಷಿತರಾದರು. ಶಂಭುಲಿಂಗ ವಾಲ್ದೊಡ್ಡಿಯವರ ಹಿಮ್ಮೇಳ ನಾಟಕಕ್ಕೆ ಕಳೆ ಕಟ್ಟಿತು.

೧೯೮೭ರಲ್ಲಿ ಸಿ. ಬಸವಲಿಂಗಯ್ಯನವರ ನಿರ್ದೇಶನದಲ್ಲಿ ಶೇಕ್ಸಪಿಯರ್‌ರ 'ಮಿಡ್ ಸಮರ್ ನೈಟ್ ಡ್ರೀಮ್ಸ್'ನ ಅನುವಾದ ಕೆ.ಎಸ್. ನಿಸಾರ ಅಹಮೆದ್‌ರ 'ನಡು ಬೇಸಿಗೆಯ ಇರುಳ ಸವಿಗನಸು' ನಾಟಕ ಬೀದರ ಹಾಗೂ ರಾಯಚೂರಿನಲ್ಲಿ ಪ್ರದರ್ಶನಗೊಂಡಿತು. ರಂಗ ಚಳುವಳಿಗೆ ಹೊಸ ಆಯಾಮ ನೀಡುವಲ್ಲಿ ಸಹಕಾರಿಯಾಯಿತು.

ಶ್ರೀ ಬಸವರಾಜ ಕೊಡಗೆ ಅವರ ನಿರ್ದೇಶನದಲ್ಲಿ ನಿಕೊಲಾಯ್ ಗೋಗೊಲ್‌ರ 'ಪ್ರೆಸಿಡೆಂಟರಿಗೆ ಪತ್ರ' (ಸಾಹೇಬರು ಬರುತ್ತಿದ್ದಾರೆ) ನಾಟಕದ ಮೂರು ಪ್ರಯೋಗ ಮಾಡಿದರು. ಪ್ರೆಸಿಡೆಂಟ (ಚಂದ್ರಗುಪ್ತ ಚಾಂದಕವಠೆ), ಸಾಹೇಬ (ಡಾ. ಪ್ರಾಣೇಶ ಗೂಡೂರ) ಹಾಗೂ ಇನ್ನಿತರರು ತಮ್ಮ ಅಭಿನಯದಿಂದ ನಾಟಕಕ್ಕೆ ಕಳೆತಂದು ಕೊಟ್ಟರು. ನಾಟಕವನ್ನು ಬೀದರಿನ ಹಳೆಯ ನಗರ ಸಭೆಯ ರಂಗಮಂದಿರದಲ್ಲಿ ಪ್ರದರ್ಶಿಸಿಸಲಾಯಿತು.

೧೯೮೮ರಲ್ಲಿ ಸಮುದಾಯ ತನ್ನ ದಶವಾರ್ಷಿಕ ಕಾರ್ಯಕ್ರಮದ ಅಂಗವಾಗಿ ಶ್ರೀ ಬಸವರಾಜ ಕೊಡಗೆ ಅವರ ನಿರ್ದೇಶನದಲ್ಲಿ ಪೂರ್ಣಚಂದ್ರ. ತೆಜಸ್ವಿಯವರ 'ತಬರನಕಥೆ' (ನಾಟಕ ರೂಪ-ಆರ್. ನಾಗೇಶ) ಯಶಸ್ವಿ ಮೂರು ಪ್ರದರ್ಶನ ಕಂಡಿತು.

ತಬರ (ವ್ಹಿ.ಎಸ್. ಕೋದಂಡರಾಮ), ಪೊಲೀಸ್ (ಎಮ್.ಎಸ್. ಮನೋಹರ) ತಮ್ಮ ನಟನೆಯಿಂದ ಮಿಂಚಿದರು. ಶಂಭುಲಿಂಗ ವಾಲದೊಡ್ಡಿಯವರ ಸಂಗೀತ, ಹಾಡುಗಳಿಂದ ನಾಟಕಕ್ಕೆ ಕಳೆ ಕಟ್ಟಿದರು.

೧೯೯೮ರಲ್ಲಿ ಬೀದರ ಸಮುದಾಯ ತನ್ನ ದಶಮಾನೋತ್ಸವದ ಅಂಗವಾಗಿ, ಕೋಮು ಗಲಭೆಯಿಂದ ಸಂತ್ರಸ್ತವಾದ ಬೀದರನಲ್ಲಿ, ಹತ್ತುದಿನಗಳ ಕಾಲ 'ಕೋಮು ಸೌಹಾರ್ದಕ್ಕಾಗಿ ರಂಗಮೇಳ' ಆಯೋಜಿಸಿತ್ತು. ಅಪೂರ್ಣವಾದ ರಂಗ ಮಂದಿರದ ಜಾಗೆಯಲ್ಲಿ ಆಯೋಜಿಸಲಾಗಿತ್ತು. ರಾಯಚೂರು ಸಮದಾಯದ-ಚಾರ್ವಾಕ, ಪಂಚಮ ನಾಟಕಗಳು. ಕಲಬುರಗಿ ರಂಗ ಮಾಧ್ಯಮದ ಹರಕೆಯ ಕುರಿ, ಬಸವಕಲ್ಯಾಣದ ಗಂಗಾಳ ಮಂಟಪದ 'ಶ್ರೀ ಕೃಷ್ಣಾರ್ಜುನ ಕಾಳಗ' ಬಯಲಾಟ, ಬೀದರ ಅಭಿನಯ ಗಂಗೋತ್ರಿ ತಂಡದಿಂದ 'ಸಂಗೊಳ್ಳಿರಾಯ ಸರದಾರ' ಮತ್ತು ಮಕ್ಕಳ ನಾಟಕಗಳನ್ನು ಯಶಸ್ವಿಯಾಗಿ ಪ್ರದರ್ಶಿಸಿದರು. ಅಭೂತ ಪೂರ್ವವಾಗಿ ಮೂಡಿಬಂದ ನಾಟಕೋತ್ಸವದಿಂದ ಪ್ರಭಾವಿತರಾಗಿ ಅಂದಿನ ಜಿಲ್ಲಾಧಿಕಾರಿಗಳು ಜಿಲ್ಲಾ ರಂಗ ಮಂದಿರ ನಿರ್ಮಾಣಕ್ಕೆ ಚಾಲನೆ ನೀಡಿದರು.

ಬೀದರ ಜಿಲ್ಲಾ ಸಾಕ್ಷರತಾ ಆಂದೋಲನದಲ್ಲಿ ಸಕ್ರೀಯವಾಗಿ ಭಾಗವಹಿಸಿದ ಸಮುದಾಯ ತಂಡ ಚಂದ್ರಗುಪ್ತ ಚಾಂದಕವಠೆ ನಿರ್ದೇಶನದಲ್ಲಿ 'ಅಕ್ಷರ ಮಹಾರಾಜ' ನಾಟಕ ಮಾಡಿದರು. ಶಂಭುಲಿಂಗ ವಾಲ್ದೊಡ್ಡಿ ಮತ್ತು ಗೆಳೆಯರು ಸಾಕ್ಷರತಾ ಧ್ವನಿಸುರುಳಿಯಲ್ಲಿ ಸಂಗೀತ ನೀಡಿದರು. ಬೀದರ ಸಾಕ್ಷರತಾ ಸಮಿತಿಯಿಂದ ನಿರ್ಮಿತವಾದ 'ಅರಿವು' ಟೆಲಿಚಿತ್ರ, ಆರ್. ನಾಗೇಶರ ನಿರ್ದೇಶನದಲ್ಲಿ ಹುಮನಾಬಾದ ತಾಲೂಕಿನ ಕರಪಾಕನಳ್ಳಿಯಲ್ಲಿ ಚಿತ್ರೀಕರಿಸಲಾಯಿತು. ಸಮುದಾಯದ ಎಲ್ಲಾ ಕಲಾವಿದರು ಭಾಗವಹಿಸಿದರು. ಇದು ದೂರದರ್ಶನದಿಂದ ಹಲವಾರು ಬಾರಿ ಮರುಪ್ರಸಾರಗೊಂಡಿದೆ.

೧೯೯೭ರಲ್ಲಿ ಕರ್ನಾಟಕ ನಾಟಕ ಅಕಾಡೆಮಿ. ಬೆಂಗಳೂರು ಏರ್ಪಡಿಸಿದ 'ರಂಗ ವಸಂತ' ನಾಟಕೋತ್ಸವದಲ್ಲಿ, ದೇವನಾಗೇಶ ನಿರ್ದೇಶನದಲ್ಲಿ, ಬರಗೂರು ರಾಮಚಂದ್ರಪ್ಪನವರ 'ಕೋಟೆ' ನಾಟಕ, ಬೀದರ ಹಾಗೂ ಹೋಸಪೇಟೆಯಲ್ಲಿ ಪ್ರದರ್ಶನವಾಯಿತು. ಶಂಭುಲಿಂಗ ವಾಲ್ದೊಡ್ಡಿ ಅವರ ಇಂಪಾದ ಹಾಡುಗಳು ಮನಮುಟ್ಟುವಂತಿದ್ದವು. ಡಾ. ಅನೀಲಕುಮಾರ ಮುಗಳಿ, ಚಂದ್ರಗುಪ್ತ ಚಾಂದಕವಠೆ, ಕೋದಂಡರಾಮ, ನೀಲಾ ಕೆ. ಮುಂತಾದವರು ಉತ್ತಮವಾಗಿ ಅಭಿನಯಿಸಿದರು.

೧೯೯೩ರಲ್ಲಿ ಬಿ.ಜೆ.ವ್ಹಿಎಸ್, ಮತು ಸಮುದಾಯ ತಂಡದಿಂದ ಶಂಕರಯ್ಯಾ ಘಂಟಿ ನಿರ್ದೇಶನದಲ್ಲಿ 'ಬಾಯಿ ಬಂದ ಬಾದಶಾಹ ಪುರಾಣ' ನಾಟಕ ಅಭಿನಯಿಸಲಾಯಿತು. ನಾಟಕದಲ್ಲಿ ಚಂದ್ರಶೇಖರ ಚಕ್ಕಿ, ಮುಂತಾದವರು ಹಳ್ಳಿ,

ಹಳ್ಳಿಗಳಲ್ಲಿ ನಾಟಕ ಮಾಡಿ ಜನಮೆಚ್ಚುಗೆ ಪಡೆದರು. ಶ್ರೀ ಮಹೇಶ ವಿ. ಪಾಟೀಲರು 'ಜ್ಞಾನ ಕಾ ಮಂದಿರ ಸಬಸೆ ಊಂಚಾ' ಹಿಂದಿ ನಾಟಕ ಮಾಡಿಸಿದರು.

೧೯೯೪ರಲ್ಲಿ ಕರ್ನಾಟಕ ನಾಟಕ ಅಕಾಡೆಮಿ ಬೆಂಗಳೂರು, ಶ್ರೀಮತಿ ಬಿ. ಜಯಶ್ರೀಯವರ ನಿರ್ದೇಶನದಲ್ಲಿ ಯುವ ಪ್ರತಿಭೆಗಳಿಗೆ ಸಮಗ್ರ ರಂಗ ಶಿಬಿರ ಏರ್ಪಡಿಸಲಾಗಿತ್ತು. ಸಂಗೀತ ನೀಡಲು ಮಹಾನ್ ರಂಗಕರ್ಮಿ ಬಿ.ವಿ. ಕಾರಂತರು ಆಗಮಿಸಿದ್ದರು. ಆಗ ಅವರು ತಿಳಿಸಿಕೊಟ್ಟ 'ಅವಾದ್ಯ ಸಂಗೀತ' ಸಂಯೋಜಿಸುವದರ ಕುರಿತು ನೀಡಿದ ತರಬೇತಿ ಕಲಾವಿದರನ್ನು ನಿಪುಣರನ್ನಾಗಿ ಮಾಡಿಸಿತು. ಗಿರೀಶ ಕಾರ್ನಾಡರ 'ನಾಗ ಮಂಡಲ' ನಾಟಕ ಭರ್ಜರಿಯಾಗಿ ಮೂಡಿಬಂತು.

೧೯೯೫ರಲ್ಲಿ ಪುರಂದರ ಭರಣಿ ಅವರು 'ಕತ್ತಲಿನಿಂದ ಬೆಳಕಿನೆಡೆಗೆ' ನಾಟಕ ಯಶಸ್ವಿಯಾಗಿ ಮೂಡಿಬಂತು. ಶ್ರೀ ಶಂಭುಲಿಂಗ ವಾಲ್ದೊಡ್ಡಿಯವರು ನಾಟಕ ಅಕಾಡೆಮಿಯ ಸದಸ್ಯರಾಗಿ ಆಯ್ಕೆಯಾಗಿದ್ದು ಸಮುದಾಯ ತಂಡ ಹಾಗೂ ಬೀದರ ಜಿಲ್ಲೆಯಲ್ಲಿ ರಂಗ ಚಟುವಟಿಕೆಗಳು ಭರ್ಜರಿಯಾಗಿ ಪ್ರಾರಂಭವಾದವು.

ಶ್ರೀಮಹೇಶ ಪಾಟೀಲರು, ದಲಿತ ಕಲಾವಿದರ ರಂಗ ತರಬೇತಿ ಶಿಬಿರದ ನಿರ್ದೇಶಕರಾಗಿ, ಡಾ. ಸಿದ್ದಲಿಂಗಯ್ಯನವರ 'ಪಂಚಮ', ಹಾಗೂ 'ಕತ್ತೆ ಮತ್ತು ಧರ್ಮ' ನಾಟಕಗಳನ್ನು ಮಾಡಿಸಿದರು.

೧೯೯೬ರಲ್ಲಿ ರಂಗಾಯಣದ ಕಲಾವಿದರಾದ ಶ್ರೀ.ಬಸವರಾಜ ಕೊಡಗೆ ಅವರು ಸುಶೀಲಕುಮಾರ ಸಿಂಹರ 'ಸಿಂಹಾಸನ ಖಾಲಿ ಇದೆ' ನಾಟಕವನ್ನು ನಿರ್ದೇಶಿಸಿದರು. ಮೂರು ಪ್ರದರ್ಶನ ಏರ್ಪಡಿಸಲಾಗಿತ್ತು. ಚಂದ್ರಗುಪ್ತ ಚಾಂದಕವಠೆ, ಪ್ರಾಣೇಶ ಗೂಡೂರ, ತೇಜಸ್ವಿ ಚಾಂದಕವಠೆ, ರಶ್ಮಿ ತಿಳಿ ಇವರ ನಟನೆ ಹಾಗೂ ಶಂಭುಲಿಂಗ ವಾಲ್ದೊಡ್ಡಿಯವರ ಸಂಗೀತ ನಾಟಕದ ಯಶಸ್ಸಿಗೆ ಸಹಕಾರಿಯಾಯಿತು.

೧೯೯೭ರಲ್ಲಿ ರಂಗಮಂದಿರ ಪೂರ್ಣಗೊಳಿಸಲು ಒತ್ತಾಯಿಸಿ, ಗಿರೀಶ ಕಾರ್ನಾಡರ 'ಅಗ್ನಿ ಮತ್ತು ಮಳೆ' ನಾಟಕ ಬಸವರಾಜ ಕೊಡಗೆಯವರ ನಿರ್ದೇಶನ ದಲ್ಲಿ ಮತ್ತು ಶಶಿಕಲಾ ಕೊಡಗೆ ಅವರ ವಸ್ತ್ರ ವಿನ್ಯಾಸದಲ್ಲಿ, ನಾಟಕ ಮೂರು ಪ್ರಯೋಗ ಮಾಡಿದರು. ಚಾಂದಕವಠೆ, ಚಕ್ಕಿ, ಪ್ರಾಣೇಶ ಗುಡೂರ, ಯಂಗ್ಯೆ, ತೇಜಸ್ವಿ ಚಾಂದಕವಠೆ, ಮನೋಹರ, ಶಂಭುಲಿಂಗ ವಾಲ್ದೊಡ್ಡಿ ನೈಜ ಅಭಿನಯದಿಂದ ಮನಸೂರೆ ಗೊಂಡರು.

ಜಿಲ್ಲಾ ನಾಟಕೋತ್ಸವದ ಅಂಗವಾಗಿ, ಸಮುದಾಯದ 'ಸಿಂಹಾಸನ ಖಾಲಿ ಇದೆ', ಅಭಿನಯ ಗಂಗೋತ್ರಿಯ ಮಕ್ಕಳ ನಾಟಕ 'ಹೆತ್ತೊಡಲು, ಮತ್ತು ಮಂಗನ ತೀರ್ಪು', ಕಲಬುರಗಿ ಸಮುದಾಯದ 'ಉಚಲ್ಯಾ' ಮತ್ತು 'ಹೆಮ್ಮಾರಿ ರಸ

ಪುರಾಣ'ಯಶಸ್ವಿಯಾದವು. ಬಸವರಾಜ ಕೊಡಗೆಯವರು ಅಕ್ಕಮಹಾದೇವಿ ಮಹಿಳಾ ಕಾಲೇಜಿನ ಹೆಣ್ಣುಮಕ್ಕಳಿಂದ 'ಸ್ವಾತಂತ್ರ್ಯ ಚಳುವಳಿ' ನಾಟಕವನ್ನು ನಿರ್ದೇಶಿಸಿದರು.

೧೯೯೮ರಲ್ಲಿ ಮಕ್ಕಳಿಗಾಗಿ ರಂಗ ತರಬೇತಿ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು, ಉದಯ ಕುಲಕರ್ಣಿ, ಹಾಗೂ ರಂಗಾಯಣದ ಕಲಾವಿದೆ ಎಮ್.ಎಸ್. ಗೀತಾ ಅವರಿಂದ ನಿರ್ದೇಶಿಸಿದ ಕೆ.ವ್ಹಿ. ಸುಬ್ಬಣ್ಣನವರ 'ಬೆಟ್ಟಕ್ಕೆ ಚಳಿಯಾದರೆ....' ನಾಟಕ ಬೆಂಗಳೂರು ದೂರದರ್ಶನದಿಂದ ಪ್ರಸಾರವಾಯಿತು. ಬೀದರಿನ ಚಿಕ್ಕ ಮಕ್ಕಳಾದ ಗೀತಾ ಕೋರೆ, ಅಜಯ ಕುಲಕರ್ಣಿ, ಚಾಂದಕವಠೆಯವರ ಮಕ್ಕಳಾದ ಶಿವಗುಪ್ತ, ತರಂಗಿಣಿ, ತೇಜಸ್ವಿ, ವಸುಧಾ ಅಣವೇಕರ ಮುಂತಾದವರು ತಮ್ಮ ನೈಜ ಅಭಿನಯದಿಂದ ಜನ ಮನ ಸೂರೆಗೊಂಡರು. ಭಾರತ ಸ್ವಾತಂತ್ರ್ಯ ಸುವರ್ಣ ಮಹೋತ್ಸವದ ಅಂಗವಾಗಿ ೩ ದಿನಗಳ ನಾಟಕೋತ್ಸವ ಹಮ್ಮಿಕೊಳ್ಳಲಾಗಿತ್ತು.

೧೯೯೮ರಲ್ಲಿ ಕರ್ನಾಟಕ ನಾಟಕ ಅಕಾಡೆಮಿ ಬೆಂಗಳೂರು ಹಮ್ಮಿಕೊಂಡ 'ದಲಿತ ರಂಗ ತರಬೇತಿ' ಶಿಬಿರದಲ್ಲಿ, ಶ್ರೀ ಮಾಲತೇಶ ಬಡಿಗೇರ ನಿರ್ದೇಶನದಲ್ಲಿ ಡಾ. ಶಿವರಾಜ ಕುಲಕರ್ಣಿ ಅವರ ನಾಟಕ 'ಗುಡಸಲಿನ ಗುಡದಾಳಿ' ಮೂಡಿಬಂತು. ಶಂಭುಲಿಂಗ ವಾಲ್ದೊಡ್ಡಿ, ಪಾರ್ವತಿ ಜೆ.ಡಿ, ವಿಜಯಕುಮಾರ ಸೋನಾರೆ, ದೇವದಾಸ ಚಿಮಕೊಡ, ಯೇಸುದಾಸ, ಸುನೀಲ ಕಡ್ಡೆ ಮುಂತಾದವರು ಉತ್ತಮ ಅಭಿನಯ ನೀಡಿದರು. ಬೆಂಗಳೂರಿನಲ್ಲಿ 'ಸಮತಾ ರಂಗೋತ್ಸವ'ದಲ್ಲಿಯೂ ನಾಟಕವನ್ನು ಪ್ರಯೋಗಿಸಿ, ಪ್ರಶಸ್ತಿ ಪಡೆದರು.

೧೯೯೯ರಲ್ಲಿ ಎನ್.ಎಸ್.ಡಿ ಪ್ರಾದೇಶಿಕ ಕೇಂದ್ರ, ಮತ್ತು ಕರ್ನಾಟಕ ನಾಟಕ ಅಕಾಡೆಮಿ ಬೆಂಗಳೂರು ಸಹಯೋಗದಲ್ಲಿ, ವಿಶ್ವ ಶಾಂತಿಗಾಗಿ "ಯುದ್ಧ ಬೇಡ ಶಾಂತಿ ಬೇಕು", ಕರೆ ನೀಡುತ್ತ, ಸಮುದಾಯ ತನ್ನ ೨೦ನೇ ವರ್ಷದ ಕೊಡುಗೆಯಾಗಿ ಮನಜರ 'ಜಲ' ನಾಟಕವನ್ನು, ಬಸವರಾಜ ಕೊಡಗೆ ಅವರು ನಿರ್ದೇಶಿಸಿದರು. ವಿನ್ಯಾಸ ಶಶಿಕಲಾ ಕೊಡಗೆ, ಸಂಗೀತ ಶಂಭುಲಿಂಗ ವಾಲ್ದೊಡ್ಡಿ ಅವರದು. ಮೂರು ದಿನ ನಾಟಕ ನಡೆಯಿತು. ಚಂದ್ರಗುಪ್ತ ಚಾಂದಕವಠೆ, ಸಂಗ್ರಾಮ ಎಂಗ್ಳೆ, ಸುನೀಲ ಕಡ್ಡೆ, ರೂಪಾ ಸಂಗಮಕರ ಮುಂತಾದವರು ಉತ್ತಮವಾಗಿ ಅಭಿನಯಿಸಿದರು.

ಕಲಬುರಗಿ ಆಕಾಶವಾಣಿಗಾಗಿ, ಅಸಗರ್ ವಜಾಹತ್ ಅಲಿ ಅವರ ಹಿಂದಿಮೂಲ, ಅನುವಾದ ತಿಪ್ಪೇಸ್ವಾಮಿ 'ರಾವಿ ನದಿಯ ದಂಡೆಯಲ್ಲಿ' ಬಾನುಲಿ ನಾಟಕವನ್ನು ಚಂದ್ರಗುಪ್ತ ಚಾಂದಕವಠೆ ನಿರ್ದೇಶನದಲ್ಲಿ ಪ್ರಸ್ತುತಪಡಿಸಲಾಯಿತು.

೨೦೦೨ರಲ್ಲಿ ಬಸವರಾಜ ಕೊಡಗೆ ಅವರು ಮಕ್ಕಳಿಗಾಗಿ ಬೇಸಿಗೆ ರಂಗ ಶಿಬಿರವನ್ನು ಹಮ್ಮಿಕೊಂಡರು. ನಾಟಕ 'ಕಸ್ತೂರಿ ರಾಜಾ' ಚೆನ್ನಾಗಿ ಮೂಡಿಬಂದಿತು.

ಆದರೆ ಅನಾರೋಗ್ಯದ ನಿಮಿತ್ತ ಬಸವರಾಜ ಕೊಡಗೆ ಅವರು ದೈವಾಧೀನರಾದರು. ಇದು ಅವರ ಕೊನೆಯ ನಿರ್ದೇಶನದ ನಾಟಕವಾಯಿತು. ಬೀದರ ರಂಗ ಭೂಮಿಗೆ, ಸಾಂಸ್ಕೃತಿಕ ಕ್ಷೇತ್ರಕ್ಕೆ ಅಪಾರವಾದ ಕೊಡುಗೆ ನೀಡಿದ ಕೊಡಗೆ ಅಪರೂಪದ ಕಲಾಪ್ರೇಮಿಯಾಗಿದ್ದರು.

೨೦೧೩ರಲ್ಲಿ ಸಮುದಾಯದ ಸಹಕಾರದಲ್ಲಿ ಟೂರಿಂಗ ಟಾಕೀಸ ಧಾರವಾಡ, ಬೆಂಗಳೂರು ತಂಡದಿಂದ ಹುಚ್ಚರ ಸಂತೆ ನಾಟಕ ಆಯೋಜಿಸಲಾಗಿತ್ತು. ನಟ ಸಂಕೇತ ಕಾಶಿಯವರು ಆಗಮಿಸಿದ್ದರು.

೨೦೧೬ರಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ನಾಟಕ ಅಕಾಡೆಮಿ ಬೆಂಗಳೂರು, ವಿಶೇಷ ಘಟಕ ಯೋಜನೆಯಡಿ ಇಪ್ಪತ್ತು ದಿನಗಳ ರಂಗ ತರಬೇತಿ ಕಾರ್ಯಾಗಾರ ಹಮ್ಮಿಕೊಳ್ಳಲಾಗಿತ್ತು. ಶಿಬಿರ ನಿರ್ದೇಶಕರಾಗಿ ಅರುಣ ಬಿ ಮಾನ್ವಿ ನಿ.ನಾ.ಸಂ. ಪದವೀಧರ, ಇವರು ಪ್ರೊ ಚಂದ್ರಶೇಖರ ಪಾಟೀಲರ ಗೋಕರ್ಣದ ಗೌಡಶಾನಿ ನಾಟಕವನ್ನು ಬೀದರ ರಂಗ ಮಂದಿರದಲ್ಲಿ ದಿ.೪-೮-೨೦೧೬ರಂದು ಪ್ರಸ್ತುತ ಪಡಿಸಿದರು.

ಅಪ್ಪಟ ಗ್ರಾಮೀಣ ಪ್ರದೇಶದಿಂದ ಬಂದ ೧೨ ವಿದ್ಯಾರ್ಥಿಗಳು, ೮ ವಿದ್ಯಾರ್ಥಿನಿಯರಿಗೆ ನಾಟಕದ ಎಲ್ಲ ಹಂತಗಳ ತರಬೇತಿ ನೀಡಿದರು. ನಾಟಕ ಅಕಾಡೆಮಿ ಸದಸ್ಯರಾದ ಹಿರಿಯ ಕಲಾವಿದ ವ್ಹಿ.ಎನ್. ಅಕ್ಕಿಯವರ ನೇತ್ರತ್ವದಲ್ಲಿ ಶಿಬಿರ ಯಶಸ್ವಿಯಾಗಿ ಮೂಡಿಬಂದಿತು. ಕಲಾವಿದರಾದ ಲಕ್ಷ್ಮಣ ಮಚಕುರೆ, ರಾಮ ಖಂಡ್ರೆ, ಸಿದ್ದಾರ್ಥ ದೊಡ್ಡೆ, ರಾಜಶ್ರೀ ಕೋಟೆ, ಸತೀಶಕುಮಾರ ಬೋರೆ, ದೇವಿದಾಸ ಎಸ್, ಮೀನಾಕ್ಷಿ ಮೇತ್ರೆ, ವಿಜಯಲಕ್ಷ್ಮಿ ಬಿ, ಮತ್ತು ಶ್ರೀಕಾಂತ ಕುಂದನ್, ರಾಧಿಕಾ ಬ್ಯಾನರ್ಜಿ, ಎಸ್ತಾರಾಣಿ ಮೇತ್ರೆ, ರೋಹಿಣಿ ಸಿಂಗ, ಸದಮಾಲಾ ದೊಡ್ಡಮನಿ, ಆಕಾಶ ದೊಡ್ಡೆ, ಮಹೇಂದ್ರ ಉತ್ತಮವಾಗಿ ಅಭಿನಯಿಸಿದರು.

ವೈವಿಧ್ಯಮಯಾವಾದ ಕಾರ್ಯಕ್ರಮಗಳಿಂದ, ಉತ್ತಮ ಕಲಾವಿದರನ್ನು, ರಂಗಕರ್ಮಿಗಳನ್ನು ನಿರ್ಮಿಸುವಲ್ಲಿ ಸಮುದಾಯ ಸಂಘಟನೆ ನಾಡಿನ ಸಾಂಸ್ಕೃತಿಕ ಲೋಕಕ್ಕೆ ಅಪಾರವಾದ ಕೊಡುಗೆ ನೀಡಿದೆ. ಕರ್ನಾಟಕ ನಾಟಕ ಅಕಾಡೆಮಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೀದರ ಜಿಲ್ಲಾಡಳಿತದ ಸಹಕಾರದಿಂದ, ಬೀದರಿನಲ್ಲಿ ರಂಗಭೂಮಿ ಹುಲುಸಾಗಿ ಬೆಳೆಯಲು ಕಾರಣೀಭೂತವಾಗಿವೆ.

**ಜಾಥಾಗಳು/ ಬೀದಿ ನಾಟಕಗಳು:**

೧೯೭೭ರಲ್ಲಿ ಸರ್ವಾಧಿಕಾರಿ ವಿರೋಧಿ ಸಾಂಸ್ಕೃತಿಕ ಜಾಥಾ, ೧೯೮೦ರಲ್ಲಿ ನರಗುಂದ ರೈತ ಬಂಡಾಯ ಕಲಾ ಜಾಥಾ, ಬೆಲೆಏರಿಕೆ, ಪತ್ರೆ ಸಂಗಪ್ಪನ ಕೊಲೆಯ

ಪ್ರಸಂಗ, ಬೀದಿ ನಾಟಕಗಳನ್ನು ಜಿಲ್ಲೆಯಾದ್ಯಂತ ಸೈಕಲ್ ಮೇಲೆ ಹೋಗಿ ಹಳ್ಳಿಗಳಲ್ಲಿ ಪ್ರದರ್ಶಿಸಿದರು. ೧೯೮೨ರಲ್ಲಿ ಹೊಸ ಮೌಲ್ಯಗಳತ್ತ ಸಾಂಸ್ಕೃತಿಕ ಜಾಥಾ ದಲ್ಲಿ ಹೆಣ್ಣು, ಬೆಲೆಏರಿಕೆ, ಕೂಲಿಯ ತಂಗಿ ಬೀದಿ ನಾಟಕಗಳನ್ನು ಮಾಡಿಸಿದರು.

೧೯೮೮ರಲ್ಲಿ ಬರ ವಿರೋಧಿ ಜಾಥಾದಲ್ಲಿ ನಿ. ಬಸವರಾಜ ಕೊಡಗೆ ಅವರ ತಮಾಷಾ ಬೀದಿ ನಾಟಕವನ್ನು ಸೈಕಲ್ ಮೇಲೆ ಹೋಗಿ ೧೦೦ಕ್ಕೂ ಹೆಚ್ಚು ಹಳ್ಳಿಗಳಲ್ಲಿ ಪ್ರದರ್ಶಿಸಿದರು. ೧೯೮೭ರಲ್ಲಿ ಯುದ್ಧ ಬೇಡ, ಶಾಂತಿ ಬೇಕು ಎಂದು ೧೦೦ ಅಡಿಗಳ ಬಣ್ಣದ ಚಿತ್ರವನ್ನು ವಿಶ್ವ ಶಾಂತಿಗಾಗಿ ಬಣ್ಣದ ನಡೆಯನ್ನು ಆಯೋಜಿಸಿದ್ದರು. ೧೯೯೦ರಲ್ಲಿ ಮೂಢನಂಬಿಕೆ ವಿರುದ್ಧ, ಭಾರತ ಜ್ಞಾನವಿಜ್ಞಾನ ಸಮಿತಿ ಮತ್ತು ಸಮುದಾಯದಿಂದ ಕಲಿಕಾ ಜಾಥಾ ಹಮ್ಮಿಕೊಳ್ಳಲಾಗಿತ್ತು. ೧೯೯೧ರಲ್ಲಿ ಸಾಕ್ಷರತಾ ಜಾಥಾ, ೧೯೯೨ರಲ್ಲಿ ವಿಜ್ಞಾನ ಜಾಥಾ ಹೀಗೆ ಪ್ರಗತಿ ಪರ ಸಂಘಟನೆಗಳೊಂದಿಗೆ ಜೊತೆಗೂಡಿ ಪ್ರಗತಿಪರ ವಿಚಾರಗಳನ್ನು ಜನರತ್ತ ಕೊಂಡೊಯ್ಯುವಲ್ಲಿ ಬೀದಿ ನಾಟಕಗಳನ್ನು ಬಳಸಿಕೊಳ್ಳುತ್ತಲಿರುವರು. ಕಲೆ ಕಲೆಗಾಗಿ ಅಲ್ಲ, ಬದುಕಿಗಾಗಿ ಎಂದು ಜನರತ್ತ ರಂಗಭೂಮಿಯನ್ನು ಒಯ್ಯುತ್ತಲಿರುವರು. ಬೀದಿ ನಾಟಕಗಳು ಜನ ಸಾಮಾನ್ಯರಿಗೆ ನಾಟಕೀಯವಾಗಿ ವಿಷಯ ಮುಟ್ಟಿಸುವ ಉತ್ತಮ ಸಂವಹನದ ಮಾಧ್ಯಮವನ್ನಾಗಿ ಬಳಸಿಕೊಳ್ಳುತ್ತಲಿರುವುದು ಸಹ ರಂಗ ಭೂಮಿಯು ಬದಲಾವಣೆಯತ್ತ ಮುಖ ಮಾಡಿದಂತಾಗಿದೆ.

## ೪. 'ಅಭಿನಯ ಗಂಗೋತ್ರಿ' ಹವ್ಯಾಸಿ ಕಲಾತಂಡ ಬೀದರ:

ಬೀದರಿನ ಹವ್ಯಾಸಿ ಕಲಾವಿದರು, ಸಾಹಿತಿಗಳು, ರಂಗಪ್ರೇಮಿಗಳು ಸೇರಿ, ೧೯೮೩ರಲ್ಲಿ 'ಅಭಿನಯ ಗಂಗೋತ್ರಿ' ಹವ್ಯಾಸಿ ಕಲಾ ತಂಡ, ಡಾ. ಬಸವರಾಜ ಸಬರದರ ಅಧ್ಯಕ್ಷತೆಯಲ್ಲಿ ಸ್ಥಾಪನೆಯಾಯಿತು. ಹಿರಿಯರಾದ ಪ್ರೊ. ಬಸವರಾಜ ಅಂಬಲಗಿ, ಪ್ರೊ. ಸಂಜೀವ ದೇಶಪಾಂಡೆ, ಪ್ರೊ. ಬಿ.ಎಚ್. ಪಾಟೀಲ, ಚಂದ್ರಗುಪ್ತ ಚಾಂದಕವಠೆ, ಚಂದ್ರಶೇಖರ ಚಕ್ಕಿ, ಮುಂತಾದ ಕಲಾವಿದರು ಪಾಲ್ಗೊಂಡರು. ನಾಟಕಗಳ ಜೊತೆಗೆ ಸಾಹಿತ್ಯ, ವಿಮರ್ಶೆ, ವಿಚಾರ ಸಂಕಿರಣ, ಕವಿಗೋಷ್ಠಿ ಮುಂತಾದ ಚಟುವಟಿಕೆಗಳನ್ನು ಹಮ್ಮಿಕೊಳ್ಳುತ್ತ, ಸಾಂಸ್ಕೃತಿಕ ವಾತಾವರಣ ನಿರ್ಮಿಸತೊಡಗಿದರು. ೧೯೮೪ರಲ್ಲಿ ಡಾ. ಸಬರದರು ಬರೆದ ರಾಜಕೀಯ ವಿಡಂಬನೆಯ 'ಬೆಳಕಿನೆಡೆಗೆ' ಮತ್ತು ಅಸಂಗತ ನಾಟಕ 'ಸ್ವಾಮಿ', ಮತ್ತು ಶಾಂತಪ್ಪನವರು ರಚಿಸಿದ 'ಬಿಡಿಓ' ನಾಟಕಗಳನ್ನು ಪ್ರದರ್ಶಿಸಲಾಯಿತು. ೧೯೮೫ರಲ್ಲಿ ಅಖಿಲ ಭಾರತ ಸಾಹಿತ್ಯ ಸಮ್ಮೇಳನದಲ್ಲಿ, ಚಂದ್ರಶೇಖರ ಪಾಟೀಲರ 'ಗೋಕರ್ಣದ ಗೌಡಶಾನಿ' (ನಿ. ಬಸವರಾಜ ಅಂಬಲಗಿ) ಡಾ. ಸಬರದ, ನಾರಾಯಣ ಕುಲಕರ್ಣಿ, ಬಿ.ಎಚ್. ಪಾಟೀಲರ ನೈಜ ಅಭಿನಯದಲ್ಲಿ ಮೂಡಿಬಂತು.

೧೯೮೭ ರಲ್ಲಿ ಕಲಾಮಹೋತ್ಸವದಲ್ಲಿ ಚಂದ್ರಶೇಖರ ಪಾಟೀಲರ 'ಕುಂಟಾ ಕುಂಟಾ ಕುರವತ್ತಿ' ಹಾಗೂ ಚಂದ್ರಶೇಖರ ಕಂಬಾರರ 'ಖರೋಖರ' ನಾಟಕಗಳು (ನಿ. ಚಂದ್ರಗುಪ್ತ ಚಾಂದಕವಠೆ) ಜನ ಮನ ರಂಜಿಸಿದವು. ಚಂದ್ರಗುಪ್ತ ಚಾಂದಕವಠೆ, ಚಂದ್ರಶೇಖರ ಚಕ್ಕಿ, ಮುಂತಾದವರು ನಾಟಕಕ್ಕೆ ರಂಗೇರಿಸಿದರು. ೧೯೮೭ರಲ್ಲಿ 'ಸಂಗೊಳ್ಳಿ ರಾಯ ಸರದಾರ' ಐತಿಹಾಸಿಕ ನಾಟಕ (ನಿ. ನಾರಾಯಣ ಕುಲಕರ್ಣಿ, ಸಂಗೀತ. ಶಂಭುಲಿಂಗ ವಾಲ್ದೊಡ್ಡಿ) ೨೫ ಕಲಾವಿದರ ತಂಡದೊಂದಿಗೆ, ಬೀದರ, ಹಳ್ಳಿಖೇಡ, ಭಾಲ್ಕಿ, ಬಸವಕಲ್ಯಾಣ, ಔರಾದ, ಹುನಾಬಾದಗಳಲ್ಲಿ ಪ್ರದರ್ಶನ ಏರ್ಪಡಿಸಲಾಯಿತು ಕಲಾವಿದರಾದ ಡಾ. ಪ್ರಾಣೇಶ ಗುಡೂರ, ಚಕ್ಕಿ, ಪಾಟೀಲ, ಸುನಿತಾ ತೆಲಂಗ, ಚಾಂದಕವಠೆ ಔಚಿತ್ಯಪೂರ್ಣ ಅಭಿನಯದಿಂದ ಜನ ಮೆಚ್ಚುಗೆ ಪಡೆದರು. ಅಕ್ಕಮಹಾದೇವಿ ಮಹಿಳಾ ಕಾಲೇಜಿನ ವಿಧ್ಯಾರ್ಥಿನಿಯರಿಗಾಗಿ 'ವೀರರಾಣಿ ಕಿತ್ತೂರು ಚೆನ್ನಮ್ಮ' (ನಿ. ಡಾ. ಪ್ರಾಣೇಶ ಗುಡೂರ) ನಾಟಕ ಬೀದರ, ಹಳ್ಳಿಖೇಡ ಸಕ್ಕರೆ ಕಾರಖಾನೆ ಯಲ್ಲಿ ಅಭಿನಯಿಸಲಾಯಿತು.

೧೯೯೦ರಲ್ಲಿ ನೀ.ನಾ.ಸಂ. ಹೆಗ್ಗೋಡು ತಂಡ, ಕಲಬುರಗಿಯ ರಂಗಮಾಧ್ಯಮದ 'ಕೇಳು ಜನಮೇಜಯ', ಸೇಡಂನ ಪ್ರಭಾಕರ ಜೋಶಿಯವರ ತಂಡದ 'ಕತ್ತಲೆ ದಾರಿ ದೂರ' ನಾಟಕ, ರಂಗ ತಂಡಗಳನ್ನು ಆಹ್ವಾನಿಸಿ ಬೀದರಿನಲ್ಲಿ ನಾಟಕೋತ್ಸವವನ್ನು ಆಯೋಜಿಸಲಾಗಿತ್ತು. ಡಾ. ದ.ರಾ. ಬೇಂದ್ರೆಯವರ 'ಜಾತ್ರೆ' ನಾಟಕ (ನಿ. ಚಂದ್ರಗುಪ್ತ ಚಾಂದಕವಠೆ)ದಲ್ಲಿ ಡಾ. ಅನೀಲಕುಮಾರ ಮುಗಳಿ ಹುಚ್ಚಾಪುರದ ದೊರೆಯಾಗಿ ರಂಜಿಸಿದರು. ಮತ್ತು ಶ್ರೀ ಚಂದ್ರಕಾಂತ ಕುಸನೂರರ ಅಸಂಗತ ನಾಟಕ 'ರತ್ತೋರತ್ತೋ ರಾಯನ ಮಗಳೇ' ನಿ. ಚಂದ್ರಗುಪ್ತ ಚಾಂದಕವಠೆ, ಚಕ್ಕಿ, ಡಾ.ಪ್ರಾಣೇಶ ಗುಡೂರ ಲವಲವಿಕೆಯ ಅಭಿನಯದಿಂದ ಮಿಂಚಿದರು. ೧೯೯೭ರಲ್ಲಿ ಚಂದ್ರಶೇಖರ ಪಾಟೀಲರ 'ಕೊಡೆಗಳು' (ನಿ.ಚಂದ್ರಗುಪ್ತ ಚಾಂದಕವಠೆ) ಅಭಿನಯಿಸಲಾಯಿತು.

೧೯೯೭ರಲ್ಲಿ ಶ್ರೀ ಮಹೇಶ ಪಾಟೀಲರಿಂದ 'ರಂಗಭೂಷಣ' ಶಿಬಿರವನ್ನು ಏರ್ಪಡಿಸಲಾಗಿತ್ತು. ರಂಗ ನಾಟಕಗಳ ನಿರ್ಮಾಣ ಮತ್ತು ನೇಪಥ್ಯ ಚಟುವಟಿಕೆ ಕುರಿತು ೧೦ ದಿನ ೨೦ ಕಲಾವಿದರಿಗೆ ತರಬೇತಿ ನೀಡಿದರು. ರಂಗದ ಹಿಂದೆ ನೇಪಥ್ಯ ಕಲಾವಿದರ ಕೌಸಲ್ಯವನ್ನು ತಿಳಿಸಿಕೊಡಲಾಯಿತು.

೧೯೯೭ರಲ್ಲಿ ಮಕ್ಕಳಿಗಾಗಿ ಬೇಸಿಗೆಯ ರಂಗ ಶಿಬಿರವನ್ನು ಆಯೋಜಿಸಲಾಗಿತ್ತು. ೩೦ ಪುಠಾಣಿ ಮಕ್ಕಳಿಂದ, ಗುಮ್ಮಕೇರಿ ರಚಿತ 'ಹೆತ್ತೊಡಲು', ಮತ್ತು ಶ್ರೀಮತಿ ಅರುಂಧತಿ ಚಾಂದಕವಠೆ ರಚಿಸಿದ 'ಮಂಗನ ತೀರ್ಪು' ನಾಟಕಗಳಲ್ಲಿ ಅದ್ಭುತವಾಗಿ ನಟಿಸಿದರು. ೩ ಪ್ರಯೋಗಗಳಾದವು. ಸತ್ಯಕಾಮ ಮುಗಳಿ, ಕಾಂಚನಾ, ಚಾಂದಕವಠೆ

ಅವರ ಮಕ್ಕಳಾದ ಶಿವಗುಪ್ತ, ತರಂಗಿಣಿ, ತೇಜಸ್ವಿ ಮತ್ತು ಪವನ, ನಾಗರಾಜ ಮೆಚ್ಚುಗೆ ಗಳಿಸಿದರು.

ಆಕಾಶವಾಣಿ ಕಲಬುರಗಿಗಾಗಿ ಡಾ. ಅನಿಲಕುಮಾರ ಮುಗಳಿ ರಚನೆ ಮತ್ತು ನಿರ್ದೇಶನದಲ್ಲಿ 'ಆಲದ ಮರ' ನಾಟಕ ಪ್ರಸ್ತುತಪಡಿಸಲಾಯಿತು. ಶ್ರೀಮತಿ ಭಾರತಿ ವಸ್ತ್ರದ, ಮುಗಳಿ, ಸಂಗ್ರಾಮ ಯಂಗ್ಲೇ, ತೇಜಸ್ವಿ ಚಾಂದ ಕವತೆ, ಚಂದ್ರಗುಪ್ತ ಚಾಂದಕವತೆ ತಮ್ಮ ಕಂಠಸಿರಿಯನ್ನು ಮೆರೆದರು. ಮಕ್ಕಳಿಗಾಗಿ, ಯುವಕರಿಗಾಗಿ, ಮಹಿಳೆಯರಿಗಾಗಿ ಹವ್ಯಾಸಿ ರಂಗಭೂಮಿಯ ಬೆಳವಣಿಗೆಯಲ್ಲಿ ೧೯೮೫ರಿಂದ ಚಂದ್ರಗುಪ್ತ ಚಾಂದಕವತೆ ಅಧ್ಯಕ್ಷತೆಯಲ್ಲಿ ಅಭಿನಯ ಗಂಗೋತ್ರಿ, ತನ್ನ ಸೇವೆ ಸಲ್ಲಿಸುತ್ತಲಿದೆ.

## ಕರ್ನಾಟಕ ಬರಹಗಾರರ ಮತು ಕಲಾವಿದರ ಸಂಘ ಬೀದರ:

ಜಾನಪದ ತಜ್ಞ, ಹಿರಿಯ ಸಾಹಿತಿ, ಡಾ. ಜಗನ್ನಾಥ ಹೆಬ್ಬಾಳೆ ಅವರ ಅಧ್ಯಕ್ಷತೆಯಲ್ಲಿ ಕರ್ನಾಟಕ ಬರಹಗಾರರ ಮತ್ತು ಕಲಾವಿದರ ಸಂಘವನ್ನು ಪ್ರಾರಂಭಿಸಿರುವರು. ನಾಡಿನ ಖ್ಯಾತ ಸಾಹಿತಿ, ಕಲಾವಿದರನ್ನು ಬೀದರಿಗೆ ಆಹ್ವಾನಿಸಿ ಅವರಿಂದ ಹಲವಾರು ನಾಟಕಗಳನ್ನು, ಸಾಹಿತ್ಯಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ ಬಂದಿರುವರು. ಸಂಘ ಸದಾ ಚಟುವಟಿಕೆ ಕೇಂದ್ರವಾಗಿದೆ. ೧೯೯೭ರಲ್ಲಿ ಡಾ. ಬರಗೂರು ರಾಮಚಂದ್ರಪ್ಪನವರ 'ಕೋಟೆ' ನಾಟಕ ಶ್ರೀ ಆರ್.ಬಿ. ಚಂದ್ರಕಾಂತ ನಿರ್ದೇಶನದಲ್ಲಿ ಮಾಡಿಸಿದರು. ಈ ನಾಟಕದಲ್ಲಿ ಹಲವಾರು ಪ್ರತಿಭೆಗಳು ತಮ್ಮ ನೈಜ ಅಭಿನಯದಿಂದ ನಾಟಕ ಯಶಸ್ವಿಗೊಳಿಸಿದರು. ಬೀದರ, ಅಲ್ಲದೇ ತೆಲಂಗಾಣದ ಜಹಿರಾಬಾದನಲ್ಲಿ ನಡೆದ ಶರಣ ಸಮ್ಮೇಳನದಲ್ಲಿ, ಮತ್ತು ಗುಲಬರ್ಗಾ ವಿಶ್ವವಿದ್ಯಾಲಯ ಅಂತರ್ ಕಾಲೇಜು ಸ್ಪರ್ಧೆಯಲ್ಲಿ ಕಲಬುರಗಿಯಲ್ಲಿ, ಹಾಗೂ ಹೊಸಪೇಟೆಯಲ್ಲಿಯೂ ಪ್ರದರ್ಶಿಸಿರುವರು. ಕುಮಾರಿ ವಿಜಯಲಕ್ಷ್ಮಿ ಪಾಟೀಲ ಅತ್ಯುತ್ತಮ ನಟಿಯೆಂದು ಬಹುಮಾನ ಪಡೆದರು. ಟಿ.ಎಮ್. ಮಚ್ಚೆ, ಜಗನ್ನಾಥ ಕಮಲಾಪುರೆ, ಬಂಡಯ್ಯಾ ಸ್ವಾಮಿ ಹೀಗೆ ಹಲವಾರು ಯುವಕ, ಯುವತಿಯರನ್ನು ಹವ್ಯಾಸಿ ರಂಗಭೂಮಿಗೆ ಪರಿಚಯಿಸುವಲ್ಲಿ ಸಂಘ ಶ್ಲಾಘನೀಯ ಕಾರ್ಯ ಮಾಡುತ್ತಿದೆ.

## ೬. ಬೀದರ ಹವ್ಯಾಸಿ ಕಲಾ ತಂಡ:

ಹವ್ಯಾಸಿ ಕಲಾವಿದ ಪ್ರೊ, ಸಂಗ್ರಾಮ ಎಂಗ್ಲೇ ಅವರ ಅಧ್ಯಕ್ಷತೆಯಲ್ಲಿ ೧೯೯೭ರಲ್ಲಿ ಸ್ಥಾಪನೆಗೊಂಡ ಬೀದರ ಹವ್ಯಾಸಿ ಕಲಾತಂಡ ಹೊಸ ಮುಖಗಳಿಗೆ ಅವಕಾಶ ಮಾಡಕೊಡುತ್ತಲಿದೆ. ಹಲವಾರು ನಾಟಕಗಳನ್ನು ಮಾಡಿಸಿರುವರು. ಎನ್. ಕೆಯವರ ನಾಟಕವಾಧರಿಸಿದ 'ಯಮನ ದರ್ಬಾರು', ಮತ್ತು 'ಕತ್ತಲಲ್ಲಿ ಕಂಡ ಬೆಳಕು' (ಪರಿಕಲ್ಪನೆ, ನಿರ್ದೇಶನ ಡಾ. ಅನೀಲಕುಮಾರ ಮುಗಳಿ) ನಾಟಕಗಳನ್ನು, ಬೀದರ, ಜಲಸಂಗಿ,

ಇಮಾಮಪೂರಗಳಲ್ಲಿ ಮಾಡಿಸಿರುವರು. ಚಳಕಾಪೂರದಲ್ಲಿ 'ಅಂಧಕಾರ' ನಾಟಕ, (ನಿ.ಅನೀಲ ಬಿರಾದಾರ) ಹಾಗೂ ಪ್ರೊ. ಸಂಗ್ರಾಮ ಎಂಗ್ಲೇ ಅವರ ನಿರ್ದೇಶನದಲ್ಲಿ 'ಏನಾದರೂ ಆಗು ಮೊದಲು ಮಾನವನಾಗು' ಗೀತ ರೂಪಕದ ಹಲವಾರು ಪ್ರಯೋಗ ಮಾಡಿಸಿರುವರು. ಮೂಢನಂಬಿಕೆಯನ್ನು ದೂರ ಮಾಡುವ ಸಲುವಾಗಿ ಇವರ ತಂಡದಿಂದ ಬಿ.ಜಿ.ವಿ.ಎಸ್. ನಿಂದ 'ಪವಾಡ ರಹಸ್ಯ ಬಯಲು' ಕಾರ್ಯಕ್ರಮಗಳನ್ನು ಹಳ್ಳಿಗಳಲ್ಲಿ ನೀಡಿ ಜನಮೆಚ್ಚುಗೆ ಪಡೆದಿರುವರು.

ಅಕ್ಕ ಅನ್ನಪೂರ್ಣಾ ತಾಯಿಯವರು ರಚಿಸಿದ 'ಮಹಾಮಹಿಮ ಸಂಗನ ಬಸವ' ಕೃತಿಯಿಂದ ಕಲ್ಯಾಣ ಕ್ರಾಂತಿ, ಬೆಳಗು ಮೂಡಿತು, ಮೂಢತನ ಬಿಡಿ, ಶಿವಶರಣ ನನ್ನಯ್ಯ, ಕ್ರಾಂತಿಯ ಕಿಡಿ, ಉಳವಿಯೆಡೆಗೆ, ನಂಬಿದ ಭಕ್ತನಿಗೆ ದೇವನೊಬ್ಬ, ಅಕ್ಕಮಹಾದೇವಿ ಹೀಗೆ ಹಲವಾರು ನಾಟಕಗಳನ್ನು ಪ್ರೊ. ಸಂಗ್ರಾಮ ಎಂಗಲೇ ಅವರ ನಿರ್ದೇಶನದಲ್ಲಿ ಶರಣ ಉದ್ಯಾನದಲ್ಲಿ ರಂಗಕ್ಕೆ ತಂದಿರುವರು. ಮತ್ತು ಕೃಷ್ಣದೇವರಾಯ, ದುಷ್ಟಟಗಳು, ಮಾದರಿ ಶಾಲೆ, ಶಿವಶರಣ ಹರಳಯ್ಯ, ಒನಕೆಯ ಓಬವ್ವ, ಸುರ ಸುಂದರಾಂಗ ಮುಂತಾದ ನಾಟಕಗಳನ್ನು ಮಾಡಿಸಿರುವರು. ಜತೆಗೆ ಕಲ್ಯಾಣದ ಶರಣರ ಜೀವನ ಚಿತ್ರಗಳನ್ನು ನಾಟಕ, ಗೀತ ರೂಪಕಗಳ ಮೂಲಕ ಕಟ್ಟಿ ಕೊಡುತ್ತಲಿರುವರು. ವಚನಗಳ ನೃತ್ಯ, ನಾಟಕಗಳಿಂದ ಜನಪ್ರಿಯರಾಗಿರುವರು.

## ೭. ಡಿ. ವಾಯ್.ಎಫ್.ವಾಯ್. ಕಲಾತಂಡ ಬೀದರ:

ಡಿ. ವಾಯ್.ಎಫ್.ವಾಯ್. ಸಂಘಟನೆಯಿಂದ ಹಲವಾರು ನಾಟಕಗಳನ್ನು ಮಾಡಿಸಿರುವರು. ಜಿಲ್ಲಾ ಸಂಚಾಲಕರಾಗಿದ್ದ ಶ್ರೀ ಎಮ್.ಎಸ್. ಮನೋಹರ ನೇತೃತ್ವದಲ್ಲಿ, ಉತ್ಪಲದತ್ತರ ಮೂಲ ಬೆಂಗಾಳಿ ನಾಟಕ 'ಸೂರ್ಯ ಶಿಕಾರಿ' ಅನುವಾದ. ಎಮ್.ಪಿ. ಪ್ರಕಾಶ. ಪಶು ವೈದ್ಯಕೀಯ ಮಹಾವಿದ್ಯಾಲಯದ ಡಾ. ಅನೀಲಕುಮಾರ ಮುಗಳಿ ನಿರ್ದೇಶನದಲ್ಲಿ ಮೂಡಿಬಂತು. ಬೀದರ, ಭಾಲ್ಕಿ, ಮತ್ತು ಕಲಬುರಗಿಯಲ್ಲಿ ಪ್ರದರ್ಶನಗೊಂಡು ಜಯಭೇರಿ ಬಾರಿಸಿತು. ಕಲಾವಿದರಾದ ಡಾ. ಮುಗಳಿ, ಪ್ರಕಾಶ, ನೀಲಾ.ಕೆ, ದೇಶಾಂಶ ಹುಡುಗಿ, ಸಂಗೀತ ಶಂಭುಲಿಂಗ ವಾಲ್ದೊಡ್ಡಿ, ಜನಮೆಚ್ಚುಗೆ ಪಡೆದರು.

## ೮. ಜನಪರ ಅಧ್ಯಯನ ವೇದಿಕೆ ಬೀದರ:

ಪಬ್ಲಿಕ ದಿನ ಪತಿಕೆಯ ಸಂಪಾದಕ, ಹಿರಿಯ ಪತ್ರಕರ್ತ ಗಂಧರ್ವಸೇನಾ ಅವರ ನೇತೃತ್ವದಲ್ಲಿ ಜನಪರ ಅಧ್ಯಯನ ವೇದಿಕೆ ತಂಡದಿಂದ, ಡಾ.ಅನೀಲಕುಮಾರ ಮುಗಳಿ ರಚನೆ ಮತ್ತು ನಿರ್ದೇಶನದಲ್ಲಿ 'ಆಲದ ಮರ' ನಾಟಕ ಪ್ರಸ್ತುತ ಪಡಿಸಲಾಯಿತು. ಶ್ರೀಮತಿ ಭಾರತಿ ವಸ್ತ್ರದ, ಡಾ. ಮುಗಳಿ, ಸಂಗ್ರಾಮ ಎಂಗ್ಲೇ ಮುಂತಾದವರು

ಉತ್ತಮವಾಗಿ ಅಭಿನಯಿಸಿದರು. ಬೀದರಿನ ಸಂಗೀತ ಕಲಾಮಂಡಳದ ವೇದಿಕೆಯ ತುಂಬಿದ ಜನಗಳ ಮನ ರಂಜಿಸುವಲ್ಲಿ ಸಾರ್ಥಕತೆ ಪಡೆಯಿತು.

## ೯. ನ್ಯೂ ಎಕ್ಟೀವ್ ಥೇಟರ್ ಬೀದರ:

ಕಲಾವಿದ ನಿರ್ದೇಶಕ ಬೀದರಿನ ಶ್ರೀ ಉದಯಕುಮಾರ ಕುಲಕರ್ಣಿಯವರು ರಂಗಭೂಮಿಯಲ್ಲಿ ತೊಡಗಿಸಿಕೊಂಡವರು ಬೀದರಿಗೆ ಬಂದಾಗ ತಮ್ಮ ನ್ಯೂ ಎಕ್ಟಿವ್ ಥೆಟರ್ ತಂಡದಿಂದ ಬೀದರಿನ ಕಲಾವಿದರಿಂದ 'ಕನಸಿನ ವರು, ಮತ್ತು' ಮುಖ ಇಲ್ಲದವರು' ನಾಟಕಗಳನ್ನು ಮಾಡಿಸಿರುವರು. ಇವರು ಮಕ್ಕಳ ನಾಟಕ 'ಬೆಟ್ಟಕ್ಕೆ ಚಳಿಯಾದರೆ 'ನಾಟಕವನ್ನು ರಂಗಾಯಣದ ಕಲಾವಿದೆ', ಶ್ರೀಮತಿ ಗೀತಾ ಮೊಂಟಡ್ಕಾ ಅವರೊಂದಿಗೆ ನಿರ್ದೇಶಿಸಿದ್ದರು. ನಾಟಕ ಬೆಂಗಳೂರು ದೂರದರ್ಶನ ಕೇಂದ್ರದಿಂದ ಪ್ರಸಾರಗೊಂಡಿತು. ಇವರು ಸದ್ಯ ಬೆಂಗಳೂರಿನಲ್ಲಿ ಕಾರ್ಯ ನಿರ್ವಹಿಸುತ್ತಿರುವರು.

## ೧೦. ಜಿ.ಎನ್.ಡಿ ಕಾಲೇಜಿನ ಪ್ರೊ. ಬಿರಾದಾರ ತಂಡ:

ಗುರುನಾನಕದೇವ ಇಂಜನಿಯರಿಂಗ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದ ಪ್ರೊ. ಬಿರಾದಾರ ಅವರು ನಾಟಕಗಳ ಕುರಿತು ಅಪಾರವಾದ ಅಭಿಮಾನಿಯಾಗಿದ್ದರು. ಅವರು ತಮ್ಮದೇ ನಿರ್ದೇಶನದಲ್ಲಿ ಹಲವಾರು ಹಿಂದಿ ನಾಟಕಗಳನ್ನು ತಮ್ಮ ಕಾಲೇಜಿನಲ್ಲಿ ಉತ್ತರ ಭಾರತದಿಂದ ಬರುತ್ತಿದ್ದ ವಿದ್ಯಾರ್ಥಿಗಳಿಗಾಗಿ ಮಾಡಿಸುತ್ತಿದ್ದರು. ಹಿಂದಿ ನಾಟಕಗಳಾದ 'ಜನತಾ ಪಾಗಲ ಹೋಗಯಾ', 'ಸವ್ವಾ ಸೇರ ಗೇಹೂ' ಮುಂತಾದ ಸದಭಿರುಚಿಯ ರಂಜನೀಯ ವಿಷಯದ ನಾಟಕಗಳನ್ನು ಪ್ರಸ್ತುತ ಪಡಿಸಿರುವರು.

## ೧೧. ಸಾಂಸ್ಕೃತಿಕ ಹವ್ಯಾಸಿ ಯುವಕ ಸಂಘ ಚಿಮಕೋಡ:

ಕಲಾವಿದ, ಗಾಯಕ, ಸಂಗೀತಕಾರ ದೇವದಾಸ ಚಿಮಕೊಡ ಅಧ್ಯಕ್ಷತೆಯ ಸಾಂಸ್ಕೃತಿಕ ಹವ್ಯಾಸಿ ಯುವಕ ಸಂಘವು ನಾಟಕ, ಹಾಡುಗಳು, ಬೀದಿ ನಾಟಕ, ರಂಗಗೀತೆಗಳಿಂದ ಜಿಲ್ಲೆಯಾದ್ಯಂತ ಮನೆ ಮಾತಾಗಿದೆ. ಇವರ ತಂಡದಲ್ಲಿ ಸಹವರ್ತಿಗಳಾಗಿ ವಿಜಯಕುಮಾರ ಸೋನಾರೆ, ಯೇಸುದಾಸ ಅಲಿಯಂಬರೆ, ಸುನೀಲ ಕಡ್ಡೆ ಮುಂತಾದವರು ಭಾಗವಹಿಸುತ್ತಿರುವರು. ಯುವಜನ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ವಾರ್ತಾ ಇಲಾಖೆ, ಎಲ್ಲಾ ಸರಕಾರದ ಯೋಜನೆಗಳನ್ನು ಬೀದಿ ನಾಟಕಗಳ ಮೂಲಕ ರಂಗಗೀತೆಗಳ ಮೂಲಕ ಜನ ಸಾಮಾನ್ಯರಿಗೆ ಮುಟ್ಟಿಸುವಲ್ಲಿ ತಂಡ ಅಪಾರ ಶ್ರಮವಹಿಸುತ್ತಲಿದೆ. ರಂಗಭೂಮಿ ಸದಾ ಹಲವಾರು ಬದಲಾವಣೆ ಗಳೊಂದಿಗೆ ಜನಮನ ರಂಜಿಸುವಲ್ಲಿ ಸಾರ್ಥಕತೆ ಪಡೆದಿದೆ ಎನ್ನಬಹುದು.

## ೧೨. ನಂದೀಶ್ವರ ನಾಟ್ಯ ಸಂಘ (ನನಾಸಂ) ಚಿಮಕೋಡ ತಾ. ಬೀದರ:

ಬೀದಿ ನಾಟಕಗಳನ್ನು ಪ್ರದರ್ಶಿಸುವ ಸಲುವಾಗಿ ಶ್ರೀ.ದೇವದಾಸ ಚಿಮಕೋಡ ಅವರು ಸ್ಥಾಪಿಸಿದ ನಂದೀಶ್ವರ ನಾಟ್ಯ ಸಂಘ ಚಿಮಕೋಡ ತಂಡದಿಂದ ಪರಿಸರ ನೈರ್ಮಲ್ಯ, ಸ್ವಚ್ಛತೆ, ತಾಯಿ ಮಗುವಿನ ಆರೋಗ್ಯ, ಜನನಿ ಸುರಕ್ಷ, ಭಾನಾಮತಿ ನಿರ್ಮೂಲನ, ಮಹಿಳಾ ಶೋಷಣೆ, ಬಾಲ್ಯ ವಿವಾಹ, ಉದ್ಯೋಗ ಖಾತ್ರಿ, ಸ್ತ್ರೀಶಕ್ತಿ, ಸ್ವಸಹಾಯ ಸಂಘ, ಹೀಗೆ ನೂರಾರು ವಿಷಯಗಳ ಕುರಿತು ವಿಭಿನ್ನ ರೀತಿಯಿಂದ ಜನಗಳಿಗೆ ಮುಟ್ಟಿಸಲು ೫೦೦ಕ್ಕೂ ಹೆಚ್ಚು ಬೀದಿ ನಾಟಕಗಳನ್ನು ಬೀದರಿನ ಹಳ್ಳಿ, ಹಳ್ಳಿಗಳಲ್ಲಿ ಪ್ರದರ್ಶಿಸಿರುವರು.ರಾಜ್ಯ ಸರಕಾರದ, ಸಂಘ ಸಂಸ್ಥೆಗಳ ಯೋಜನೆಗಳನ್ನು ಜನರಿಗೆ ತಲುಪಿಸಲು, ಜನಪದ ಹಾಡುಗಳು, ಜಾಗೃತಿ ಗೀತೆಗಳು, ಕ್ರಾಂತಿ ಗೀತೆಗಳು, ನಾಡ ಗೀತೆಗಳು, ಪರಿಸರ ಗೀತೆ ಹೀಗೆ ಹಲವಾರು ವಿಷಯಗಳನ್ನು ಸಂಗೀತ ಮತ್ತು ಬೀದಿ ನಾಟಕಗಳ ಮೂಲಕ ಯೋಜನೆಗಳ ಆಶಯಗಳನ್ನು ಜನಮನಕ್ಕೆ ಮುಟ್ಟಿಸುತ್ತಿರುವರು.

## ೧೩. ಕಲಾಕುಸುಮ ಜನಪದ ಮತ್ತು ನಾಟ್ಯ ಸಂಘ, ಬೀದರ:

ಸುನೀಲ ಕಡ್ಡೆ ಅವರ ಅಧ್ಯಕ್ಷತೆಯಲ್ಲಿ ೨೦೦೮ರಲ್ಲಿ ಪ್ರಾರಂಭಿಸಲಾದ ಕಲಾ ಕುಸುಮ ಜನಪದ ಮತ್ತು ನಾಟ್ಯ ಸಂಘ ಬೀದರ, ಇಂದು ಬೀದಿ ನಾಟಕಗಳನ್ನು ಪ್ರದರ್ಶನ ಮಾಡುವಲ್ಲಿ ಮುಂಚೂಣಿಯಲ್ಲಿದೆ. ಬಾರಮ್ಮ ಭಾಗೀರತಿ, ಮೂರನೇ ಕಣ್ಣು, ಬಿಡುಗಡೆ, ಕನ್ನಡ ನಾಡು ಸಾಕ್ಷರ ನಾಡು, ಸ್ವಾತಂತ್ರ್ಯ ಸಂಗ್ರಾಮ, ಪುಗಸಟ್ಟೆ ಪ್ರಸಂಗ ಮತ್ತು ಎಚ್.ಐ.ವಿ ಏಡ್ಸ್ ಜಾಗೃತಿ, ಟಿ.ಬಿ, ಕುಷ್ಟರೋಗ ಆನೆ ಕಾಲು, ದುಶ್ಚಟಗಳ ವಿರುದ್ಧ ಜನ ಜಾಗೃತಿ ಮುಂತಾದ ವಿಷಯಗಳ ಕುರಿತು ಬೀದಿ ನಾಟಕಗಳನ್ನು ಬೀದರ ಜಿಲ್ಲೆಯ ಹಳ್ಳಿಗಳಲ್ಲಿ ಪ್ರದರ್ಶನ ನೀಡಿರುವರು. ಮತ್ತು ಸುನೀಲ ಕಡ್ಡೆಯವರು ಗ್ರಾಮೀಣ ಅಭಿವೃದ್ಧಿಗೆ ಸಂಬಂಧಿಸಿದಂತೆ ೬ ಕಿರುತೆರೆ ಚಿತ್ರ ನಿರ್ದೇಶನ ಮಾಡಿರುವರು, ಉತ್ತಮ ಗಾಯಕರಾಗಿ ೩ ಆಡಿಯೋ ಕೆಸೆಟ್ಟು, ೧೨ ಧ್ವನಿ ಸುರುಳಿಗಳನ್ನೂ ಬಿಡುಗಡೆ ಮಾಡಿರುವರು. ಜಾಗ್ರತಿ ಗೀತೆಗಳು, ಭಕ್ತಿ ಗೀತೆಗಳು, ಕ್ರಾಂತಿ ಗೀತೆಗಳನ್ನು ಹಾಡಿರುವರು. ಸರಕಾರದ ಯೋಜನೆಗಳನ್ನು ಜನ ಸಾಮಾನ್ಯರಿಗೆ ತಲುಪಿಸುವಲ್ಲಿ ಈ ಕಲಾತಂಡ ಸಾರ್ಥಕತೆ ಪಡೆದಿದೆ.

## ೧೪. ಶರಣ ಕಲಾ ಲೋಕ ತಂಡ, ಬಸವ ಸೇವಾ ಪ್ರತಿಷ್ಠಾನ, ಬೀದರ:

ಬೀದರಿನ ಬಸವ ಸೇವಾ ಪ್ರತಿಷ್ಠಾನದ ಪೂಜ್ಯ ಅಕ್ಕ ಅನ್ನಪೂರ್ಣಾ ತಾಯಿಯವರು, ಡಾ. ಗಂಗಾಂಬಿಕಾ ಪಾಟೀಲ ಅಕ್ಕನವರು ಶರಣ ಸಂಸ್ಕೃತಿಯನ್ನು, ಶರಣರ ಜೀವನವನ್ನು, ವಚನಗಳ ಸಾರವನ್ನು ನಾಟಕ, ಗೀತ ನಾಟಕ, ನೃತ್ಯಗಳ ಮೂಲಕ ಜನತೆಗೆ ತಿಳುವಳಿಕೆ ನೀಡುವ ಘನ ಉದ್ದೇಶದಿಂದ ಶರಣ ಕಲಾ ಲೋಕ

ತಂಡವನ್ನು ಪ್ರಾರಂಭಿಸಿದರು. ಅವರು ಇಲ್ಲಿ ಮಹಿಳೆಯರಿಂದಲೇ ನಾಟಕಗಳನ್ನು ಮಾಡಿಸುತ್ತಿರುವದು, ಇನ್ನೊಂದು ವಿಶೇಷವಾಗಿದೆ. ಮಹಿಳೆಯರು ಪುರುಷ ಪಾತ್ರದಲ್ಲಿ ಲೀಲಾ ಜಾಲವಾಗಿ ಅಭಿನಯಿಸುತ್ತಿರುವುದು, ಹೆಮ್ಮೆಯ ಸಂಗತಿ.

ಅಕ್ಕ ಅನ್ನಪೂರ್ಣಾ ತಾಯಿಯವರು ರಚಿಸಿದ 'ಮಹಾಮಹಿಮ ಸಂಗನ ಬಸವ' ಕೃತಿಯಿಂದ ಕಲ್ಯಾಣ ಕ್ರಾಂತಿ, ಬೆಳಗು ಮೂಡಿತು, ಮೂಢತನ ಬಿಡಿ, ಶಿವಶರಣ ನನ್ನಯ್ಯ, ಕ್ರಾಂತಿಯ ಕಿಡಿ, ಉಳವಿಯೆಡೆಗೆ, ನಂಬಿದ ಭಕ್ತನಿಗೆ ದೇವನೊಬ್ಬ, ಅಕ್ಕಮಹಾದೇವಿ ಹೀಗೆ ಹಲವಾರು ನಾಟಕಗಳನ್ನು ಪ್ರೊ. ಸಂಗ್ರಾಮ ಎಂಗಲೇ, ಸುರೇಶ ಬಸಂತಪುರೆ ಅವರ ನಿರ್ದೇಶನದಲ್ಲಿ ರಂಗಕ್ಕೆ ತಂದಿರುವರು. ಮತ್ತು ಕೃಷ್ಣದೇವರಾಯ, ದುಶ್ಚಟಗಳು, ಮಾದರಿ ಶಾಲೆ, ಶಿವಶರಣ ಹರಳಯ್ಯ, ಒನಕೆಯ ಓಬವ್ವ, ಸುರ ಸುಂದರಾಂಗ ಮುಂತಾದ ನಾಟಕಗಳನ್ನು ಮಾಡಿಸಿರುವರು.

## ೧೫. ಶ್ರೀ ಚನ್ನಬಸವೇಶ್ವರ ಕಲಾ ತಂಡ ಭಾಲ್ಕಿ:

ಭಾಲ್ಕಿಯ ಹಿರೇಮಠದ ಪೂಜ್ಯರಿಂದ ಪ್ರಾರಂಭಿಸಲ್ಪಟ್ಟ ಶ್ರೀ ಚನ್ನಬಸವೇಶ್ವರ ಕಲಾತಂಡ ಭಾಲ್ಕಿಯಲ್ಲಿ ಶರಣರ, ಸಂತರ ಕುರಿತು, ನಾಟಕಗಳನ್ನು ಮಾಡಿಸುತ್ತಲಿದ್ದರು. ಶರಣ ವ್ಹಿ. ಸಿದ್ಧರಾಮಣ್ಣನವರು ರಚಿಸಿದ ಶಿವಶರಣ ಹರಳಯ್ಯಾ ನಾಟಕವನ್ನು ೧೯೭೭ರಲ್ಲಿ ಪ್ರದರ್ಶಿಸಿದರು. ಅದರಲ್ಲಿ ಸಂಗ್ರಾಮ ಎಂಗಲೇ ಕಲ್ಯಾಣಿಯ ಪಾತ್ರ ಮಾಡಿದ್ದರು. ಶಿವಶರಣ ಹರಳಯ್ಯನವರ ಪಾತ್ರವನ್ನು ಡಾ. ಬಸವಲಿಂಗ ಪಟ್ಟದೇವರು ವಹಿಸಿದ್ದರೆಂದು, ಎಂಗಲೇ ಅವರು ಹೇಳುವರು. ಅಲ್ಲದೇ 'ಷಟ್‌ಸ್ಥಲ ಜ್ಯೋತಿ ಷಣ್ಮುಖ ಶಿವಯೋಗಿಗಳು', 'ಶಿವಶರಣ ಹರಳಯ್ಯ', 'ವೀರ ವಿರಾಗಿಣಿ ಅಕ್ಕಮಹಾದೇವಿ', 'ಶಿವಶರಣ ನನ್ನಯ್ಯ', 'ವಿಶ್ವಗುರು ಬಸವಣ್ಣ', ಮುಂತಾದವುಗಳನ್ನು ಪ್ರದರ್ಶಿಸಿರುವರು. ಅಶೋಕ ಬಾದರದಿನ್ನಿ ಅವರಿಂದಲೂ ಹಲವಾರು ನಾಟಕಗಳನ್ನು ಆಡಿಸಿರುವರು. ಸಾಣೇಹಳ್ಳಿ, ಚಿತ್ರದುರ್ಗದ ರಂಗ ತಂಡಗಳನ್ನು ಕರೆಸಿ, ಭಾಲ್ಕಿಯಲ್ಲಿ ವಚನಗಳಿಂದ ಶರಣ ಸಂಸ್ಕೃತಿಯನ್ನು ಎತ್ತಿ ಹಿಡಿಯುವಲ್ಲಿ ಪ್ರಸಿದ್ಧವಾದ ನಾಟಕಗಳನ್ನು ಮಾಡಿಸಿರುವರು.

## ೧೬. ಬಸವಕಲ್ಯಾಣದ 'ಅಭಿವ್ಯಕ್ತಿ ವೇದಿಕೆ':

ಬಸವಕಲ್ಯಾಣದಲ್ಲಿ ಡಾ. ಕಾಶೀನಾಥ ಅಂಬಲಗಿಯವರು ಅಭಿವ್ಯಕ್ತಿ ವೇದಿಕೆಯ ಸಂಚಾಲಕರಾಗಿ ಅನೇಕ ರಂಗ ಚಟುವಟಿಕೆಗಳನ್ನು ನಡೆಸಿದರು. ಇವರು ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದು, ಸದ್ಯ ಕಲಬುರ್ಗಿಯಲ್ಲಿ ವಾಸಿಸುತ್ತಿರುವರು.

೧೯೮೩ರಲ್ಲಿ ಜಯತೀರ್ಥ ಜೋಶಿ ಅವರ ನಿರ್ದೇಶನದಲ್ಲಿ ಶಿಬಿರ ಮಾಡಿದರು. ಶಿಬಿರದಲ್ಲಿ ಜಡಭರತರ 'ಕದಡಿದ ನೀರು' ನಾಟಕದಲ್ಲಿ ೪೦ ಯುವಕರು, ೧೦ಜನ ಯುವತಿಯರು ಭಾಗವಹಿಸಿದರು. ಎರಡು ಪ್ರಯೋಗ ಯಶಸ್ವಿಯಾಗಿ ಜನ ಮನ

ರಂಜಿಸಿದರು. ಮತ್ತು ೫೦ ಜನ ಮಕ್ಕಳು ಶಿಬಿರದಲ್ಲಿ ಪಾಲ್ಗೊಂಡು ಬಿ.ವ್ಹಿ. ಕಾರಂತರ 'ಪಂಜರ ಶಾಲೆ' ನಾಟಕ ಅಧ್ಬುತ ರಂಗ ಪರಿಕರ, ಬೆಳಕು, ವಿಶಾಲ ವೇದಿಕೆಯನ್ನು ಬಳಸಿಕೊಂಡು, ರಸದೌತಣವನ್ನು ನೀಡಿತು. ಈ ಶಿಬಿರದಲ್ಲಿ 'ದಾಸೋಹ' ಎಂಬ ಸಂಚಿಕೆಯನ್ನು ಹೊರ ತರಲಾಯಿತು. ವಿಶೇಷ ಉಪನ್ಯಾಸಗಳನ್ನು ಆಯೋಜಿಸಿದ್ದರು.

ಡಾ. ಕಾಶಿನಾಥ ಅಂಬಲಗಿಯವರ ನಿರ್ದೇಶನದಲ್ಲಿ ಪಿ. ಲಂಕೇಶರ 'ಕ್ರಾಂತಿ ಬಂತು ಕ್ರಾಂತಿ' ನಾಟಕ ಪ್ರದರ್ಶಿಸಲಾಯಿತು. ನೀ.ನಾ.ಸಂ. ತಿರುಗಾಟದ ನಾಟಕಗಳು, ಬಿ ಜಯಶ್ರೀ ತಂಡದ 'ಕರಿಮಾಯಿ', ಎಸ್.ಡಿ. ಸಕ್ಸೇನಾರ ತಂಡದ 'ಕುರಿ' ನಾಟಕ ಹವ್ಯಾಸಿ ರಂಗಭೂಮಿ ಬೆಳೆಯಲು ಸಹಾಯಕವಾಗಿವೆ. ಡಾ. ಅಂಬಲಗಿಯವರು ನಶಿಸುತ್ತಿರುವ ಜನಪದ ರಂಗಕಲೆ ಗಂಗಾಳ ಮಂಟಪದ ಕೃಷ್ಣಾರ್ಜುನರ ಕಾಳಗ ಬಯಲಾಟವನ್ನೂ ಪ್ರದರ್ಶನ ವ್ಯವಸ್ಥೆ ಮಾಡುತ್ತಿರುವುದು ಶ್ಲಾಘನೀಯವಾಗಿದೆ. ಕಲಾವಿದರಾದ ಡಾ.ಕೆ. ದುರ್ಗಾದಾಸ, ನರಸಿಂಗ ಬಿರಾದಾರ, ಅರ್.ಎಸ್. ಬಿರಾದಾರ, ಎಂ.ಬಿ. ಬಿರಾದಾರ, ಕು ಮಾಯಾ, ಕು ರಮಾ ಕುಲಕರ್ಣಿ, ಶ್ರೀಮತಿ ವಿಜಯಲಕ್ಷ್ಮಿ ಮುಂತಾದವರು ಸದಸ್ಯರಾಗಿರುವರು.

## ೧೭. ಕಲ್ಯಾಣ ರಂಗೋತ್ಸವ ಬೀದರ:

ಬಳ್ಳಾರಿಯ ರಂಗ ತೋರಣದ ಶ್ರೀ ಪ್ರಭುದೇವ ಕಪಗಲ್ಲ ಅವರು, ಬೀದರಿನ ಗುರುನಾಥ ರಾಜಗಿರಾ, ಪ್ರೊ. ಸಜ್ಜನಶೆಟ್ಟಿ, ವೀರಣ್ಣಾ ಬ್ಯಾಗೋಟಿ ಮುಂತಾದವರು ಕೂಡಿಕೊಂಡು ಇತ್ತೀಚೆಗೆ, ಬೀದರಿನಲ್ಲಿ ಕಲ್ಯಾಣ ರಂಗೋತ್ಸವ ಅಡಿಯಲ್ಲಿ ಕಾರ್ತಿಕ ರಂಗೋತ್ಸವವನ್ನು ಆಯೋಜಿಸಿದ್ದರು. ೨೨ ನವ್ಹೆಂಬರ್ ೨೦೧೪ರಿಂದ ನಾಲ್ಕು ದಿನಗಳ ಕಾಲ ಬೀದರ ರಂಗಮಂದಿರದಲ್ಲಿ ವಿಭಿನ್ನ ನಾಟಕಗಳ ಪ್ರದರ್ಶನ ಮಾಡಿದರು. ಬೆಂಗಳೂರಿನ ಹಿರಿಯ ರಂಗಕರ್ಮಿ ಬಿ.ವಿ. ರಾಜಾ ರಾಮ ಅವರು, ಚಿತ್ರನಟ ಮಂಡ್ಯ ರಮೇಶ ಅವರು ತಂಡದೊಂದಿಗೆ ಆಗಮಿಸಿ ಉತ್ತಮ ನಾಟಕ ನೀಡಿದರು.

ಬೀದರಿನ ಸಾಂಸ್ಕೃತಿಕ ಲೋಕದಲ್ಲಿ ರಂಗಚಟುವಟಿಕೆಗಳಿಗೆ ಪೂರಕವಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಅಧ್ಯಕ್ಷ ಸುರೇಶ ಚನಶೆಟ್ಟಿಯವರು, ಜಾನಪದ ಸಂಶೋಧನಾ ಕೇಂದ್ರ, ಮತ್ತು ಕನ್ನಡ ಸಾಹಿತ್ಯ ಸಂಘ ಅಧ್ಯಕ್ಷರಾದ ಹಿರಿಯ ಜಾನಪದ ತಜ್ಞ ಡಾ. ಜಗನ್ನಾಥ ಹೆಬ್ಬಾಳೆಯವರು, ಜಿಲ್ಲಾ ಜಾನಪದ ಕಲಾವಿದರ ಸಂಘದ ಅಧ್ಯಕ್ಷರಾದ ವಿಜಯಕುಮಾರ ಸೋನಾರೆಯವರು, ಶೋಭಾ ಕಲೆ, ಸಾಹಿತ್ಯ, ಸಂಗೀತ ಮತ್ತು ಸಾಂಸ್ಕೃತಿಕ ಟ್ರಸ್ಟ್(ರಿ), ಅಧ್ಯಕ್ಷರಾದ ಕಲಾವಿದ ಶಂಭುಲಿಂಗ ವಾಲ್ದೊಡ್ಡಿಯವರು ತುಂಬು ಮುತುವರ್ಜಿಯಿಂದ ರಂಗಭೂಮಿ ಬೆಳವಣಿಗೆಯಲ್ಲಿ ಪಾಲ್ಗೊಳ್ಳುತ್ತಿರುವರು.

# ಎದೆ ತುಂಬಿ ಹಾಡಿದ ರಂಗ ಗೀತೆಗಳು

ನಾಟಕಕ್ಕೆ ಸಾಹಿತ್ಯ ಹೇಗೆ ಮುಖ್ಯವೋ ಹಾಗೆ ಸಂಗೀತವೂ ಕೂಡಾ ಮುಖ್ಯ. ರಂಗಗೀತೆಗಳನ್ನು ಹಾಡುವ ಗಾಯಕರೇ ಕಲಾವಿದರಾಗಿ ರಂಗಭೂಮಿಯನ್ನು ಜನಮನದಲ್ಲಿ ಚಿರಸ್ಥಾಯಿಯಾಗಿಸಿದ ಗಾಯಕ- ನಾಯಕರೆನ್ನಬಹುದು. ಜಾನಪದದ ಬಯಲಾಟ, ದೊಡ್ಡಾಟ, ಸಣ್ಣಾಟ, ಯಕ್ಷಗಾನ, ಯಾವುದೇ ಪ್ರಕಾರವನ್ನು ನೋಡಿದರೂ ಅಲ್ಲಿ ಸಂಗೀತ, ಹಿನ್ನೆಲೆ ಗಾಯನದ ಪ್ರಾಮುಖ್ಯತೆ ಕಂಡುಬರುವದು. ಇನ್ನು ನಾಟಕ ಕಂಪನಿಗಳು ಸಾಹಿತ್ಯ, ಸಂಗೀತ, ನೃತ್ಯಗಳಿಂದ ಪರಿಪೂರ್ಣವಾದ ನಾಟಕಗಳಿಂದ ರಸದೌತಣ ನೀಡಿದ್ದು ಇತಿಹಾಸವಾಗಿದೆ.

ರಂಗ ಕಲಾವಿದರು ರಂಗಗೀತೆಗಳಿಗೆ ಹೊಸ ಆಯಾಮ ನೀಡುವಲ್ಲಿ ತಮ್ಮ ಅಪಾರವಾದ ಕಾಣಿಕೆ ನೀಡುತ್ತಿರುವರು. ಬೀದರಿನ ಹವ್ಯಾಸಿ ರಂಗಭೂಮಿಯ ಅವಲೋಕನ ಮಾಡಿದಾಗ, ಹವ್ಯಾಸಿ ಕಲಾತಂಡಗಳ ನಾಟಕಗಳೂ ಸಹ ಹಿನ್ನೆಲೆ ಸಂಗೀತದಿಂದಲೇ ಯಶ ಕಾಣುತ್ತಿರುವವು. ಇದರ ಶ್ರೇಯ ಇಲ್ಲಿಯ ಹಿರಿಯ ಕಲಾವಿದರಾದ, ಗಾಯಕರಾದ ಶ್ರೀ ಶಂಭುಲಿಂಗ ವಾಲ್ದೊಡ್ಡಿ ಹಾಗೂ ಸಂಗಡಿಗರಿಗೆ ಸಲ್ಲುತ್ತದೆ. ನಾಟಕದ ಗೀತೆಗಳಿಗೆ ಸಂಗೀತ ಸಂಯೋಜನೆ ಮಾಡಿ ಸುಶ್ರಾವ್ಯವಾಗಿ ಹಾಡುವ ಇವರು ವೇದಿಕೆಗೆ ಬಂದರೆ ಸಾಕು. ಆ ಕಾರ್ಯಕ್ರಮ ಯಶಸ್ವಿಯಾಗುವದು ಖಚಿತ.

'ಕೆರೆಗೆ ಹಾರ' ಜಾನಪದ ಗೀತ ರೂಪಕದಲ್ಲಿ ಕಲ್ಲನಕೇರಿ ಮಲ್ಲನ ಗೌಡ ಕೆರೆ ಕಟ್ಟಿಸಿ, ನೀರು ಬೀಳದಿದ್ದಾಗ, ತನ್ನ ಕಿರಿಯ ಸೊಸೆ ಭಾಗೀರತಿಯನ್ನು ಕೆರೆಗೆ ಬಲಿ ಕೊಡುವ ಮನ ಮಿಡಿಯುವ ಪ್ರಸಂಗ. ಶಂಭುಲಿಂಗ ಅವರು

**'ಮೊದಲಿಗೆ ಅಲ್ಲಮಪ್ರಭುವಿಗೆ ಶರಣಾರ್ಥಿ,।**
**ಕೂಡಿ ಕುಂತ ಜನಕೆಲ್ಲಾ ನಮ್ಮ ನಮನ।**
**ಕಲಿಯುಗ ದೊಳಗಿನ ಕಥೆಯ ವಿಸ್ತಾರವ ।**
**ತಿಳಿಸಿ ಹೇಳುವೆ ಕೇಳಬೇಕ್ರೀ ಜನಾ.।**
**..ಗೀಯಗಾ.. ಗಾಗೀಯಗಾ ಗೀ...।**

ಎಂದು ಹಾಡತೊಡಗಿದಾಗ ಮನದಲ್ಲಿ ಮಿಂಚು ಮೂಡುವದು.

ಪ್ರಸನ್ನರ 'ಒಂದು ಲೋಕ ಕಥೆ' ನಾಟಕ ಎಲ್ಲಾ ಗೀತೆಗಳು ಇಂದಿಗೂ ಮೆಲಕು ಹಾಕುವಂತಿವೆ.

'ಹಾಳು ಭಾವಿಗೇ ನನ್ನ ಹಾಕ ಬೇಡಿರೋ ನೀವು,
ಹಣದ ಚೀಲದೊಳಗೇ ಹಾಡ ಕೊಂದಿರಲ್ಲೋ....।

ಎನ್ನುವ ಗೀತೆ ಮತ್ತು

'ಹಾಡಿನ ಸೊಲ್ಲ ಸವಿಯಲೇ ಬೇಕು.।
ಹುಚ್ಚೆದ್ದು ನವಿಲು ಕುಣಿಯಲೇ ಬೇಕು..।

ಎಂದು ಸಂಗೀತದ ಮಹತ್ವ ಸಾರುವರು.

ಶ್ರೀ ಬರಗೂರು ರಾಮಚಂದ್ರಪ್ಪನವರ 'ಕೋಟೆ' ನಾಟಕದಲ್ಲಿ ಹಾಡಿದ

'ಹಸಿದ ದಿನವಿರಲಿಲ್ಲ ರಾಮಾ'. ಶ್ರೀ ರಾಮಾ....।
ಕಾಡಿನಲ್ಲಿದ್ದರೂ, ಸೀತೆಯುಂಡಳು ಸುಖವಾ,।
ಹಸಿವಿನಲಿ ಬೇಯುವೆನು.. ನಾನು..।
ರಾಮಾ, ಸರಿಯಾಗಿ ಒಂದು ದಿನ ಉಣಲಿಲ್ಲ ।
...ನನ ರಾಮಾ..। ಹಸಿದಾ ದಿನ..।

ಈ ಗೀತೆಯನ್ನು ಕೇಳಿದವರ ಕಣ್ಣು ತೇವಗೊಂಡಿದ್ದವು. ನಾಟಕದ ಯಶಸ್ಸಿಗೆ ಈ ಹಾಡು ಪೂರಕವಾಗಿದ್ದು ಶಂಭುಲಿಂಗರ ಕಂಠಸಿರಿಗೆ ಮೆಚ್ಚಲೇಬೇಕು.

ಉತ್ಪಲದತ್ತರ 'ಸೂರ್ಯ ಶಿಕಾರಿ' ನಾಟಕ–
'ಅರಸನ ಅರಮನೆ ಮೆಟ್ಟಿಲು ನಾವು..।
ಸಾಲು ಸಾಲು ತೊಲೆ ಕಂಭಗಳು।
ನಮ್ಮ ಕರುಳ ಕಿತ್ತಿ ತೋರಣ.. ಕಟ್ಟಿ..।
ರಕ್ತದ ಓಕುಳಿ ಆಡುವರು..॥

ಈ ಹಾಡು ಇಡೀ ನಾಟಕದ ಬೆನ್ನೆಲುಬಾಗಿ ನಿಂತು ನಾಟಕ ಯಶಸ್ಸಿಗೆ ಕಾರಣವಾಯಿತು.

ತಬರನ ಕಥೆ, ನಾಟಕದ
'ಮಾಟಾ ಆಗಿತ್ತು, ದೇಶಕೆ ಮಾಟಾ ಆಗಿತ್ತು..।
ಮತ್ತು ಬಿಡುಗಡೆಯಾಯಿತು ಬ್ರಿಟಿಷರಿಂದ ಬಂದಿಯಾದ ಭಾರತವೂ..।

ರಂಗಗೀತೆಗಳು ಸುಂದರವಾಗಿ ಮೂಡಿಬಂದವು. 'ಸಿಂಹಾಸನ ಖಾಲಿ ಇದೆ ನಾಟಕದಲ್ಲಿ ಬಳಸಿಕೊಂಡ ಪುರಂದರದಾಸರ' ಡೊಂಕು ಬಾಲದ ನಾಯಕರೇ..

ನೀವೆನೂಟವ ಮಾಡಿದಿರಿ.. ಕೀರ್ತನೆ ವಿಡಂಬನಾತ್ಮಕವಾಗಿ ರಾಜಕೀಯ ಚಿತ್ರಣ ನೀಡಿತು.

ಡಾ. ಬಸವರಾಜ ಸಬರದ ಅವರ 'ಬೆಳಕಿನೆಡೆಗೆ' ನಾಟಕದ 'ಭಾಳ ಮಂದಿಗೆ ಬೆತ್ತಲೆ ಮಾಡಿದೆ.. ಎಲ್ಲವ್ವಾ ನೀನು..। ರಂಗ ಗೀತೆ ಎಲ್ಲರನ್ನೂ ಕುಣಿಯುವಂತೆ ಮಾಡಿತು.

ಐತಿಹಾಸಿಕ ನಾಟಕ 'ಸಂಗೊಳ್ಳಿ ರಾಯ' ಸರದಾರದ

**'ರಾಯಣ್ಣ ರಾಯಣ್ಣ ಸಂಗೊಳ್ಳಿ ರಾಯಣ್ಣ।**
**..ಗಿಡವಾದೆ.. ಮರವಾದೆ ..ಕ್ರಾಂತೀಯ ಕುಡಿಯಾದೆ..ಓ ..ನನ್ನ ರಾಯಣ್ಣ..।**
**ಮತ್ತು ಕಿತ್ತೂರು ಚೆನ್ನಮ್ಮರ ಕುರಿತು ಹಾಡಿದ**
**'ಕಿತ್ತೂರು ಒಡತಿ ಎದೆಗಾತಿ ಚೆನ್ನಮ್ಮ..**
**ಚಂಡಿಯಾಗ್ಯಾಳೋ ರಣ ಭೂಮ್ಯಾಗ..।'**

ವೀರರಸ ಉಕ್ಕಿಸಿ ಅದ್ಭುತವಾಗಿ ಮೂಡಿಬಂತು.

ಬೀದರಿನ ರಂಗಭೂಮಿಯನ್ನು ಇಡಿಯಾಗಿ ಆವರಿಸಿಕೊಂಡು, ತ್ರಿವಿಕ್ರಮನ ಹಾಗೆ ರಂಗ ಭೂಮಿಯನ್ನು ಬೆಳಗುತ್ತಿರುವ ಸಾವಿರ ಹಾಡಿನ ಸರದಾರ ಶಂಭುಲಿಂಗರ

**'ಹಾಡಿನ ಸೊಲ್ಲ.. ಸವಿಯಲೇ ಬೇಕು..।**
**ಹುಚ್ಚೆದ್ದು ನವಿಲು ಕುಣಿಯಲೇ ಬೇಕು...।**
**ದ್ವೇಷ ರೋಷಗಳಾ ಮನದಿಂದ ದೂಡಾ..।**
**ಜೀವನೋತ್ಸಾಹಕ ದಾರಿಯ ಮಾಡಾ..।'**

ಎಂದು ಜೀವನೋತ್ಸಾಹಕ್ಕೆ ರಂಗ ಗೀತೆಗಳ ಸಿಂಚನವನ್ನು ಮಾಡಿರುವರು.

ಇವರ ಜತೆಯಲ್ಲಿ ಹಿಮ್ಮೇಳದಲ್ಲಿ ನಿಂತು ರಂಗ ಗೀತೆಗೆಗಳಿಗೆ ಧ್ವನಿಯಾದವರು ವಿಜಯಕುಮಾರ ಸೋನಾರೆ, ಸುನೀಲ ಕಡ್ಡೆ, ಯೆಸುದಾಸ ಅಲಿಯಂಬರೆ, ದೇವದಾಸ ಚಿಮಕೊಡ, ದೇವಾನಂದ, ಮನೋಹರ, ಕಂಟೆಪ್ಪಾ, ಮತ್ತು ಹಿನ್ನೆಲೆ ಸಂಗೀತ ನೀಡಿದ ಶ್ರೀಮತಿ ಆಶಾ ಠಾಕೂರ, ಶ್ರೀ ರಾಜೇಂದ್ರಸಿಂಗ ಪವಾರ, ವೈಕುಂಠದತ್ತ ಮಹಾರಾಜ, ವಾಮನರಾವ ಕುಲಕರ್ಣಿ, ಕಾಶೀನಾಥ ಹೆಡಗಾಪೂರ, ರಘುವೀರ ವಾಡೇಕರ, ಶಂಕರ ಚೊಂಡಿ, ಪ್ರೊ. ಎಸ್.ವ್ಹಿ. ಕಲ್ಮಠ, ಶಿವಕುಮಾರ ಪಾಂಚಾಳ, ಈಶ್ವರಪ್ಪಾ ಪಾಂಚಾಳ, ಮುಂತಾದ ಮಹನೀಯರು ರಂಗಗೀತೆಗಳಿಗೆ ಮೆರಗು ತಂದು ಕೊಟ್ಟವರು.

●

# ಮಕ್ಕಳ ರಂಗ ನಾಟಕಗಳು

ಶಿಕ್ಷಣದ ಜೊತೆಗೆ ಪಠ್ಯೇತರ ಚಟುವಟಿಕೆಗಳಿಗೆ ಹೆಚ್ಚಿನ ಅವಕಾಶ ದೊರಕಿದಾಗ ಮಕ್ಕಳಲ್ಲಿ ಹುದುಗಿದ್ದ ಪ್ರತಿಭೆಯನ್ನು ಹೊರ ತರಲು ಸಾಧ್ಯವಾಗುವದು. ಶಾಲೆ ಕಾಲೇಜುಗಳಲ್ಲಿ ವಾರ್ಷಿಕೋತ್ಸವವೆಂದರೆ ಮಕ್ಕಳಿಗೆ, ಶಿಕ್ಷಕರಿಗೆ ಹಬ್ಬವಿದ್ದಂತೆ, ತಮ್ಮ ಶಾಲೆಯ ಮಕ್ಕಳಿಂದ ಉತ್ತಮವಾದ ಸಾಂಸ್ಕೃತಿಕ ಕಾರ್ಯಕ್ರಮ ಹಮ್ಮಿಕೊಳ್ಳುತ್ತಿದ್ದರು. ಅದರಲ್ಲಿ ಮಕ್ಕಳಿಂದ ನಾಟಕ ಮಾಡಿಸುವದು, ಎಲ್ಲರಿಗೂ ಖುಷಿಯ ಸಂಗತಿ ಯಾಗಿತ್ತು.

೧೯೭೭ರಲ್ಲಿ ಸಮುದಾಯ ಸಾಂಸ್ಕೃತಿಕ ಸಂಘಟನೆ ತನ್ನ ಮೊದಲ ನಾಟಕವಾಗಿ ಮಕ್ಕಳಿಂದ 'ಅಲಿಬಾಬಾ ಮತ್ತು ನಲವತ್ತುಕಳ್ಳರು' ನಾಟಕವನ್ನು ಉತ್ಸಾಹಭರಿತ ಮಕ್ಕಳಿಂದ ವೈಭವಯುತವಾಗಿ ನಿರ್ಮಿಸಿದರು. ನಾಟಕದಲ್ಲಿ ಆಸಕ್ತ ೩೦ ಮಕ್ಕಳಿಗಾಗಿ ಶಿಬಿರವನ್ನು ಏರ್ಪಡಿಸಿದ್ದರು. ವೇಷಭೂಷಣ, ಬೆಳಕು, ಭವ್ಯವಾದ ರಂಗ ಸಜ್ಜಿಕೆ ಹೊಸ ಲೋಕವನ್ನೇ ರಂಗಮಂಚದಲ್ಲಿ ಸೃಷ್ಟಿಸಿದ್ದರು. ಈ ನಾಟಕ  ಬೀದರ, ಬೆಂಗಳೂರನಲ್ಲಿ ಪ್ರದರ್ಶನ ಕಂಡಿತು.

ನಿರ್ದೇಶಕ ಬಸವರಾಜ ಕೊಡಗೆಯವರು ಮಕ್ಕಳಿಗಾಗಿ ಶಿಬಿರಗಳನ್ನು ನಡೆಸಿ ಜಯಂಟ್ ಮಾಮ, ಹಿಮಾನಿ ಮತ್ತು ಕುಳ್ಳರು, ಹೆಡ್ಡಾಯಣ, ನಾಗನ ಕಥೆ ಮುಂತಾದ ಮಕ್ಕಳ ನಾಟಕಗಳನ್ನು ಮಾಡಿಸಿರುವರು.

ಬೀದರಿನ ಸರಸ್ವತಿ ಶಿಕ್ಷಣ ಮಂದಿರದಲ್ಲಿ ಏಕಾಂಕ ನಾಟಕಗಳನ್ನು ಮಾಡಿಸುತ್ತಿದ್ದರು. ಜೊತೆಗೆ ಆಕರ್ಷಣೀಯವಾದ ದೇಶಪ್ರೇಮ ಬಿಂಬಿಸುವ ಏಕ ಪಾತ್ರಾಭಿನಯಗಳನ್ನು ಏರ್ಪಡಿಸುತ್ತಿದ್ದರು. ಅದರಲ್ಲಿ ಮುಖ್ಯವಾಗಿ ಕಲಾವಿದ ಚಂದ್ರಗುಪ್ತ ಚಾಂದಕವಠೆ ಅವರ ಮಕ್ಕಳಾದ ತೇಜಸ್ವಿ, ತರಂಗಿಣಿ, ಶಿವಗುಪ್ತ ಇವರು ಸಂಗೊಳ್ಳಿ ರಾಯಣ್ಣ, ಕಿತ್ತೂರು ಚೆನ್ನಮ್ಮ, ಝಾಂಸಿರಾಣಿ ಲಕ್ಷ್ಮಿಬಾಯಿ, ಸಾಮ್ರಾಟ ಅಶೋಕ, ಸ್ವಾಮಿ ವಿವೇಕಾನಂದ, ದಾನಶೂರ ಕರ್ಣ, ದುರ್ಯೋಧನ, ಕೆಳದಿ ಚೆನ್ನಮ್ಮ, ಮುಂತಾದ ಆದರ್ಶ ಪುರುಷರ ವ್ಯಕ್ತಿಚಿತ್ರಣಗಳನ್ನು ಪ್ರದರ್ಶಿಸಿರುವರು. ಪರಿಸರ ಸಂರಕ್ಷಣೆ, ಸ್ವದೇಶಿ ಅಭಿಯಾನ, ಹೀಗೆ ಹಲವಾರು ಸಮಕಾಲೀನ ವಿಷಯಗಳ ಕುರಿತು ನಾಟಕ ಮಾಡಿಸುತ್ತಿರುವರು.

ಬಸವಕಲ್ಯಾಣದ ಅಭಿವ್ಯಕ್ತಿ ವೇದಿಕೆಯಿಂದ ಮಕ್ಕಳಿಗಾಗಿ, ಅನೇಕ ರಂಗ ಚಟುವಟಿಕೆಗಳನ್ನು ನಡೆಸಿದರು. ೧೯೮೩ರಲ್ಲಿ ಜಯತೀರ್ಥ ಜೋಶಿ ಅವರ ನಿರ್ದೇಶನದಲ್ಲಿ ಶಿಬಿರ ಮಾಡಿದರು. ಶಿಬಿರದಲ್ಲಿ ಜಡಭರತರ 'ಕದಡಿದ ನೀರು' ನಾಟಕದಲ್ಲಿ ೪೦ ಯುವಕರು, ೧೦ಜನ ಯುವತಿಯರು ಬಾಗವಹಿಸಿದರು ಎರಡು ಪ್ರಯೋಗ ಯಶಸ್ವಿಯಾಗಿ ಜನಮನ ರಂಜಿಸಿದರು. ಮತ್ತು ೫೦ ಜನ ಮಕ್ಕಳು ಶಿಬಿರದಲ್ಲಿ ಪಾಲ್ಗೊಂಡು ಬಿ.ವ್ಹಿ. ಕಾರಂತರ 'ಪಂಜರ ಶಾಲೆ' ನಾಟಕ ಮಾಡಿಸಿದರು. ಅದ್ಭುತ ರಂಗ ಪರಿಕರ, ಬೆಳಕು, ವಿಶಾಲ ವೇದಿಕೆಯನ್ನು, ಬಳಸಿಕೊಂಡು, ರಸದೌತಣವನ್ನು ನೀಡಿತು.

೧೯೯೭ರಲ್ಲಿ ಅಭಿನಯ ಗಂಗೋತ್ರಿ ಹವ್ಯಾಸಿ ಕಲಾ ತಂಡದಿಂದ ಬೇಸಿಗೆಯ ರಂಗ ಶಿಬಿರವನ್ನು ಆಯೋಜಿಸಲಾಗಿತ್ತು. ೩೦ ಪುಠಾಣಿ ಮಕ್ಕಳಿಂದ, ಗುಮ್ಮಕೇರಿ ರಚಿತ 'ಹೆತ್ತೊಡಲು', ಮತ್ತು ಶ್ರೀಮತಿ ಅರುಂಧತಿ ಚಾಂದಕವಠೆ ರಚಿಸಿದ 'ಮಂಗನ ಶೀರ್ಪು' ನಾಟಕಗಳಲ್ಲಿ ಅದ್ಭುತವಾಗಿ ನಟಿಸಿದರು. ಇದೆ ನಾಟಕಗಳು ನಾಟಕೋತ್ಸವದಲ್ಲೂ ಮೂರು ಪ್ರಯೋಗಗಳಾದವು. ಸತ್ಯಕಾಮ ಮುಗಳಿ,ಕಾಂಚನಾ ಜಿರೋಬೆ, ಚಾಂದಕವಠೆ ಅವರ ಮಕ್ಕಳಾದ ಶಿವಗುಪ್ತ, ತರಂಗಿಣಿ, ತೇಜಸ್ವಿ, ಮತ್ತು ಪವನ, ನಾಗರಾಜ ಮೆಚ್ಚುಗೆ ಗಳಿಸಿದರು.

ಸಾರ್ವಜನಿಕ ಶಿಕ್ಷಣ ಇಲಾಖೆ ವತಿಯಿಂದ ಆಯೋಜಿಸಿದ ಚೈತ್ರ ಚಿಗುರು ಬೇಸಿಗೆ ಶಿಬಿರದಲ್ಲಿ ಮಕ್ಕಳಿಗಾಗಿ ನಾಟಕಗಳನ್ನು ಆಡಿಸಲಾಗಿದೆ. ಮತ್ತು ಬಾಲಭವನದಿಂದಲೂ ಹಲವಾರು ನಾಟಕಗಳನ್ನು ಮಾಡಿಸಲಾಗಿದೆ.

ಕರ್ನಾಟಕ ಸರಕಾರದ ವಾರ್ತಾ ಇಲಾಖೆಯಿಂದ ಆಯೋಜಿಸಿದ 'ಕರ್ನಾಟಕ ವೈಭವ' ಧ್ವನಿ ಬೆಳಕು ಕಾರ್ಯಕ್ರಮ ನಗರದ ನೆಹರು ಕ್ರೀಡಾಂಗಣದಲ್ಲಿ ಆಯೋಜಿಸಿದ್ದರು. ಇದರಲ್ಲಿ ಬಹಳಷ್ಟು ಮಕ್ಕಳು ಭಾಗವಹಿಸಿದರು.

೧೯೯೮ ರಲ್ಲಿ ಮಕ್ಕಳಿಗಾಗಿ ರಂಗ ತರಬೇತಿ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು, ಉದಯ ಕುಲಕರ್ಣಿ, ಹಾಗೂ ರಂಗಾಯಣದ ಕಲಾವಿದೆ ಎಮ್.ಎಸ್. ಗೀತಾ ಅವರಿಂದ ನಿರ್ದೇಶಿಸಿದ ಕೆ.ವ್ಹಿ. ಸುಬ್ಬಣ್ಣನವರ 'ಬೆಟ್ಟಕ್ಕೆ ಚಳಿಯಾದರೆ....' ನಾಟಕ ಬೆಂಗಳೂರು ದೂರದರ್ಶನದಿಂದ ಪ್ರಸಾರವಾಯಿತು. ಬೀದರಿನ ಚಿಕ್ಕ ಮಕ್ಕಳಾದ ಗೀತಾ ಕೋರೆ, ಅಜಯ ಕುಲಕರ್ಣಿ, ಚಾಂದಕವಠೆಯವರ ಮಕ್ಕಳಾದ ಶಿವಗುಪ್ತ, ತರಂಗಿಣಿ, ತೇಜಸ್ವಿ, ಮತ್ತು ವಸುಧಾ ಅಣವೇಕರ ಮುಂತಾದವರು ತಮ್ಮ ನೈಜ ಅಭಿನಯದಿಂದ ಜನಮನ ಸೂರೆಗೊಂಡರು. ಭಾರತ ಸ್ವಾತಂತ್ರ್ಯ ಸುವರ್ಣ ಮಹೋತ್ಸವದ ಅಂಗವಾಗಿ ೩ ದಿನಗಳ ನಾಟಕೋತ್ಸವ ಹಮಿಕೊಳ್ಳಲಾಗಿತ್ತು.


೨೦೦೨ರಲ್ಲಿ ಬಸವರಾಜ ಕೊಡಗೆ ಅವರು ಸಮುದಾಯ ತಂಡದಿಂದ ಮಕ್ಕಳಿಗಾಗಿ ಬೇಸಿಗೆ ರಂಗ ಶಿಬಿರವನ್ನು ಹಮ್ಮಿಕೊಂಡರು. ನಾಟಕ 'ಕಸ್ತೂರಿ ರಾಜಾ' ಚೆನ್ನಾಗಿ ಮೂಡಿಬಂದಿತು. ಸುಮಾರು ಮೂವತ್ತು ಮಕ್ಕಳು ಭಾಗವಹಿಸಿದ್ದರು.

೨೦೧೦ರಲ್ಲಿ ಕರ್ನಾಟಕ ಬಾಲ ವಿಕಾಸ ಅಕಾಡೆಮಿಯಿಂದ ಶ್ರೀ ಚಂದ್ರಪ್ಪಾ ಹೆಬ್ಬಾಳಕರ ಸಂಚಾಲಕರಾಗಿ ಬೀದರಿನ ಬಾಲಭವನದ ೨೫ ಮಕ್ಕಳಿಗೆ ರಂಗ ತರಬೇತಿ ಶಿಬಿರ ನೀಡಿ ಅವರಿಂದ ನಿಂಗೂ ಸೊಲಗಿ ರಚಿಸಿದ ಹಕ್ಕು ಕೇಳಿದ ಮಕ್ಕಳು, ನಾಟಕವನ್ನು ಬೀದರ ನಗರದ ಸಮತಾ ಪ್ರೌಢ ಶಾಲೆ, ರವೀಂದ್ರ ಶಾಲೆ, ಕಮಠಾಣೆ ಶಾಲೆ, ಜೀಜಾಮಾತಾ ಶಾಲೆ, ಸರಕಾರಿ ಶಾಲೆ ಮೈಲೂರು ಹೀಗೆ ನಾನಾ ಕಡೆಗಳಲ್ಲಿ ಪ್ರದರ್ಶನ ಏರ್ಪಡಿಸಿದ್ದರು.

ಮಕ್ಕಳಿಂದ ನಾಟಕಗಳನ್ನು ಮಾಡಿಸುವದೆಂದರೆ, ಬಹು ಸಂತೋಷದ ಜೊತೆಗೆ ಜವಾಬ್ದಾರಿಯ ಕೆಲಸ ಮಕ್ಕಳಲ್ಲಿಅಡಗಿರುವ ಸುಪ್ತಪ್ರತಿಭೆಯನ್ನು, ಹೊರತೆಗೆದು ಅವರಿಗೆ ಕನಸುಗಳನ್ನು ಸೃಷ್ಟಿಸುವ ಕಲೆಗಾರಿಕೆಯನ್ನು ತುಂಬುವಂಥದ್ದು. ಹೂವಿನಂತ ಮನಸಿನ ಮಕ್ಕಳು ಹೇಳಿದ್ದನ್ನು ಬೇಗ ಅರ್ಥ ಮಾಡಿಕೊಂಡು ಪ್ರತಿಕ್ರಿಯೆ ನೀಡುವರು. ಮಕ್ಕಳ ರಂಗ ನಾಟಕಗಳನ್ನು ಆಡಿಸುವದರಿಂದ ಮಕ್ಕಳಿಗೆ ಕಲಿಕೆಯಲ್ಲಿ ಆಸಕ್ತಿ ಮೂಡುವದು. ರಂಗದ ಮೂಲಕ ಪಥ್ಯವನ್ನು ಹೇಳುವತ್ತ ಎಲ್ಲರೂ ಗಮನ ಹರಿಸಬೇಕಾಗಿರುವದು ಇಂದಿನ ತುರ್ತು ಅವಶ್ಯಕತೆಯಾಗಿದೆ.

# ಸಂಘಟಕರು, ಕಲಾವಿದರು, ನೇಪಥ್ಯಕಲಾವಿದರು, ಸಂಗೀತಗಾರರು


## ಬೀದರ ತಾಲೂಕು, ಬೀದರ ನಗರ:



### ಶ್ರೀ ವಿಶ್ವನಾಥ ಪಾಟೀಲ ಹಕ್ಯಾಳ (ದಮನ):

ಔರಾದ ತಾಲೂಕಿನ ಹಕ್ಯಾಳ ಗ್ರಾಮದವರಾದ ಶ್ರೀ ವಿಶ್ವನಾಥ ಪಾಟೀಲರು ಹಿರಿಯ ಪತ್ರಕರ್ತರು, ಬೀದರಿನಲ್ಲಿ 'ದಮನ' ಹಿಂದಿ ದಿನ ಪತ್ರಿಕೆಯನ್ನು ಸ್ಥಾಪಿಸಿದರು. ಸತ್ಯ, ನಿಷ್ಠುರ, ನಿರ್ಭಿಡೆಯ ಪತ್ರಕರ್ತರಾಗಿ, ಸಂಪಾದಕರಾಗಿ, ಪತ್ರಿಕಾರಂಗಕ್ಕೆ ಶೋಭೆಯನ್ನು ತಂದುಕೊಟ್ಟವರು. ಇವರ ಪ್ರಖರ ವಿಚಾರಧಾರೆಗಳು, ಜನಪರ ನಿಲುವು, ಸದಾ ಅನ್ಯಾಯದ ವಿರುದ್ಧ ಹೋರಾಡುವ ಇವರ ಗುಣ ಎಲ್ಲರೂ ಮೆಚ್ಚುವಂಥದ್ದು. ಪತ್ರಿಕಾರಂಗದಲ್ಲಿ ಬಹಳ ಅಪರೂಪ ವಾಗಿದ್ದು, ಇವರು ತಮ್ಮ ದಮನ ಪತ್ರಿಕೆಯಿಂದ ಪ್ರಖ್ಯಾತರಾಗಿ, ದಮನ ಪಾಟೀಲರೆಂದೇ ಚಿರಪರಿಚಿತರು. ದ ಹಿಂದೂ ಪತ್ರಿಕೆಯ ವರದಿಗಾರರಾಗಿಯೂ ಸೇವೆ ಸಲ್ಲಿಸಿರುವರು. ಇವರಿಗೆ ಕರ್ನಾಟಕ ಸರಕಾರ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿ ಸನ್ಮಾನಿಸಿದೆ.

೧೯೭೭ರಲ್ಲಿ ಬೀದರಿನಲ್ಲಿ ಸಮುದಾಯ ಸಂಘಟನೆಯ ಸಂಸ್ಥಾಪಕ ಅಧ್ಯಕ್ಷರಾಗಿ ಹವ್ಯಾಸಿ ರಂಗಭೂಮಿ ವ್ಯವಸ್ಥಿತವಾಗಿ ಬೆಳೆದುಬರಲು ತಮ್ಮ ತನು, ಮನ, ಧನಗಳಿಂದ ಸೇವೆ ಸಲ್ಲಿಸಿದವರು. ಹವ್ಯಾಸಿ ರಂಗಭೂಮಿಗೆ ಹೊಸ ಆಯಾಮ ದೊರಕಿಸಿಕೊಡುವಲ್ಲಿ ಇವರ ಸೇವೆ ಅಪಾರವಾಗಿದೆ. ಕಲಾವಿದರನ್ನು ಮನೆಯ ಮಕ್ಕಳಂತೆ ನೋಡಿಕೊಂಡವರು. ನಾಟಕ, ಜಾಥಾಗಳನ್ನು ಹಮ್ಮಿಕೊಂಡು ಜಿಲ್ಲೆಯಾದ್ಯಂತ ಪ್ರದರ್ಶಿಸಿದವರು. ನವ್ಯ ರಂಗ ಪರಿಕರಗಳನ್ನು ಸಂಗ್ರಹಿಸಿ ಹವ್ಯಾಸಿ ರಂಗ ತಂಡ ಗಟ್ಟಿಯಾಗಿ ನೆಲೆಯೂರಲು ಕಾರಣೀಕರ್ತರಾಗಿರುವರು. ಇವರ ಪುತ್ರರಾದ ಮಹೇಶ ಪಾಟೀಲ ಇವರು ದೆಹಲಿಯ ರಾಷ್ಟ್ರೀಯ ರಂಗಶಾಲೆಯ ಪದವಿಧರರಾಗಿ, ರಂಗಭೂಮಿಯಲ್ಲಿ, ಚಿತ್ರರಂಗದಲ್ಲಿ ತೊಡಗಿಸಿಕೊಂಡಿರುವರು.



## ಶ್ರೀ ಹಣಮಂತಪ್ಪಾ ಪಾಟೀಲ

ಹಿರಿಯ ಪತ್ರಕರ್ತರಾದ ಶ್ರೀ ಹಣಮಂತಪ್ಪಾ ಪಾಟೀಲ (ಜನನ-೧೯೪೨) ಕರ್ನಾಟಕ ಪ್ರೌಢಶಾಲೆಯಲ್ಲಿ ಸೇವೆ ಸಲ್ಲಿಸುತ್ತಲೇ, ಪತ್ರಿಕಾ ಮಾಧ್ಯಮದಲ್ಲಿ ತೊಡಗಿಸಿಕೊಂಡವರು. ಇವರು ಜನಪರ ಕನ್ನಡ ದಿನಪತ್ರಿಕೆಯ ಸಂಪಾದಕರಾಗಿ, ಪ್ರಜಾವಾಣಿ, ಡೆಕ್ಕನ ಹೆರಾಲ್ಡ್ ದಿನಪತ್ರಿಕೆಗಳು, ಟೈಮ್ಸ್ ಆಫ್ ಇಂಡಿಯಾ, ದ ಹಿಂದೂ, ಪಿಟಿಐದ ವರದಿಗಾರರಾಗಿ, ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದವರು. ಸಮುದಾಯ ಸಂಘಟನೆಯನ್ನು ಸ್ಥಾಪಿಸುವಲ್ಲಿ ಬಹಳ ಶ್ರಮಪಟ್ಟವರು. ಬೀದರ ಜಿಲ್ಲೆಯಲ್ಲಿ ಹವ್ಯಾಸಿ ರಂಗ ತಂಡಗಳು ಬೆಳೆಯಲು ನೀರೆರೆದು ಪೋಷಿಸಿದವರು. ಬೀದರಿನ ಸಾಂಸ್ಕೃತಿಕ ಲೋಕದ ಬೆಳವಣಿಗೆಯಲ್ಲಿ ಎಲೆಮರೆಯ ಕಾಯಿಯಂತೆ ಸೇವೆ ಸಲ್ಲಿಸಿದವರು. ಮಿತಭಾಷಿ, ಸದುವಿನಯದ ನಡುವಳಿಕೆ, ಎಲ್ಲರಿಗೂ ಒಳ್ಳೆಯದನ್ನೇ ಬಯಸುವ ಸುಸಂಸ್ಕೃತ ಮನಸಿನವರು ಇವರು ತಮ್ಮ ಅನುಭವದ ನೀರೆರೆದು ಪೋಷಿಸಿದ ಹಲವಾರು ಸಂಘಟನೆಗಳು ಇಂದು ಹೆಮ್ಮರವಾಗಿ ಬೆಳೆದಿವೆ.

## ದಿ. ಎಸ್.ಕೆ. ಜೋಶಿ


ಹಿರಿಯ ಪತ್ರಕರ್ತರಾದ ಎಸ್.ಕೆ. ಜೋಶಿಯವರು ಪತ್ರಿಕಾರಂಗದಲ್ಲಿ ಹೆಸರು ಮಾಡಿದವರು. ಹಲವಾರು ಪತ್ರಿಕೆಗಳಿಗೆ ಹಿರಿಯ ವರದಿಗಾರರಾಗಿ ಸೇವೆ ಸಲ್ಲಿಸಿದವರು. ಜನಪರ ಕನ್ನಡ ದಿನಪತ್ರಿಕೆ ಸಂಪಾದಕರಾಗಿ, ಬೀದರಿನ ಸಾಂಸ್ಕೃತಿಕ ಲೋಕದ ಬೆಳವಣಿಗೆಯಲ್ಲಿ ವಿಶ್ವನಾಥ ಪಾಟೀಲ, ಹಣಮಂತಪ್ಪಾ ಪಾಟೀಲ ಅವರೊಂದಿಗೆ ಸಮುದಾಯ ಸಾಂಸ್ಕೃತಿಕ ಸಂಘಟನೆಯನ್ನು ಹುಟ್ಟು ಹಾಕುವಲ್ಲಿ ಸಹ ಭಾಗಿಯಾದವರು.



## ಶ್ರೀ ದತ್ತಾ ಮೈಲೂರಕರ

ಬಹು ಭಾಷಾ ಸಾಹಿತಿ, ಕವಿ, ಗಾಯಕ, ಕಲಾವಿದರಾದ ಶ್ರೀ ದತ್ತಾತ್ರೇಯ ರಾಮರಾವ ಮೈಲೂರಕರ (ಜನನ ೩೧-೭-೧೯೩೯) ಕನ್ನಡ, ಹಿಂದಿ, ತೆಲಗು, ಮರಾಠಿ, ಉರ್ದು, ಭಾಷೆಗಳಲ್ಲಿ ಸಾಹಿತ್ಯವನ್ನು ರಚಿಸಿರುವ ಇವರು ಮತ್ತು ಇವರ ಸಂಗಡಿಗರು ಸೇರಿ ೧೯೫೦ರಲ್ಲಿ 'ಮಿತ್ರವೃಂದ' ಹವ್ಯಾಸಿ ತಂಡ ಸ್ಥಾಪಿಸಿದರು. ಮರಾಠಿ ನಾಟಕಗಳ ಪ್ರಭಾವದಿಂದ ಶ್ರೀ ಅತ್ರೇಯವರ, ಸಂಗೀತ ಸಾಷ್ಟಾಂಗ ನಮಸ್ಕಾರ (೧೯೫೭), ಲಗ್ನಾಚಿ ಬೇಡಿ, ಕೌಡಿ ಚುಂಬಕ, ಮುಂತಾದ ಮರಾಠಿ ನಾಟಕಗಳನ್ನು ಪ್ರದರ್ಶಿಸಿದರು. ಹಿಂದಿಯಲ್ಲಿ ದಹೇಜ, ಪೈಸಾ (೧೯೬೧), ಸಮಾಜ ಕೆ ಬಂಧನ (೧೯೬೩), ಹಮ್ ಏಕ್ ಹೈ, ಹಾಗೂ ಕನ್ನಡದಲ್ಲಿ ಹಣ ಹದ್ದು, ಸತ್ಯಕ್ಕೆ ಸಾವಿಲ್ಲ, ಅಪರಾಧಿ ಮುಂತಾದ ೧೭ ನಾಟಕಗಳನ್ನು ರಚಿಸಿ ಪ್ರಯೋಗಿಸಿದರು.

ಸಂಗೀತ ಕಲಾ ಮಂಡಳದಲ್ಲಿ ೫೦ ವರ್ಷಗಳಿಂದ ಗಾಯನ ಮಾಡುತ್ತ ಬಂದಿರುವರು. ಇವರು ಯಂಗ್ ಸ್ಟಾರ ಆರ್ಕೆಷ್ಟ್ರಾ ಸ್ಥಾಪಿಸಿ (೧೯೭೨-೧೯೮೫) ಇನ್ನೂರಕ್ಕೂ ಮಿಕ್ಕಿ ಸಂಗೀತ ಕಾರ್ಯಕ್ರಮ ನಡೆಸಿ ಕೊಟ್ಟಿರುವರು. ಗಣೇಶ ಉತ್ಸವದಲ್ಲಿಯೂ ಸಂಗೀತ, ನಾಟಕ ಕಾರ್ಯಕ್ರಮ ಮಾಡಿರುವರು. ಎಂ ಎಸ್ ಸತ್ಯು ಅವರ ಬರ ಚಲನ ಚಿತ್ರದಲ್ಲೂ ಅಭಿನಯಿಸಿರುವರು. ಅಪಾರವಾದ ಶಿಷ್ಯ ಬಳಗ ಇವರದಾಗಿತ್ತು. ಹಿಂದಿ ಶಿಕ್ಷಕರಾಗಿದ್ದ ಇವರಿಗೆ ಜಿಲ್ಲಾ ಆಡಳಿತದಿಂದ 'ನಾಗರೀಕ' ಸನ್ಮಾನ ಮಾಡಿರುವರು. ದೇಶಪಾಂಡೆ ಪ್ರತಿಷ್ಠಾನದಿಂದ 'ಸಾಹಿತ್ಯ ಕಲಾ ರತ್ನ' ಬಿರುದು ಕೊಟ್ಟು ಸನ್ಮಾನಿಸಿರುವರು. ಇವರೊಂದಿಗೆ ಬೆಳೆದು ಬಂದವರಲ್ಲಿ ಬಸವರಾಜ, ಚಂದ್ರಶೇಖರ ಚಕ್ಕಿ, ವಾಮನರಾವ ಕುಲಕರ್ಣಿ, ಕಲಾವಿದರು ಪ್ರಸಿದ್ಧಿ ಪಡೆದರು.



## ದಿ. ಶ್ರೀಬಸವರಾಜ ಕೊಡಗೆ

ಧರಿ ಮ್ಯಾಲಿನ ಧೀರ ಖ್ಯಾತ ರಂಗಕರ್ಮಿ ಬಸವರಾಜ ಕೊಡಗೆ. ಧರಿನಾಡು, ಬೀದರ ಜಿಲ್ಲೆಯಲ್ಲಿ ಪ್ರತಿಭೆಗಳಿಗೇನೂ ಕೊರತೆ ಇಲ್ಲ. ರಂಗಭೂಮಿಗೆ ತಮ್ಮನ್ನು ತೊಡಗಿಸಿ

ಕೊಂಡವರಲ್ಲಿ ಪ್ರಮುಖವಾಗಿ ಕಂಡುಬರುವ ಹೆಸರು, ಶ್ರೀ ಬಸವರಾಜ ಕೊಡಗೆ (ಜನನ–೧೯೬೩) ಅವರದು. ಬಾಲ್ಯದಿಂದಲೇ ರಂಗಭೂಮಿಗೆ ತಮ್ಮನ್ನು ಅರ್ಪಿಸಿಕೊಂಡವರು. ನೀ.ನಾ.ಸಂ. ಹೆಗ್ಗೋಡುನಲ್ಲಿ ರಂಗ ತರಬೇತಿ ಪಡೆದರು. ನಂತರ ಪೂರ್ಣಾವಧಿ ನಿರ್ದೇಶಕರಾಗಿ ಬೇರೆ ಬೇರೆ ಜಿಲ್ಲೆಗಳಲ್ಲಿ ರಂಗ ಶಿಬಿರ ಮಾಡಿದರು. ಬೀದರ ಸಮುದಾಯದ ಸಕ್ರಿಯ ಕಾರ್ಯಕರ್ತರಾಗಿ ಹಲವಾರು ನಾಟಕಗಳನ್ನು ನಿರ್ದೇಶಿಸಿರುವರು.


ಬೀದರ ಜಿಲ್ಲೆಯಿಂದ ಮೈಸೂರಿನ ರಂಗಾಯಣದಲ್ಲಿ ಕಲಾವಿದರಾಗಿ ಆಯ್ಕೆಗೊಂಡರು. ನಾಡಿನ ವಿಖ್ಯಾತ ರಂಗ ಕರ್ಮಿಗಳಾದ ಬಿ.ವ್ಹಿ.ಕಾರಂತರು, ಪ್ರಸನ್ನ ಅವರು, ಕನ್ನಯ್ಯಾಲಾಲ, ಗಿರೀಶ ಕಾರ್ನಾಡ, ಜರ್ಮನಿಯ ಫಿಡ್ಜ ಬೆನೆವಿಟ್, ಜಾನ್ ಮಾರ್ಟಿನ್ ಇವರುಗಳ ಗರಡಿಯಲ್ಲಿ ಪಳಗಿದವರು. ರಂಗಾಯಣದ ಕಲಾವಿದೆ, ದಾವಣಗೇರಿಯ ಶ್ರೀಮತಿ ಶಶಿಕಲಾ ಬಿ.ಎನ್.ರ ಜೊತೆ ವಿವಾಹವಾದರು. ಈ ಕಲಾಜೋಡಿ ರಂಗಾಯಣ ದೊಂದಿಗೆ ಅಮೇರಿಕಾ, ಆಸ್ಟ್ರೀಯಾ, ಇಂಗ್ಲೆಂಡಗಳಲ್ಲಿ, ನಾಟಕಗಳನ್ನು ಪ್ರದರ್ಶಿಸಿರುವರು. ಬಿಡುವಿನ ವೇಳೆಯಲ್ಲಿ, ಬೀದರ ಸಮುದಾಯ ತಂಡದ ಬೆಳವಣಿಗೆಯಲ್ಲಿ ಇವರ ಶ್ರಮ ಅಪಾರವಾಗಿದೆ. ಇವರು ನಿರ್ದೇಶಿಸಿದ ತೇಜಸ್ವಿ ಯವರ 'ತಬರನ ಕಥೆ', 'ಸಿಂಹಾಸನ ಖಾಲಿ ಇದೆ', ಗೋಗೋಲ್‌ರ 'ಪ್ರೆಸಿಡೆಂಟರಿಗೆ ಪತ್ರ' (ಸಾಹೇಬರು ಬರುತ್ತಿದ್ದಾರೆ), ಗಿರೀಶ ಕಾರ್ನಾಡರ 'ಅಗ್ನಿ ಮತ್ತು ಮಳೆ', ಮನಜರ 'ಜಲ', ಬೀದರಿನಲ್ಲಿ ಇತಿಹಾಸ ನಿರ್ಮಿಸಿದಂಥವು, ನೂರಾರು ಪ್ರತಿಭೆಗಳನ್ನು ಮಿಂಚುವಂತೆ ಮಾಡಿರುವರು. ಹಾಗೂ ಇವರು ರಚಿಸಿ ಮಾಡಿಸಿದ 'ತಮಾಷಾ' ಬೀದಿ ನಾಟಕ ದಾಖಲೆಯನ್ನೇ ನಿರ್ಮಿಸಿದೆ ಎನ್ನಬಹುದು. ೨೦೦ಕ್ಕೂ ಹೆಚ್ಚು ಪ್ರದರ್ಶನ ಕಂಡಿದೆ. ಇವರು ಹಲವಾರು ಜಾಥಾಗಳಲ್ಲಿ ಭಾಗಿಯಾಗಿರುವರು. ಮಕ್ಕಳಿಗಾಗಿ ಹಲವಾರು ರಂಗ ಶಿಬಿರಗಳನ್ನು ಮಾಡಿದವರು.

೨೦೦೧ ರಲ್ಲಿ, ಮಕ್ಕಳಿಗಾಗಿ ಶಿಬಿರ ಮಾಡಿ, 'ಕಸ್ತೂರಿ ರಾಜಾ' ನಾಟಕವನ್ನು ಮಾಡಿಸಿದ್ದು ಇವರ ಕೊನೆಯ ನಾಟಕವಾಗಿತ್ತು. ಇವರು ದೈವಾಧೀನರಾಗಿದ್ದು ರಂಗಭೂಮಿಗೆ ತುಂಬಲಾರದ ನಷ್ಟವುಂಟಾಗಿದೆ.



## ಶ್ರೀ ಮಹೇಶ ವಿ. ಪಾಟೀಲ

ಹೈದರಾಬಾದ ಕರ್ನಾಟಕದಲ್ಲಿ ಪ್ರಥಮವಾಗಿ ದೆಹಲಿಯ ಪ್ರತಿಷ್ಠಿತ ರಾಷ್ಟ್ರೀಯ ರಂಗ ಶಾಲೆಯಲ್ಲಿ ಎನ್.ಎಸ್.ಡಿ. ಪದವಿ ಪಡೆದ, ಶ್ರೀ ಮಹೇಶ ವಿ. ಪಾಟೀಲ ಬೀದರ ಸಮುದಾಯದ ಪ್ರತಿಭೆಯಾಗಿದ್ದಾರೆ. ಸಮುದಾಯದ 'ಮಾರೀಚನ ಬಂಧಗಳು', 'ಅಲಿ ಬಾಬಾ ಮತ್ತು ನಲವತ್ತು ಕಳ್ಳರು' ನಾಟಕದಿಂದ ಪ್ರಾರಂಬವಾದ ರಂಗಯಾತ್ರೆಯಲ್ಲಿ ನಟರಾಗಿ, ನಿರ್ದೇಶಕರಾಗಿ ರಂಗ ಸೇವೆಯಲ್ಲಿ ತೊಡಗಿಸಿಕೊಂಡಿರುವರು. ಕೆರೆಗೆ ಹಾರ, ಪಂಚಮ, ಕತ್ತೆ ಮತ್ತು ಧರ್ಮ, ಕೆರೆಗೆ ಹಾರ, ಮತ್ತು 'ಜ್ಞಾನ ಕಾ ಮಂದಿರ ಸಬಸೆ ಊಂಚಾ' ಹಿಂದಿ ನಾಟಕಗಳನ್ನೂ ಮಾಡಿಸಿರುವರು. ಬೀದರಿನಲ್ಲಿಯೂ ಹಲವಾರು ಡಾಕ್ಯುಮೆಂಟರಿ ಚಿತ್ರಗಳನ್ನು ತೆಗೆದಿರುವರು. ಮೂಢನಂಬಿಕೆಯ ವಿರುದ್ಧ ಹಲವಾರು ಟೆಲಿಚಿತ್ರಗಳನ್ನು ನಿರ್ದೇಶಿಸಿರುವರು. ಇವರ 'ದಿ ಬ್ಲೈಂಡ್ ಫೇತ' ಟೆಲಿಚಿತ್ರ ಬೀದರಿನಲ್ಲಿ ಚಿತ್ರಿಸಿದ್ದು, ಬೆತ್ತಲೆ ಸೇವೆಯಂಥ ಮೂಢನಂಬಿಕೆಯ ವಿರುದ್ಧ, ವೈಜ್ಞಾನಿಕ ಸತ್ಯವನ್ನು ಬಿಚ್ಚಿಡುವಲ್ಲಿ ಸಾರ್ಥಕವಾಗಿದೆ, ಸಮುದಾಯದ ಕಲಾವಿದರೆಲ್ಲ ಭಾಗವಹಿಸಿರುವರು. ಸದ್ಯ ಮುಂಬಾಯಿಯಲ್ಲಿ ಚಿತ್ರರಂಗದಲ್ಲಿ ಸೇವೆ ಸಲ್ಲಿಸುತ್ತಲಿರುವರು.



## ಶ್ರೀ ಶಂಭುಲಿಂಗ ವಾಲ್ದೊಡ್ಡಿ


'ಕಲಾಕುಸುಮ, ಗಾನಕೋಗಿಲೆ, ಭಾವಜೀವಿ, ಜಾನಪದ ಗಾರುಡಿಗ, ಸ್ನೇಹಜೀವಿ ಶಂಭುಲಿಂಗ' ಕರ್ನಾಟಕ ನಾಟಕ ಅಕಾಡೆಮಿಯ ರಾಜ್ಯ ಪ್ರಶಸ್ತಿ ಪುರಸ್ಕೃತ (೧೯೯೯) ಹಿರಿಯ ಕಲಾವಿದ, ಜಾನಪದ ಕೋಗಿಲೆ ಎಂದೇ ಪ್ರಖ್ಯಾತಿ ಪಡೆದಿರುವ ಗಾಯಕ, ನಟ, ಕೊಳಲು ವಾದಕ, ಸಂಘಟಕ, ಸದಾ ಸ್ನೇಹಜೀವಿಯಾಗಿ ಎಲ್ಲರ ಮನಗೆದ್ದಿರುವ ಶ್ರೀ ಶಂಭುಲಿಂಗ ವಾಲ್ದೊಡ್ಡಿ ಸಮತಾ ಪ್ರೌಢ ಶಾಲೆಯ ಮುಖ್ಯೋಪಾಧ್ಯಾಯರಾಗಿ ಸೇವೆ ಸಲ್ಲಿಸುತ್ತಲಿರುವರು. (ಜನನ: ೧೯೫೭). ೧೯೭೭ರಿಂದ ಸಮುದಾಯ ಸಂಘಟನೆಯೊಂದಿಗೆ ಗುರುತಿಸಿ ಕೊಂಡವರು. ಬೆಂಗಳೂರಿನ ಆದರ್ಶ ಫಿಲ್ಮ ಇನಸ್ಟಿಟ್ಯೂಟ್‌ನಿಂದ ಗಾಯನದಲ್ಲಿ ಡಿಪ್ಲೋಮಾ ಮಾಡಿರುವರು. ಕರ್ನಾಟಕ

ನಾಟಕ ಅಕಾಡೆಮಿಯ ಸದಸ್ಯರಾಗಿ ಎರಡು ಅವಧಿಗೆ ಸೇವೆ ಸಲ್ಲಿಸಿರುವರು. ಉತ್ತಮ ಶಿಕ್ಷಕರೆಂದು ರಾಷ್ಟ್ರ ಪ್ರಶಸ್ತಿಯನ್ನೂ ಪಡೆದಿರುವರು. ಇವರು ರಂಗ ತಂಡದೊಂದಿಗೆ, ನೇಪಾಳ, ಬಾಂಗ್ಲಾದೇಶ, ಭೂತಾನ ದೇಶಕ್ಕೂ ಹೋಗಿ ಬಂದಿರುವರು. ಇತ್ತೀಚೆಗೆ ೨೦೧೫ರಲ್ಲಿ ಅಮೇರಿಕಾದ ರ್‍ಯಾಲೆಯಲ್ಲಿ ನಡೆದ ನಾವಿಕ ವಿಶ್ವ ಕನ್ನಡ ಸಮ್ಮೇಳನದಲ್ಲಿ ಗಾಯಕರಾಗಿ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ತಮ್ಮ ಸಂಗೀತ ಸುಧೆ ಯನ್ನು ಹರಿಸಿರುವರು.

೧೯೮೫ರಿಂದ ಸಮುದಾಯದ ಅಧ್ಯಕ್ಷರಾಗಿ, ಹವ್ಯಾಸಿ ರಂಗಭೂಮಿಯ ಸರ್ವಾಂಗೀಣ ಬೆಳವಣಿಗೆಯಲ್ಲಿ ಮಹತ್ತರ ಭೂಮಿಕೆ ನಿರ್ವಹಿಸಿರುವರು. ಇವರು ಮಾಡಿದ ನಾಟಕಗಳು, ಮಾರೀಚನ ಬಂಧುಗಳು, ಪಂಚಮ, ಸದ್ದು, ವಿಚಾರಣೆ ನಡೆಯುತ್ತಿದೆ, ಕೆರೆಗೆ ಹಾರ, ಬೆಲೆ ಏರಿಕೆ, ಒಂದು ಲೋಕ ಕಥೆ, ನಡುಬೇಸಿಗೆಯ ಇರುಳ ಸವಿಗನಸು, ಪ್ರೆಸಿಡೆಂಟರಿಗೆ ಪತ್ರ, ಅಕ್ಷರ ಮಹಾರಾಜ, ತಬರನ ಕಥೆ, ಕೋಟೆ, ಸೂರ್ಯ ಶಿಕಾರಿ, ನಾಗಮಂಡಲ, ಅಗ್ನಿಮತ್ತು ಮಳೆ, ಜಲ, ಸಿಂಹಾಸನ ಖಾಲಿ ಇದೆ, ಗುಡುಸಲಿನ ಗುಡದಾಳಿ, ಸಂಗೊಳ್ಳಿರಾಯ ಸರದಾರ, ಮತ್ತು ಅರಿವು ಟೆಲೆಚಿತ್ರ, ಅಲ್ಲದೇ ಹಲವಾರು ಧ್ವನಿ ಸುರುಳಿಗಳನ್ನು ಬಿಡುಗಡೆ ಮಾಡಿರುವರು. ಇವರು ರಂಗ ಸಂಗೀತ ನೀಡಿದರೆ ಸಾಕು, ನಾಟಕಗಳು ಯಶಸ್ವಿ ಎಂದು ಮನದಟ್ಟಾಗಿದೆ.

ಇವರು ಮೂವತ್ತು ವರ್ಷಗಳ ಕಾಲ ನಿರಂತರವಾಗಿ ರಂಗಭೂಮಿ, ಬೀದಿ ನಾಟಕ, ಜಾನಪದ ಹಾಡುಗಾರಿಕೆ ಸಂಗೀತ, ಶಿಕ್ಷಣ, ಸಾಕ್ಷರತಾ ಆಂದೋಲನ, ಸಮಾಜ ಸೇವೆ ಹೀಗೆ ವಿವಿಧ ಕ್ಷೇತ್ರಗಳಲ್ಲಿ ಸಲ್ಲಿಸಿದ ಅಪಾರವಾದ ಸಾಂಸ್ಕೃತಿಕ ಸೇವೆಯನ್ನು ಗಣನೆಗೆ ತೆಗೆದುಕೊಂಡು ಧರಿನಾಡು ಕನ್ನಡ ಸಂಘ ಬೀದರ ಇವರು ಶ್ರೀ ಶಂಭುಲಿಂಗ ವಾಲ್ದೊಡ್ಡಿಯವರಿಗೆ 'ಸ್ನೇಹಜೀವಿ' ಎಂಬ ಬೃಹತ್ ಅಭಿನಂದನಾ ಗ್ರಂಥವನ್ನು ಸಮರ್ಪಿಸಿರುವರು.

ಇವರ ಕಲೆಯ ಸಾಧನೆ ಕಂಡು ಕರ್ನಾಟಕ ನಾಟಕ ಅಕಾಡೆಮಿ ಬೆಂಗಳೂರು ಇವರ ಜೀವನ ಸಾಧನೆಯ ವ್ಯಕ್ತಿಚಿತ್ರಣ ಕುರಿತು ಕಿರುಚಿತ್ರವನ್ನು ನಿರ್ಮಿಸಿರುತ್ತಾರೆ. ಇದು ಹೈದ್ರಾಬಾದ ಕರ್ನಾಟಕದಲ್ಲಿಯೇ ಪ್ರಪ್ರಥಮವಾಗಿ ಕಲಾವಿದನ ಕುರಿತು ನಿರ್ಮಿಸಿದ ಚಿತ್ರವಾಗಿದ್ದು ಇದು ಸಾಂಸ್ಕೃತಿಕ ಲೋಕಕ್ಕೆ ಹೆಮ್ಮೆಯ ವಿಷಯವಾಗಿದೆ.



# ಶ್ರೀ ಚಂದ್ರಗುಪ್ತ ಚಾಂದಕವಠೆ

ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತ (೧೯೯೭) ಹಿರಿಯ ಸಾಹಿತಿ, ಕಲಾವಿದ ಚಂದ್ರಗುಪ್ತ ಚಾಂದಕವಠೆ, ಬಿ.ಎಸ್.ಎನ್.ಎಲ್. ಬೀದರ ನಲ್ಲಿ ಜೆ.ಟಿ.ಓ ಆಗಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿರುವರು (ಜನನ:೧೯೫೫) ಇವರು ವಿಜಯಪೂರ ಜಿಲ್ಲೆಯ ಆಲಮೇಲದವರು. ಬಾಲ್ಯದಿಂದಲೇ ರಂಗಭೂಮಿಗೆ ಆಕರ್ಷಿತರಾಗಿ ವಿಜಯಪೂರದಲ್ಲೂ ಹವ್ಯಾಸಿ ಕಲಾವಿದರಾಗಿ ಶ್ರೀನಿವಾಸ ತಾವರಗೆರೆ ಅವರು. ಅಶೋಕ ಬಾದರದಿನ್ನಿ ಮುಂತಾದ ಖ್ಯಾತ ಕಲಾವಿದರ ಜೊತೆಗೆ ನಾಟಕಗಳಲ್ಲಿ ಭಾಗವಹಿಸಿದರು. ೧೯೭೭ರಿಂದ ಕಲಬುರಗಿಯ ರಂಗ ಮಾಧ್ಯಮ ತಂಡದಲ್ಲಿ ಕಲಾವಿದನಾಗಿ, ಡಾ. ಗಿರಡ್ಡಿಯವರ ಗರಡಿಯಲ್ಲಿ ಪಳಗಿದವರು. ನಾಟಕಗಳಾದ ಏನ ಬೇಡಲಿ ನಿನ್ನ ಬಳಿಗೆ ಬಂದು, ನೀ ಮಾಯೆಯೊಳಗೋ, ಇದಕೆ ಸಂಶಯವಿಲ್ಲ, ಆಮನೆ, ಗುಡುಸಲಿನ ಗುಡದಾಳಿ, ನಾಯಿಕಥೆ (ಮದ್ರಾಸನಲ್ಲಿಯೂ ಪ್ರಯೋಗವಾಗಿದೆ) ಪ್ರಮುಖವಾಗಿವೆ.

೧೯೮೨ರಿಂದ ಬೀದರಿನ ರಂಗಭೂಮಿಗೆ ತಮ್ಮ ಇಡೀ ಕುಟುಂಬದೊಂದಿಗೆ ತೊಡಗಿಸಿಕೊಂಡವರು. ಸಮುದಾಯ ಸಂಘಟನೆಯ ನಾಟಕಗಳಾದ, ಒಂದು ಲೋಕ ಕಥೆ, ನಡುಬೇಸಿಗೆಯ ಇರುಳ ಸವಿಗನಸು, ಅಕ್ಷರ ಮಹಾರಾಜ, ಪ್ರೆಸಿಡೆಂಟರಿಗೆ ಪತ್ರ, ತಬರನ ಕಥೆ, ಅಗ್ನಿ ಮತ್ತು ಮಳೆ, ಜಲ, ಸಿಂಹಾಸನ ಖಾಲಿ ಇದೆ, ಮತ್ತು ಅರಿವು ಟೆಲೆಚಿತ್ರ, ಮತ್ತು ಮಹೇಶ ಪಾಟೀಲರ ದಿ ಬ್ಲೈಂಡ ಫೇತ ಟೆಲೆಚಿತ್ರದಲ್ಲೂ ಅಭಿನಯಿಸಿರುವರು. ಆಕಾಶವಾಣಿ ಕಲಬುರಗಿಯ ಹಿರಿಯ ಕಲಾವಿದರಾಗಿ ಸೇವೆ ಸಲ್ಲಿಸುತ್ತಲಿರುವರು. ಕಲಬುರಗಿ ಆಕಾಶವಾಣಿಗಾಗಿ, ಅಸಗರ್ ವಜಾಹತ್ ಅಲಿ ಅವರ ಹಿಂದಿಮೂಲ, ಅನುವಾದ ತಿಪ್ಪೇಸ್ವಾಮಿ 'ರಾವಿ ನದಿಯ ದಂಡೆಯಲ್ಲಿ' ಬಾನುಲಿ ನಾಟಕವನ್ನು ಇವರ ನಿರ್ದೇಶನದಲ್ಲಿ ಪ್ರಸ್ತುತಪಡಿಸಲಾಯಿತು. ಬಸವಕಲ್ಯಾಣದಲ್ಲಿ ಚಿತ್ರಿತವಾದ 'ಅಕ್ಕ' ಚಲನಚಿತ್ರದಲ್ಲಿಯೂ ನಟಿಸಿರುವರು.

೧೯೮೫ರಿಂದ ಅಭಿನಯ ಗಂಗೋತ್ರಿ ಹವ್ಯಾಸಿ ತಂಡದ ಅಧ್ಯಕ್ಷರಾಗಿ, ಬೆಳಕಿನೆಡೆಗೆ, ಗೋಕರ್ಣದ ಗೌಡಶಾನಿ, ಖಿರೋಖಿರ, ಕುಂಟಾ ಕುಂಟಾ ಕುರವತ್ತಿ, ರತ್ತೋರತ್ತೋ ರಾಯನ ಮಗಳೆ, ಕೊಡೆಗಳು, ಇದಕೆ ಸಂಶಯವಿಲ್ಲ, ಸಂಗೊಳ್ಳಿ ರಾಯ ಸರದಾರ, ಜಾತ್ರೆ, ಹೀಗೆ ಹಲವಾರು ನಾಟಕಗಳನ್ನು ನಿರ್ದೇಶಿಸಿ, ಅಭಿನಯಿಸಿರುವರು. ಕವಿಯಾಗಿ ತಮ್ಮ ಮಿಡಿತ ಕವನ ಸಂಕಲನವನ್ನೂ ಪ್ರಕಟಿಸಿರುವರು. ಪತ್ರಿಕೆಗಳಲ್ಲಿ ರಂಗಭೂಮಿಯ


ಕಲಾವಿದರ ಪರಿಚಯ, ನಾಟಕ ವಿಮರ್ಶೆ, ರಂಗಭೂಮಿಯ ಕುರಿತು ಹಲವಾರು ಲೇಖನಗಳು ಪ್ರಕಟವಾಗಿವೆ. ಗುಲಬರ್ಗಾ ವಿಶ್ವವಿದ್ಯಾಲಯದಿಂದ ಇವರು ರಚಿಸಿದ 'ಬೀದರ ಜಿಲ್ಲೆಯ ರಂಗಭೂಮಿ' ಪ್ರಚಾರೋಪನ್ಯಾಸ ಮಾಲೆಯ ಪುಸ್ತಿಕೆ ಪ್ರಕಟವಾಗಿದೆ.



## ದಿ. ಶ್ರೀ ಚಂದ್ರಶೇಖರ ಚಕ್ಕಿ

ಕರ್ನಾಟಕ ನಾಟಕ ಅಕಾಡೆಮಿಯ 'ಪದ್ದಣ್ಣ ಶ್ರಮ ಪ್ರಶಸ್ತಿ' (೨೦೦೦) ಪುರಸ್ಕೃತ ಶ್ರೀ ಚಂದ್ರಶೇಖರ ಚಕ್ಕಿಯವರು, (ಜನನ-೧೯೪೬) ಕಲಾ ಪರಿಪೂರ್ಣ, ಲಲಿತ ಕಲೆಗಳ ಆಗರವಾಗಿದ್ದ ಕಲಾವಿದರಾದ ಶ್ರೀ ಚಂದ್ರಶೇಖರ ಚಕ್ಕಿ ಅವರು ಬಿ.ವಿ. ಭೂಮರೆಡ್ಡಿ ಕಾಲೇಜಿನಲ್ಲಿ ಸೇವೆ ಸಲ್ಲಿಸುತ್ತಿದ್ದರು. ಚಿತ್ರಕಲೆಯಲ್ಲಿ ಪದವಿ ಪಡೆದವರು. ಮಹಾನ್ ಕಲಾವಿದ ಎಸ್.ಎಮ್. ಪಂಡಿತ ಅವರ ಗರಡಿಯಲ್ಲಿ ಕಲಾವಿದರಾಗಿ ರೂಪುಗೊಂಡವರು. ಬಿದರಿನಲ್ಲಿ ಗುರುಗಳಾದ ಎಸ್.ಎಮ್. ಪಂಡಿತರ ಹೆಸರಲ್ಲಿ ಚಿತ್ರಕಲಾ ಶಾಲೆ ಪ್ರಾರಂಭಿಸಿದರು. ಜೊತೆಗೆ ಎನಿಮೇಷನ್, ಫೋಟೋಗ್ರಾಫಿ, ನಾಟಕ, ಹವ್ಯಾಸಕ್ಕಾಗಿ ಫೋಟೋ ಸ್ಟುಡಿಯೋವನ್ನೂ ನಡೆಸುತ್ತಿದ್ದರು.


ಮಹಾನ್ ಚಿತ್ರ ನಿರ್ದೇಶಕ ಎಮ್.ಎಸ್. ಸತ್ಯು ಅವರು ಬೀದರನಲ್ಲಿ ಬರ ಚಿತ್ರ ನಿರ್ಮಿಸುವಾಗ ಅವರ ಸಹಾಯಕರಾಗಿ, ಜೊತೆಗೆ ಚಿತ್ರದಲ್ಲೂ ನಟಿಸಿದರು. ಅಕ್ಬರ್ ದಿ ಗ್ರೇಟ್ ಧ್ವನಿ ಬೆಳಕು ನಾಟಕದಲ್ಲಿ ನಟಿಸಿದರು. ನಂತರ ಸಮುದಾಯ, ಅಭಿನಯ ಗಂಗೋತ್ರಿ, ಬಿ.ಜಿ.ವಿ.ಎಸ್. ತಂಡದ ನಾಟಕಗಳಾದ, ಒಂದು ಲೋಕ ಕಥೆ, ನಡುಬೇಸಿಗೆಯ ಇರುಳ ಸವಿಗನಸು, ಪ್ರೆಸಿಡೆಂಟರಿಗೆ ಪತ್ರ, ತಬರನ ಕಥೆ, ಅಗ್ನಿಮತ್ತು ಮಳೆ, ಜಲ, ಸಿಂಹಾಸನ ಖಾಲಿ ಇದೆ, ಬಾಯಿ ಬಂದ ಬಾದಶಾಹ ಪುರಾಣ, ಗೋಕರ್ಣದ ಗೌಡಶಾನಿ, ಖರೋಖರ, ಸಂಗೊಳ್ಳಿ ರಾಯ ಸರದಾರ, ಮತ್ತು ಸಾಕ್ಷರತಾ ಜಾಥಾಗಳಲ್ಲೂ, ಬೀದಿ ನಾಟಕಗಳಲ್ಲೂ ನಟಿಸಿರುವರು. ಅನಾರೋಗ್ಯದಿಂದಾಗಿ ೨೦೦೨ರಲ್ಲಿ ದೈವಾಧೀನರಾದರು.



## ದೇಶಾಂಶ ಹುಡುಗಿ

ಧರಿನಾಡ ಸಿರಿ, ಹಿರಿಯ ಸಾಹಿತಿ, ಜಾನಪದ ತಜ್ಞ, ಕಲಾವಿದ ದೇಶಾಂಶ ಹುಡುಗಿ (ಜನನ:೬-೧೧-೧೯೩೬. ದೇವರಾಯ ಶಾಂತಪ್ಪ, ಶರಣಪ್ಪ) ಎಂದೇ ಪ್ರಸಿದ್ಧರು. ೨೦೦೬ರಲ್ಲಿ, ಕರ್ನಾಟಕ ನಾಟಕ ಅಕಾಡೆಮಿ ಸುವರ್ಣ ಕರ್ನಾಟಕ ಗೌರವ ಪುರಸ್ಕಾರ ನೀಡಿದೆ. ಇವರು ಸ್ವಾತಂತ್ರ್ಯ ಪೂರ್ವದಲ್ಲಿ ಹೈದರಾಬಾದ ನಿಜಾಮರ ಆಡಳಿತದ ಉರ್ದು, ಮರಾಠಿ, ಹಿಂದಿಗಳ ಪ್ರಭಾವದಲ್ಲೂ ಕನ್ನಡ ನಾಟಕಗಳನ್ನು ಮಾಡಿಸಲು ಪ್ರಾರಂಭಿಸಿದವರು. ೧೯೫೦ರಲ್ಲಿ ಗಾಂಧಿ ಟೊಪಿ ನಾಟಕ, ೧೯೫೬ರಲ್ಲಿ ಅಶಿಕ್ಷಿತರ ಗೋಳು, ೧೯೫೭ರಲ್ಲಿ ರಕ್ತದೀಪ, ೧೯೫೮ರಲ್ಲಿ ಪ್ರಪಂಚ ಪರೀಕ್ಷೆ, ನಾಟಕಗಳನ್ನು ಯಶಸ್ವಿಯಾಗಿ ಪ್ರಯೋಗಿಸಿದರು. ನಂತರ ಪ್ರೇಮಬಂಧನ, ಅಣ್ಣ ತಮ್ಮ, ಸುನಂದಾ, ಹೀಗೆ ಹಲವಾರು ನಾಟಕಗಳನ್ನು ಹುಡುಗಿ ಗ್ರಾಮದಲ್ಲಿ ಮಾಡಿದರು.


೧೯೯೩ರಲ್ಲಿ ಡಿ.ವಾಯ್.ಎಫ್.ವಾಯ್ ತಂಡದಿಂದ ಬೆಂಗಾಲಿ ಮೂಲ, ಉತ್ಪಲದತ್ತರ 'ಸೂರ್ಯ ಶೀಕಾರಿ' (ಅನುವಾದ ಎಮ್.ಪಿ. ಪ್ರಕಾಶ. ನಿ.ಡಾ. ಅನೀಲಕುಮಾರ ಮುಗಳಿ)ಯಲ್ಲಿ, ಹಿರಿಯ ಬೌದ್ಧ ಭಿಕ್ಷು ಬಿಲ್ಹಣನ ಪಾತ್ರದಲ್ಲಿ ನೈಜವಾಗಿ ಅಭಿನಯಿಸಿ ಎಲ್ಲರ ಮೆಚ್ಚುಗೆ ಪಡೆದವರು. ೮೦ರ ವಯಸ್ಸಿನಲ್ಲೂ ಉತ್ಸಾಹದಿಂದ ಸಾಂಸ್ಕೃತಿಕ ಕ್ಷೇತ್ರದಲ್ಲಿ ಚಟುವಟಿಕೆಯಿಂದ ಭಾಗವಹಿಸುವರು.



## ವೈಜನಾಥ ಬಿರಾದಾರ

ರಾಜ್ಯೋತ್ಸವ ಪ್ರಶಸ್ತಿ ಪಡೆದ ಹಿರಿಯ ರಂಗಭೂಮಿ ಕಲಾವಿದ ತೇಗಂಪೂರದ ಶ್ರೀ ವೈಜನಾಥ ಬಿರಾದಾರ, ಬೀದರ ಜಿಲ್ಲೆಯ ಹೆಮ್ಮೆಯ ಪುತ್ರ. ಕಲಾ ಲೋಕದಲ್ಲಿ ಅಂತರ್ ರಾಷ್ಟ್ರ ಮಟ್ಟದ ಪ್ರಶಸ್ತಿ ಪಡೆದುಕೊಂಡವರು. ತಮ್ಮ ಜೀವನವನ್ನೂ ರಂಗಭೂಮಿಗಾಗಿ ಮುಡಿಪಿಟ್ಟವರು. ಚಲನಚಿತ್ರಗಳಲ್ಲಿ ತಮ್ಮದೇ ಆದ ವಿಶಿಷ್ಟ ಮ್ಯಾನರಿಸಮ್‌ನಿಂದ

ಹೆಸರುವಾಸಿಯಾದವರು. ಕಾಮೇಡಿಯನ್ ಪಾತ್ರದಲ್ಲಿ ಇನ್ನೂರಕ್ಕೂ ಹೆಚ್ಚು ಚಲನಚಿತ್ರಗಳಲ್ಲಿ ನಟಿಸಿರುವರು. ಪೋಷಕ ಪಾತ್ರಗಳಲ್ಲಿಯೇ ನಟಿಸಿ ರಾಷ್ಟ್ರ ಪ್ರಶಸ್ತಿಗೆ ಭಾಜನರಾಗಿರುವರು. ತಮ್ಮದೇ ಆದ 'ಬಿರಾದಾರ ಮಿತ್ರ ಮಂಡಳಿ' ನಾಟಕ ಸಂಸ್ಥೆಯಿಂದ ಸಾಮಾಜಿಕ ನಾಟಕಗಳನ್ನು ಮಾಡಿಸುವರು. ಬೀದರಿನಲ್ಲಿ ಇತ್ತೀಚಿಗೆ ವೃತ್ತಿ ರಂಗ ನಾಟಕಗಳ ನಾಟಕೋತ್ಸವವನ್ನು ಅಕಾಡೆಮಿಯು ಸಹಯೋಗ ದೊಂದಿಗೆ ಆಯೋಜಿಸಿದ್ದರು. ಎಲ್ಲರೊಡನೆ ಮುಕ್ತವಾಗಿ ಬೆರೆಯುವ, ಇವರು ಸದಾ ರಂಗಭೂಮಿ ಏಳಿಗೆಗಾಗಿ ದುಡಿಯುತ್ತಲಿರುವರು. ಇವರಿಗೆ ೨೦೦೬ರಲ್ಲಿ, ಕರ್ನಾಟಕ ನಾಟಕ ಅಕಾಡೆಮಿ ಸುವರ್ಣ ಕರ್ನಾಟಕ ಗೌರವ ಪುರಸ್ಕಾರ ನೀಡಿದೆ. ೨೦೧೨ರಲ್ಲಿ ಕರ್ನಾಟಕ ನಾಟಕ ಅಕಾಡೆಮಿ, ಕಲ್ಚರಲ್ ಕಮೇಡಿಯನ್ ಕೆ ಹಿರಣಯ್ಯದತ್ತಿ ಪ್ರಶಸ್ತಿ ನೀಡಿ ಗೌರವಿಸಿದೆ.



## ಪ್ರೊ. ಸಂಗ್ರಾಮ ಎಂಗ್ಲೇ

ಹವ್ಯಾಸಿ ಕಲಾವಿದ, ಪ್ರೊ. ಸಂಗ್ರಾಮ ಯಂಗ್ಲೇ (ಜನನ: ೧೯೫೫) ಇವರು ಸಧ್ಯ ಅಕ್ಕಮಹಾದೇವಿ ಮಹಿಳಾ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿರುವರು. ಇವರಿಗೆ ಕರ್ನಾಟಕ ನಾಟಕ ಅಕಾಡೆಮಿಯು ೨೦೧೧ರಲ್ಲಿ, ನಟನೆ ನಿರ್ದೇಶನಕ್ಕಾಗಿ ಸುವರ್ಣ ಸಂಭ್ರಮ ರಂಗ ಪ್ರಶಸ್ತಿ ನೀಡಿ ಇವರನ್ನು ಗೌರವಿಸಿದೆ.

ಬಾಲ್ಯದಿಂದಲೇ ನಾಟಕಗಳಿಂದ ಆಕರ್ಷಿತರಾಗಿದ್ದವರು. ೧೯೭೬ರಲ್ಲಿ ಭಾಲ್ಕಿಯಲ್ಲಿ ಶಿವಶರಣ ಹರಳಯ್ಯ ನಾಟಕದಲ್ಲಿ ಕಲ್ಯಾಣಿಯಾಗಿ ಹೆಣ್ಣು ಪಾತ್ರದಲ್ಲಿ ನಟಿಸಿದ್ದರು, ಹರಳಯ್ಯರಾಗಿ ಪೂಜ್ಯ ಬಸವಲಿಂಗ ಪಟ್ಟದ್ದೇವರು ಅಭಿನಯಿಸಿದ್ದರೆಂದು ತಿಳಿಸುವರು. ಬೀದರ ಸಮುದಾಯದ ಅಕ್ಷರ ಮಹಾರಾಜ, ಕೋಟೆ, ಸೂರ್ಯ ಶಿಕಾರಿ, ಸಿಂಹಾಸನ ಖಾಲಿ ಇದೆ, ಮತ್ತು ಅಗ್ನಿ ಮತ್ತು ಮಳೆ, ಜಲ, ನಾಟಕಗಳಲ್ಲಿ ಭಾಗವಹಿಸಿರುವರು.

ಇವರ ಅಧ್ಯಕ್ಷತೆಯಲ್ಲಿ ೧೯೯೭ರಲ್ಲಿ ಸ್ಥಾಪನೆಗೊಂಡ ಬೀದರ ಹವ್ಯಾಸಿ ಕಲಾತಂಡ ಹೊಸ ಮುಖಗಳಿಗೆ ಅವಕಾಶ ಮಾಡಕೊಡುತ್ತಲಿದೆ. ಹಲವಾರು ನಾಟಕಗಳನ್ನು ಮಾಡಿಸಿರುವರು. 'ಯಮನ ದರ್ಬಾರು', ಮತ್ತು 'ಕತ್ತಲಲ್ಲಿ ಕಂಡ ಬೆಳಕು', (ಪರಿಕಲ್ಪನೆ,

ನಿರ್ದೇಶನ. ಡಾ. ಅನೀಲಕುಮಾರ. ಮುಗಳಿ), ‘ಅಂಧಕಾರ’’ ನಾಟಕ, (ನಿ.ಅನೀಲ ಬಿರಾದಾರ), ‘ಏನಾದರೂ ಆಗು ಮೊದಲು ಮಾನವನಾಗು’ ಗೀತರೂಪಕದ ಹಲವಾರು ಪ್ರಯೋಗ ಮಾಡಿದೆ. ಮೂಢನಂಬಿಕೆಯನ್ನು ದೂರ ಮಾಡುವ ಸಲುವಾಗಿ ‘ಪವಾಡ ರಹಸ್ಯ ಬಯಲು’ ಕಾರ್ಯಕ್ರಮಗಳನ್ನು ಹಳ್ಳಿಗಳಲ್ಲಿ ನೀಡಿ ಜನಮೆಚ್ಚುಗೆ ಪಡೆದಿರುವರು.

ಬೀದರಿನ ಬಸವ ಸೇವಾ ಪ್ರತಿಷ್ಠಾನದ ಶರಣ ಕಲಾಲೋಕ ತಂಡದಿಂದ, ಕಲ್ಯಾಣ ಕ್ರಾಂತಿ, ಬೆಳಗು ಮೂಡಿತು, ಮೂಢತನ ಬಿಡಿ, ಶಿವಶರಣ ನನ್ನಯ್ಯ, ಕ್ರಾಂತಿಯ ಕಿಡಿ, ಉಳವಿಯೆಡೆಗೆ, ನಂಬಿದ ಭಕ್ತನಿಗೆ ದೇವನೊಬ್ಬ, ಅಕ್ಕಮಹಾದೇವಿ ಹೀಗೆ ಹಲವಾರು ನಾಟಕಗಳನ್ನು ಪ್ರೊ. ಸಂಗ್ರಾಮ ಎಂಗ್ಳೇ ಅವರ ನಿರ್ದೇಶನದಲ್ಲಿ ರಂಗಕ್ಕೆ ತಂದಿರುವರು. ಮತ್ತು ಕೃಷ್ಣದೇವರಾಯ, ದುಶ್ಚಟಗಳು, ಮಾದರಿ ಶಾಲೆ, ಶಿವಶರಣ ಹರಳಯ್ಯ, ಒನಕೆ ಓಬವ್ವ, ಸುರ ಸುಂದರಾಂಗ ಮುಂತಾದ ನಾಟಕಗಳನ್ನು ಮಾಡಿಸಿರುವರು. ಈ ನಾಟಕಗಳಲ್ಲಿ ಮಹಿಳೆಯರೇ ಭಾಗವಹಿಸುತ್ತಿರುವದು ವಿಶೇಷವಾಗಿದೆ. ಕಲ್ಯಾಣದ ಶರಣರ ಜೀವನ ಚಿತ್ರಗಳನ್ನು ನಾಟಕ, ಗೀತ ರೂಪಕಗಳ ಮೂಲಕ ಕಟ್ಟಿ ಕೊಡುತ್ತಲಿರುವರು. ವಚನಗಳ ನೃತ್ಯ, ನಾಟಕಗಳಿಂದ ಜನಪ್ರಿಯರಾಗಿರುವರು.



## ಮಹೇಶ ಥೂಪೆ

೨೭ ಜೂನ್ ೨೦೧೫ರಂದು ನಡೆಯುವ ಸಿಜಿಕೆಯವರ ಹುಟ್ಟು ಹಬ್ಬದ ನಿಮಿತ್ಯ, ಬೀದಿ ರಂಗ ದಿನದ ಅಂಗವಾಗಿ ‘ಸಿಜಿಕೆ ರಂಗ ಪುರಸ್ಕಾರ’ವನ್ನು ಕಲಾವಿದರಾಗಿ, ನೇಪಥ್ಯ ಕಲಾವಿದರಾಗಿ, ಮುಖವಾಡಗಳ ತಯಾರಿ, ಮೇಕಪ್ ಮಾಡುವದು, ವೇಷಭೂಷಣ, ರಂಗ ಪರಿಕರಗಳ ನಿರ್ವಹಣೆ, ಹೀಗೆ ಬಹುಮುಖ ಪ್ರತಿಭೆಯಿಂದ ರಂಗ ಸೇವೆ ಮಾಡುತ್ತಲಿರುವ, ಕಲಾವಿದ ಶ್ರೀ ಮಹೇಶಕುಮಾರ ಥೂಪೆ (ಜನನ-೧೯೬೭) ಇವರಿಗೆ ಪ್ರಶಸ್ತಿ ಪ್ರದಾನ ಕಾರ್ಯಕ್ರಮವನ್ನು ಬೀದರ ಜಿಲ್ಲಾ ಜನಪದ ಕಲಾವಿದರ ಬಳಗದಿಂದ ಹಮ್ಮಿಕೊಳ್ಳಲಾಗಿತ್ತು. ಇದು ಹಿರಿಯ ಕಲಾವಿದನಿಗೆ ಸಂದ ಗೌರವವಾಗಿದೆ.


ಸದ್ಯ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿರುವ ಇವರು, ರಂಗ ಕಲೆಗೆ ಸಂಬಂಧಿಸಿದಂತೆ ರಂಗ ಸಂಸ್ಕೃತಿ ಶಿಬಿರ ೧೯೯೧, ರಂಗ ಕಲೆ ಶಿಬಿರ ೧೯೯೩, ಭಾಷೆ ಮತ್ತು ರಂಗಭೂಮಿ ೨೦೦೨, ಶಿಕ್ಷಣದಲ್ಲಿ ರಂಗ ಕಲೆ ೨೦೦೨ಗಳಲ್ಲಿ ಭಾಗವಹಿಸಿ ರಂಗಭೂಮಿ ಕುರಿತು ಆಳವಾದ ಅನುಭವವನ್ನು ಪಡೆದಿರುವರು.

ಬಾಲ್ಯದಿಂದಲೇ ರಂಗ ಭೂಮಿಗೆ ಆಕರ್ಷಿತರಾಗಿ ನೂರಾರು ನಾಟಕಗಳಲ್ಲಿ ಅಭಿನಯಿಸಿರುವರು. ಸಮುದಾಯ ತಂಡದಿಂದ ಆಯೋಜಿಸಿದ ಎಲ್ಲ ರಂಗ ಶಿಬಿರಗಳಲ್ಲಿ ಭಾಗವಹಿಸಿರುವರು. ಬಿ.ಜಿ.ವಿ.ಎಸ್ ನ 'ಒಂದು ಪತ್ರ' ಬೀದಿ ನಾಟಕ ಜಿಲ್ಲೆಯಾದ್ಯಂತ ೨೦೫ ಪ್ರದರ್ಶನ, ಮತ್ತು ತಮಾಷಾ ಬೀದಿ ನಾಟಕಗಳ ೧೫೦ ಪ್ರದರ್ಶನಗಳಲ್ಲಿ ಭಾಗವಹಿಸಿರುವರು. ಹೆಬ್ಬೆರಳು, ಮಾದರಿ ಶಾಲೆ, ಗೌರಿ ಕನಸು ಮುಂತಾದ ಸಾಕ್ಷರತಾ ಕಾರ್ಯಕ್ರಮದ ಬೀದಿ ನಾಟಕಗಳಲ್ಲಿ ಭಾಗವಹಿಸಿರುವರು.

ಸಮುದಾಯದ ನಾಟಕಗಳಾದ, ಅಲಿಬಾಬಾ ಮತ್ತು ನಲವತ್ತು ಕಳ್ಳರು, ಒಂದು ಲೋಕ ಕಥೆ, ನಡು ಬೇಸಿಗೆಯ ಇರುಳು ಸವಿಗನಸು, ಸಿಂಹಾಸನ ಖಾಲಿ ಇದೆ, ತಬರನ ಕಥೆ, ಅಗ್ನಿ ಮತ್ತು ಮಳೆ, ಕೋಟೆ, ಕತ್ತೆ ಮತ್ತು ಧರ್ಮ, ಬಕ, ನಾಗ ಮಂಡಲ, ಜಲ, ಬಾಯಿ ಬಂದ್ ಬಾದಶಾಹ ಪುರಾಣ, ಕೆರೆಗೆ ಹಾರ, ಮತ್ತು ಹವ್ಯಾಸಿ ಕಲಾತಂಡದ 'ತಿಳಿದು ನಡೆ, ಏನಾದರೂ ಹಾಗೂ ಮೊದಲು ಮಾನವನಾಗು, ಅಂಧಕಾರ, ಯಮನ ದರ್ಬಾರು, ವೀರ ಸಿಫಾಯಿ, ಅಭಿನಯ ಗಂಗೋತ್ರಿಯ ನಾಟಕಗಳಾದ 'ಜಾತ್ರೆ, ಸಂಗೊಳ್ಳಿ ರಾಯ ಸರದಾರ, ಮನೆ ಮನೆಯ ಕಥೆ', ನಾಟಕಗಳು. ಕರ್ನಾಟಕ ಕಲಾ ವೈಭವ ಧ್ವನಿ ಮತ್ತು ಬೆಳಕು ನಾಟಕದಲ್ಲಿ ಸುಮಾರು ಹದಿನಾಲ್ಕು ಪಾತ್ರಗಳಲ್ಲಿ ನಟಿಸಿ ಪ್ರಶಂಸೆ ಪಡೆದಿರುವರು. ಆಕಾಶವಾಣಿ ಗುಲಬರ್ಗಾದಿಂದ ರಾವಿ ನದಿಯ ದಂಡೆಯಲ್ಲಿ ನಾಟಕದಲ್ಲೂ ಭಾಗವಹಿಸಿದ್ದರು. ಹಾಗೂ ಅರಿವು, ದಿ ಬ್ಲೈಂಡ ಫೇಥ, ಟೆಲಿಚಿತ್ರಗಳಲ್ಲಿ ಅಭಿನಯಿಸಿರುವರು.


ಇವರ ನಿರ್ದೇಶನದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಚೈತ್ರ ಚಿಗುರು ಬೇಸಿಗೆ ಶಿಬಿರದಿಂದ ಮಕ್ಕಳಿಗಾಗಿ ಪರಿಸರ ಸಂರಕ್ಷಣೆ ಕುರಿತ ನಾಟಕ ಮಾಡಿಸಿರುವರು. ಪ್ರತಿ ವರ್ಷ ನಡೆಯುವ ಬಸವ ಸೇವಾ ಪ್ರತಿಷ್ಠಾನದಿಂದ ಪ್ರತಿ ವರ್ಷ ನಡೆಯುವ ಶರಣ ಕಲಾಲೋಕ ತಂಡಕ್ಕಾಗಿ ಮಕ್ಕಳ ಸಾಂಸ್ಕೃತಿಕ ಶಿಬಿರವನ್ನು ನಿರ್ದೇಶಿಸಿರುವರು.

## ಡಾ. ಪ್ರಾಣೇಶ ಗುಡೂರ



ಡಾ. ಪ್ರಾಣೇಶ ಗುಡೂರ ಅವರು ಸದ್ಯ ರಾಜೀವ ಗಾಂಧಿ ವಿಶ್ವವಿದ್ಯಾಲಯ ಬೆಂಗಳೂರಲ್ಲಿ ಡೆಪ್ಯುಟಿ ರೆಜಿಸ್ಟ್ರಾರ ಆಗಿ ಸೇವೆ ಸಲ್ಲಿಸುತ್ತಿದ್ದು, ಉತ್ತಮ ಕಲಾವಿದರಾದ ಇವರು ಬೀದರಿನಲ್ಲಿದ್ದಾಗ ಸಮುದಾಯ ಬೀದರ ತಂಡದಿಂದ ಮಾಡಿದ ನಾಟಕಗಳಾದ, ಸಿ. ಬಸವಲಿಂಗಯ್ಯನವರ ಒಂದು ಲೋಕ ಕಥೆ, ನಡು ಬೇಸಿಗೆಯ ಇರುಳು ಸವಿಗನಸು ನಲ್ಲಿ ರಾಜ, ಬಸವರಾಜ ಕೊಡಗೆಯವರ ಪ್ರೆಸಿಡೆಂಟರಿಗೆ ಪತ್ರ, ದ ಸಾಹೇಬ, ತಬರನ ಕಥೆ, ಕೊಡೆಗಳು, ಅಗ್ನಿಮತ್ತು ಮಳೆ ಯ ಯವಕ್ರೀತ, ಸಿಂಹಾಸನ ಖಾಲಿ ಇದೆ. ಅಭಿನಯ ಗಂಗೋತ್ರಿಯ ನಾಟಕಗಳಾದ 'ಇದಕೆ ಸಂಶಯವಿಲ್ಲ, ಸಂಗೊಳ್ಳಿ ರಾಯ ಸರದಾರ ದ ರಾಯಣ್ಣ, ಜಾತ್ರೆ, ರತ್ತೋ ರತ್ತೋ ರಾಯನ ಮಗಳೇ, ಕೊಡೆಗಳು', ಮುಂತಾದವುಗಳಲ್ಲಿ ಮುಖ್ಯ ಭೂಮಿಕೆಯಲ್ಲಿ ನಟಿಸಿರುವರು. ಸಾಕ್ಷರತಾ ಆಂದೋಲನದ ಕಾರ್ಯದರ್ಶಿಯಾಗಿ ಜಿಲ್ಲೆಯಲ್ಲಿ ಸಾಕ್ಷರತಾ ಬೀದಿ ನಾಟಕಗಳು, ಜಾಥಾಗಳಲ್ಲಿ ಭಾಗವಹಿಸಿರುವರು. ಭಾರತ ಜ್ಞಾನ ವಿಜ್ಞಾನ ಸಮಿತಿಯಿಂದಲೂ ಹಲವಾರು ರಂಗ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವರು.

## ಡಾ. ಬಸವರಾಜ ಸಬರದ



ಸಾಹಿತಿ, ನಾಟಕಕಾರ, ಡಾ. ಬಸವರಾಜ ಸಬರದ ಅವರು 'ಅಭಿನಯ ಗಂಗೋತ್ರಿ' ಹವ್ಯಾಸಿ ರಂಗ ತಂಡವನ್ನು ಪ್ರಾರಂಭಿಸಿದರು, ನಾಟಕಗಳಲ್ಲಿ ಭಾಗವಹಿಸುವದರೊಂದಿಗೆ, ನಾಟಕಗಳಿಗೆ ರಂಗಗೀತೆಗಳನ್ನು ರಚಿಸಿರುವರು. ಅಲ್ಲದೇ ಅಸಂಗತ ನಾಟಕಗಳಾದ, 'ಪ್ರತಿರೂಪ', ಸ್ವಾಮಿ, ನಾಟಕಗಳಲ್ಲಿ ಜೀವನದ ಗೊಂದಲ, ಸಾಂಕೇತಿಕತೆ, ಅಸಂಗತತೆಯಿಂದ ಕೂಡಿದ್ದು ಯಶಸ್ವಿ ಪ್ರಯೋಗ ಕಂಡಿವೆ. ನಂತರ ಬಂಡಾಯ ಚಳುವಳಿಯೊಂದಿಗೆ ಗುರುತಿಸಿಕೊಂಡ ಇವರು, 'ರೆಕ್ಕೆ ಮೂಡಿದಾಗ', ಬೆಳ್ಳಿ, ಬೆಳಕಿನೆಡೆಗೆ, ಹುಲಿಗೆಮ್ಮ, ಮತ್ತು ನರಬಲಿ (ಉಡುಪಿ ರಂಗಭೂಮಿಯಿಂದ ಬಹುಮಾನಿತ) ನಾಟಕಗಳು

ಜಾನಪದ ಸೊಗಡಿನಿಂದ ಕೂಡಿದ್ದು, ಶೋಷಣೆ, ಅನಕ್ಷರತೆ, ಮೂಢನಂಬಿಕೆಗಳ ವಿರುದ್ಧ ಧ್ವನಿ ಎತ್ತಿವೆ. 'ಬೆಳ್ಳಕ್ಕಿ ಸಾಲು' ಗೀತ ನಾಟಕವಾಗಿದೆ, ಇವರು ಬರೆದ ಬೀದಿ ನಾಟಕಗಳಾದ, ಮೂರು ಬೀದಿ ನಾಟಕಗಳು, ನಾಲ್ಕು ಬೀದಿ ನಾಟಕಗಳು, ಪ್ರಸಿದ್ಧವಾಗಿವೆ. ಇವುಗಳಲ್ಲಿ ಹನುಮಾಯಣ, ರಂಪಾಯಣ, ರೇಣುಕಾ ಮೇಡಮ್‌ಗಳಲ್ಲಿ ಶೋಷಿತರ ಬದುಕನ್ನು ಚಿತ್ರಿಸಿರುವರು. ಜೊತೆಗೆ ಹಲವಾರು ಬಾನುಲಿ ನಾಟಕಗಳನ್ನೂ ರಚಿಸಿರುವರು.



## ನಾರಾಯಣ ಕುಲಕರ್ಣಿ


ಉತ್ತಮ ಕಲಾವಿದರಾದ ಶ್ರೀ ನಾರಾಯಣ ಕುಲಕರ್ಣಿ ಸದ್ಯ ಕೆನರಾ ಬ್ಯಾಂಕ ಕಲಬುರ್ಗಿಯಲ್ಲಿ ಸೇವೆ ಸಲ್ಲಿಸುತ್ತಿದ್ದು, ಬೀದರನಲ್ಲಿ ಸೇವೆ ಸಲ್ಲಿಸುವಾಗ ಸಮುದಾಯದ ಒಂದು ಲೋಕ ಕಥೆ, ನಡುಬೇಸಿಗೆಯ ಇರುಳು ಸವಿಗನಸು, ಪ್ರೆಸಿಡೆಂಟರಿಗೆ ಪತ್ರ, ಮುಂತಾದ ನಾಟಕಗಳಲ್ಲಿ ಪ್ರಮುಖ ಭೂಮಿಕೆಯಲ್ಲಿ ನಟಿಸಿದ್ದರು. ಅಭಿನಯ ಗಂಗೋತ್ರಿಯ ಗೋಕರ್ಣದ ಗೌಡಶಾನಿ, ಕುಂಟಾ ಕುಂಟಾ ಕುರವತ್ತಿ, ಖಿರೋಖಿರ ನಾಟಕಗಳಲ್ಲದೆ ಇವರ ನಿರ್ದೇಶನದ ಸಂಗೊಳ್ಳಿ ರಾಯ ಸರದಾರ ಐತಿಹಾಸಿಕ ನಾಟಕ ಹೊಸ ಸಂಚಲನವನ್ನೇ ಮೂಡಿಸಿತು. ಹಲವಾರು ಪ್ರಯೋಗಗಳಾದವು.



## ಪ್ರೊ. ಬಿ.ಎಚ್. ಪಾಟೀಲ

ಬಿದರಿನ ಕರ್ನಾಟಕ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ ಪ್ರೊ. ಬಿ.ಎಚ್. ಪಾಟೀಲರು, (ಜನನ–೧೯೪೨) ಸಮುದಾಯ, ಅಭಿನಯ ಗಂಗೋತ್ರಿ ನಾಟಕ ತಂಡಗಳ ಹಲವಾರು ನಾಟಕಗಳಲ್ಲಿ ಭಾಗವಹಿಸಿರುವರು. ಕರ್ಣಾರ್ಜುನರ ಕಾಳಗ,

ಒಂದು ಲೋಕ ಕಥೆ ಯಲ್ಲಿ ಕುರುಬನಾಗಿ, ನಡು ಬೇಸಿಗೆಯ ಇರುಳು ಸವಿಗನಸುನಲ್ಲಿ ನಾಟಕದ ಮಾಸ್ತರರಾಗಿ, ಪ್ರೆಸಿಡೆಂಟರಿಗೆ ಪತ್ರ, ತಬರನ ಕಥೆ, ಅಗ್ನಿಮತ್ತು ಮಳೆ, ಸಿಂಹಾಸನ ಖಾಲಿ ಇದೆ. ಅಭಿನಯ ಗಂಗೋತ್ರಿ ಯ ನಾಟಕಗಳಾದ ಬೆಳಕಿನೆಡೆಗೆ, 'ಇದಕೆ ಸಂಶಯವಿಲ್ಲ, ಸಂಗೊಳ್ಳಿ ರಾಯ ಸರದಾರ, ಜಾತ್ರೆ' ಮುಂತಾದವುಗಳಲ್ಲಿ ಉತ್ತಮವಾಗಿ ಅಭಿನಯಿಸಿರುವರು.



## ಎಂ.ಎಸ್. ಮನೋಹರ

ಸಮುದಾಯದ ಸಕ್ರಿಯ ಕಲಾವಿದ ಎಮ್.ಎಸ್. ಮನೋಹರ (ಜನನ-೧೯೭೦), ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದು, ೩೦ ವರ್ಷಗಳಿಂದ ನಾಟಕಗಳನ್ನು ಮಾಡುತ್ತಲಿರುವರು. ಸಮುದಾಯ, ಅಭಿನಯ ಗಂಗೋತ್ರಿ ತಂಡಗಳ ನಾಟಕಗಳಾದ, ಬೆಳಕಿನೆಡೆಗೆ, ಬಿಡಿಓ, ಅಲಿಬಾಬಾ ಮತ್ತು ೪೦ ಕಳ್ಳರು, ತಬರನ ಕಥೆ, ಸಿಂಹಾಸನ ಖಾಲಿ ಇದೆ, ಅಗ್ನಿ ಮತ್ತು ಮಳೆ, ಜೋಗತಿ, ಅಲ್ಲದೇ, ಬಾವಿ, ಸಿದ್ದಯ್ಯನ ಕಥೆ, ಮಹಾಮಾರಿ, ಹೆಣ್ಣು ಏಕೆ ಓದಬೇಕು, ಕೂಲಿಯಿಂದ ಶಾಲೆಗೆ, ಜನಾಧಿಕಾರ, ರಾಮಣ್ಣಿ, ಮಾದರಿ ಶಾಲೆ, ಮತ್ತು ಸಾಕ್ಷರತಾ ಆಂದೋಲನದ ಜಿಲ್ಲಾ ಸಂಯೋಜಕರಾಗಿ ನೂರಾರು ಬೀದಿ ನಾಟಕ, ಜಾಥಾಗಳಲ್ಲಿ ಭಾಗವಹಿಸಿರುವರು. ಅರಿವು ಟೆಲಿಫಿಲ್ಮನಲ್ಲಿ ಸಹ ನಿರ್ದೇಶಕರಾಗಿ ಕಾರ್ಯ ನಿರ್ವಹಿಸಿದ್ದಾರೆ. ಬಿಸಿಲು ಹನಿಗಳು ಧಾರಾವಾಹಿಯಲ್ಲಿ, ಮತ್ತು ಡಾ. ಬಿ.ಆರ್. ಅಂಬೇಡಕರ ಚಲನಚಿತ್ರದಲ್ಲೂ ನಟಿಸಿರುವರು.

ಡಿ. ವಾಯ್.ಎಫ್.ವಾಯ್ ಸಂಘಟನೆಯಿಂದ ಹಲವಾರು ನಾಟಕಗಳನ್ನು ಮಾಡಿಸಿರುವರು. ಉತ್ಪಲದತ್ತರ ಮೂಲ ಬೆಂಗಾಳಿ ನಾಟಕ 'ಸೂರ್ಯ ಶಿಕಾರಿ' (ಅನುವಾದ: ಎಮ್.ಪಿ. ಪ್ರಕಾಶ.) ಡಾ. ಅನೀಲಕುಮಾರ ಮುಗಳಿ ನಿರ್ದೇಶನದಲ್ಲಿ ಮೂಡಿಬಂತು. ಬೀದರ, ಭಾಲ್ಕಿ ಮತ್ತು ಕಲಬುರಗಿಯಲ್ಲಿ ಪ್ರದರ್ಶನಗೊಂಡು ಜಯಭೇರಿ ಬಾರಿಸಿತು. ಭಾರತ ಜ್ಞಾನವಿಜ್ಞಾನ ಸಮಿತಿಯಿಂದ ಮೂಢನಂಬಿಕೆ, ಪವಾಡ ರಹಸ್ಯ ಬಯಲು ಕಾರ್ಯಕ್ರಮ, ಅಲ್ಲದೇ ಭಾನಾಮತಿ ಬಗೆಗಿನ ಮೂಢನಂಬಿಕೆ ಹೋಗಲಾಡಿಸಲು, ಜನ ಜಾಗೃತಿ ಮೂಡಿಸಿರುವರು. ಜೊತೆಗೆ 'ಮಾಟಾ ಮಂತ್ರ' ನಾಟಕ ಬರೆದು ರಂಗ ಪ್ರಯೋಗ ಮಾಡಿಸಿರುವರು. ಬೀದರ ತಾಲೂಕಾ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಲಿರುವರು.



## ಕೋದಂಡರಾಮ

ಕವಿ, ಕಲಾವಿದ ಕೋದಂಡರಾಮ ಅವರು ಸದ್ಯ ಕಲಬುರಗಿಯ ಲೋಕೋಪಯೋಗಿ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ೧೯೮೨ರಿಂದ ಬೀದರಿನ ರಂಗಭೂಮಿಗೆ ತೊಡಗಿಸಿಕೊಂಡವರು. ಸಮುದಾಯ ಸಂಘಟನೆಯ ನಾಟಕಗಳಾದ, ಒಂದು ಲೋಕ ಕಥೆ, ನಡುಬೇಸಿಗೆಯ ಇರುಳ ಸವಿಗನಸು, ಪ್ರೆಸಿಡೆಂಟರಿಗೆ ಪತ್ರ, ತಬರನ ಕಥೆ ನಾಟಕದಲ್ಲಿ ತಬರನಾಗಿ ಉತ್ಕೃಷ್ಟ ಅಭಿನಯ ನೀಡಿರುವರು, ಕೋಟೆ, ಸೂರ್ಯ ಶಿಕಾರಿ, ಅಗ್ನಿಮತ್ತು ಮಳೆ, ಜಲ, ಸಿಂಹಾಸನ ಖಾಲಿ ಇದೆ, ಮತ್ತು ಹಲವಾರು ಬೀದಿ ನಾಟಕಗಳಲ್ಲೂ ಭಾಗವಹಿಸಿ, ಪಾತ್ರಗಳಿಗೆ ಜೀವ ತುಂಬಿರುವರು. ಪತ್ನಿಯಾದ ಶ್ರೀಮತಿ ನೀಲಾ ಕೆ. ಜೊತೆಗೆ ಕೋಟೆ, ತಬರನ ಕಥೆ ನಾಟಕಗಳಲ್ಲಿಯೂ ಪತಿ, ಪತ್ನಿಯಾಗಿ ನಟಿಸಿರುವರು.




## ಡಾ. ಅನೀಲಕುಮಾರ ಮುಗಳಿ

ಬೀದರಿನ ಪಶು ವೈದ್ಯಕೀಯ ಕಾಲೇಜಿನಲ್ಲಿ ಪ್ರೊಫೆಸರ ಆಗಿ ಸೇವೆ ಸಲ್ಲಿಸಿ ಸದ್ಯ ಧಾರವಾಡದಲ್ಲಿರುವ ಡಾ. ಅನೀಲಕುಮಾರ ಮುಗಳಿಯವರು ಉತ್ತಮ ಕಲಾವಿದರು. ಬೀದರ ಸಮುದಾಯದ ನಾಟಕಗಳಾದ, ಅಗ್ನಿ ಮತ್ತು ಮಳೆ, ನಾಟಕ ಬೀದರ ಹವ್ಯಾಸಿ ತಂಡಕಾಗಿ, ಯಮನ ದರ್ಬಾರು, ಕತ್ತಲಲ್ಲಿ ಕಂಡ ಬೆಳಕು, ಡಿ.ವಾಯ್.ಎಫ್.ವಾಯ್ ಸಂಘಟನೆಯಿಂದ ಉತ್ಪಲದತ್ತರ ಮೂಲ ಬೆಂಗಾಳಿ ನಾಟಕ 'ಸೂರ್ಯ ಶಿಕಾರಿ' (ಅನುವಾದ. ಎಮ್.ಪಿ.ಪ್ರಕಾಶ) ಡಾ.ಅನೀಲಕುಮಾರ ಮುಗಳಿ ನಿರ್ದೇಶನದಲ್ಲಿ ಮೂಡಿಬಂತು. ಬೀದರ, ಭಾಲ್ಕಿ ಮತ್ತು ಕಲಬುರಗಿಯಲ್ಲಿ ಪ್ರದರ್ಶನಗೊಂಡು ಜಯಭೇರಿ ಬಾರಿಸಿತು.

ಜನಪರ ಪತ್ರಿಕೆಯ ಸಂಪಾದಕ, ಪತ್ರಕರ್ತ ಗಂಧರ್ವಸೇನಾ ಅವರ ನೇತೃತ್ವದಲ್ಲಿ ಡಾ. ಅನೀಲಕುಮಾರ ಮುಗಳಿ ರಚನೆ ಮತ್ತು ನಿರ್ದೇಶನದಲ್ಲಿ 'ಆಲದ ಮರ' ನಾಟಕ

ಪ್ರಸ್ತುತ ಪಡಿಸಲಾಯಿತು. ಶ್ರೀಮತಿ ಭಾರತಿ ವಸ್ತ್ರದ, ಡಾ.ಮುಗಳಿ, ಸಂಗ್ರಾಮ ಯಂಗ್ಳೇ, ಮುಂತಾದವರು ಜನಮನ ರಂಜಿಸಿದರು. ಇದೇ ನಾಟಕ ಆಕಾಶವಾಣಿ ಕಲಬುರ್ಗಿಯಲ್ಲಿ ಚಾಂದಕವಠೆ ನಿರ್ದೇಶನದಲ್ಲಿ ಮೂಡಿಬಂತು. ಅಭಿನಯ ಗಂಗೋತ್ರಿಯಿಂದ ನಟಿಸಿದ ಬೇಂದ್ರೆಯವರ ಜಾತ್ರೆ ನಾಟಕದಲ್ಲಿ ಹುಚ್ಚಾಪುರದ ದೊರೆಯಾಗಿ ಪ್ರಭುದ್ಧ ಅಭಿನಯ ನೀಡಿದರು.




## ಸುನೀಲ ಕಡ್ಡೆ

ಕಲಾವಿದ ಸುನೀಲ ದತ್ತಾತ್ರಿ ಕಡ್ಡೆ (ಜನನ-೧೯೭೫) ಇವರೊಬ್ಬ ಉತ್ತಮ ನಟರು, ಗಾಯಕರು, ನಿರ್ದೇಶಕರು ಆಗಿದ್ದು ರಾಜ್ಯ ಮಟ್ಟದ ಕಲಾವಿದರಾಗಿದ್ದಾರೆ. ೧೯೯೩ರಲ್ಲಿ ಸಮುದಾಯ ತಂಡದೊಂದಿಗೆ ಹವ್ಯಾಸಿ ಕಲಾವಿದರಾಗಿ ಗುರುತಿಸಿಕೊಂಡಿರುವರು. ಬಿ. ಜಯಶ್ರೀಯವರು ಮಾಡಿಸಿದ ನಾಗಮಂಡಲ ನಾಟಕದ ಮರು ಪ್ರದರ್ಶನದಲ್ಲಿ, ಬಸವರಾಜ ಕೊಡಗೆಯವರು ಮಾಡಿಸಿದ ಜಲ ನಾಟಕದ ಗೌತಮಬುದ್ಧ ಪಾತ್ರದಲ್ಲಿ, ಡಾ. ಅನೀಲಕುಮಾರ ಮುಗಳಿಯವರ ಸೂರ್ಯ ಶಿಕಾರಿಯಲ್ಲಿ ಮಹೇಶ ಪಾಟೀಲರ ಹಿಂದಿ ನಾಟಕ ಸಪ್ನೆ, ಜ್ಞಾನಕಾ ಮಂದಿರ ಸಬಸೆ ಊಂಚಾ, ದ ಬ್ಲೈಂಡ್ ಫೇಥ್, ಕಿರುಚಿತ್ರದಲ್ಲಿ ಭಾಗವಹಿಸಿರುವರು.

ಗುಡುಸಲಿನ ಗುಡದಾಳಿ, ಗುರ್ತಿನವರು, ಖಟ್ಲೆ ಹೊತ್ತ ದೇವರು, ಅಲ್ಲದೇ ಕರ್ನಾಟಕ ವೈಭವ ಧ್ವನಿ ಮತ್ತು ಬೆಳಕು ನಾಟಕ, ವಾರ್ತಾ ಇಲಾಖೆಯ ಮನುಷ್ಯ ಜಾತಿ ತಾನೊಂದೆ ಒಲಂ ಧ್ವನಿ ಬೆಳಕು ನಾಟಕ, ಗ್ರಾಮೀಣ ಅಭಿವೃದ್ಧಿಗೆ ಸಂಬಂಧಿಸಿದಂತೆ ೯ ಕಿರುತೆರೆ ಚಿತ್ರ ನಿರ್ದೇಶನ ಮಾಡಿರುವರು, ಗಾಯಕರಾಗಿ ೩ ಆಡಿಯೋ ಕೆಸೆಟ್ಟು, ೧೨ ಧ್ವನಿ ಸುರುಳಿಗಳನ್ನೂ ಬಿಡುಗಡೆ ಮಾಡಿರುವರು. ಜಾಗ್ರತಿ ಗೀತೆಗಳು, ಭಕ್ತಿ ಗೀತೆಗಳು, ಕ್ರಾಂತಿ ಗೀತೆಗಳನ್ನು ಹಾಡಿರುವರು.

ಕಲಾಕುಸುಮ ಜನಪದ ಮತ್ತು ನಾಟ್ಯ ಸಂಘ ಸ್ಥಾಪಿಸಿ ಬೀದಿ ನಾಟಕಗಳನ್ನೂ ಪ್ರದರ್ಶನ ಮಾಡುತ್ತಲಿರುವರು. ಮತ್ತು ಬೀದರನಲ್ಲಿ ಚಿತ್ರಿತವಾದ ಬೀದರಿನ ಕಲಾವಿದ ಶ್ರೀವಿಷ್ಣುಕಾಂತ ಬಿ.ಜೆ. ಅವರ ನಿರ್ಮಾಣ ನಿರ್ದೇಶನದ ಡಾ.ಬಿ.ಆರ್.ಅಂಬೇಡಕರ, ಬೀದರಿನ ಶ್ರೀ ಶೈಲೇಂದ್ರ ಬೆಲ್ದಾಳೆ ನಿರ್ಮಾಣದ ಪೋರ, ಬೀದರಿನ ಡಾ. ಅಶೋಕ

ನಾಗೂರೆ ನಿರ್ಮಾಣದ ಹದಿಮೂರು ದಿವಸ (ಮರಣದ ನಂತರ) ಚಲನಚಿತ್ರಗಳಲ್ಲಿ ನಟಿಸಿರುವರು.



## ವಿಜಯಕುಮಾರ ಸೋನಾರೆ

ಕಲಾವಿದ, ಗಾಯಕ, ಸಂಘಟಕ, ಹೋರಾಟಗಾರ, ೧೯೯೦ರಿಂದ ಭಾರತ ವಿದ್ಯಾರ್ಥಿ ಫೆಡರೇಶನ್‌ನ ಜಿಲ್ಲಾ ಸಂಚಾಲಕರಾಗಿ ಗುರುತಿಸಿಕೊಂಡಿರುವ ಬಹುಮುಖ ಪ್ರತಿಭೆಯ ವಿಜಯಕುಮಾರ ಸಿದ್ರಾಮಪ್ಪಾ ಸೋನಾರೆ, ಭಾಲ್ಕಿ ತಾಲೂಕಿನ ಮಾಸಿಮಾಡೆ ಗ್ರಾಮದವರು. ಬೀದಿ ನಾಟಕಗಳನ್ನು ಮಾಡಿಸುವದರಲ್ಲಿ ಎತ್ತಿದ ಕೈ. ಉತ್ತಮ ಹಾಸ್ಯ ಚಟಾಕಿಗಳಿಂದ ಎಲ್ಲರನ್ನು ನಗಿಸುತ್ತ, ಢಪಲಿ, ಕಂಜರ ಬಾರಿಸುತ್ತ ಹಾಡು ಹಾಡುತ್ತಾ, ಹೊಸ ಹೊಸ ವಸ್ತು ವಿಷಯಗಳನ್ನು ಬೀದಿ ನಾಟಕಗಳ ಮೂಲಕ ಜನರಿಗೆ ಮುಟ್ಟಿಸವಲ್ಲಿ ಸಫಲರಾಗಿರುವರು. ಯುವಜನ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ವಾರ್ತಾ ಇಲಾಖೆ, ಎಲ್ಲಾ ಸರಕಾರದ ಯೋಜನೆಗಳನ್ನು ಜನ ಸಾಮಾನ್ಯರಿಗೆ ಮುಟ್ಟಿಸುವಲ್ಲಿ ಅಪಾರ ಶ್ರಮವಹಿಸುತ್ತಲಿರುವರು. ಮತ್ತು ಜನಮನ ರಂಜಿಸುವಲ್ಲಿ ಸಾರ್ಥಕತೆ ಪಡೆದಿರುವರು.


ಸಮುದಾಯ ತಂಡದ ಎಲ್ಲಾ ನಾಟಕಗಳಲ್ಲಿ ಕಲಾವಿದರಾಗಿ ಹಿನ್ನೆಲೆ ಗಾಯಕರಾಗಿ ಶ್ರೀ ಶಂಭುಲಿಂಗ ವಾಲ್ದೊಡ್ಡಿಯವರ ಜೊತೆಗೆ ಭಾಗವಹಿಸಿರುವರು. ಪ್ರಮುಖವಾಗಿ ಸೂರ್ಯಶಿಕಾರಿ, ಕತ್ತೆ ಮತ್ತು ಧರ್ಮ, ಗುಡಸಿಲಿನ ಗುಡದಾಳಿ, ನಾಗಮಂಡಲ, ಪುಗಸಟ್ಟೆ ಪ್ರಸಂಗ, ಆಕಾಶಬುಟ್ಟಿ, ಮೂರನೇ ಕಣ್ಣು, ದಾಖಲಾರ್ಹವಾಗಿವೆ. ಸಾಕ್ಷರತಾ ಆಂದೋಲನ ಎಲ್ಲಾ ಬೀದಿ ನಾಟಕಗಳು, ಜಾಥಾಗಳಲ್ಲಿ, ಬಿ.ಜಿ.ವಿ.ಎಸ್.ನ ಪವಾಡ ರಹಸ್ಯ ಬಯಲು ಕಾರ್ಯಕ್ರಮದಲ್ಲಿ, ಸಕ್ರೀಯವಾಗಿ ಪಾಲ್ಗೊಳ್ಳುವರು. ಅರಿವು ಟೆಲೆ ಚಿತ್ರದ ಬ್ಲೈಂಡ ಫೇಥ ಟೆಲೆ ಚಿತ್ರದಲ್ಲೂ ನಟಿಸಿರುವರು.

ಸಮುದಾಯ ತಂಡದ ಅಧ್ಯಕ್ಷರಾಗಿ, ಬೀದರ ಜಿಲ್ಲಾ ಜಾನಪದ ಕಲಾವಿದರ ತಂಡದ ಅಧ್ಯಕ್ಷರಾಗಿ, ರಂಗಭೂಮಿಯ ಬೆಳವಣಿಗೆಯಲ್ಲಿ ಸಕ್ರೀಯವಾಗಿ ಪಾಲ್ಗೊಳ್ಳುವರು.



## ಯೇಸುದಾಸ ಅಲಿಯಂಬರೆ:
### (ನೇಪಥ್ಯ ಕಲಾವಿದ)

ಯೇಸುದಾಸ ಹುಲಿಯಪ್ಪಾ ಅಲಿಯಂಬುರೆ (ಜನನ-೧೯೭೬) ಬಹುಮುಖ ಪ್ರತಿಭೆಯ ನಟ, ಗಾಯಕ, ಬೆಳಕುವಿನ್ಯಾಸ, ವಾಹನ ಚಾಲಕ, ಮೈಕಸೆಟ್, ವಿದ್ಯುತ್ ರಿಪೇರಿ ಕೆಲಸ, ಪರದೆ ಕಟ್ಟುವದರಿಂದ ಹಿಡಿದು, ನಾಟಕದ ಪ್ರಚಾರ, ನೇಪಥ್ಯದ ಎಲ್ಲಾ ಕೆಲಸಗಳಲ್ಲಿ ಪ್ರವೀಣರಾದ ಯೇಸುದಾಸ ಅಲಿಯಂಬರೆ ಬೀದರ ರಂಗಭೂಮಿಯ ಬೆಳವಣಿಗೆಯಲ್ಲಿ ಇವರ ಶ್ರಮ ಅಪಾರವಾಗಿದೆ. ಬೀದರಿನಲ್ಲಿ ಏರ್ಪಡಿಸಿದ ಎಲ್ಲಾ ನಾಟಕಗಳ ಧ್ವನಿ, ಬೆಳಕು, ರಂಗ ಸಜ್ಜಿಕೆಯ ಉಸ್ತುವಾರಿಯಂದಿಗೆ ಕಲಾವಿದರಾಗಿ, ಹಿನ್ನೆಲೆ ಗಾಯಕರಾಗಿ, ವಾದ್ಯಗಾರರಾಗಿ ತಮ್ಮ ಬಹುಮುಖ ಪ್ರತಿಭೆಯಿಂದ ಸಮುದಾಯ ತಂಡದ ಎಲ್ಲಾ ನಾಟಕಗಳಲ್ಲಿ ಭಾಗವಹಿಸಿರುವರು. ಸಾಕ್ಷರತಾ ಆಂದೋಲನ ಎಲ್ಲಾ ಬೀದಿ ನಾಟಕಗಳು, ಜಾಥಾಗಳಲ್ಲಿ, ಬಿ.ಜಿ.ವಿ.ಎಸ್. ನ ಪವಾಡ ರಹಸ್ಯ ಬಯಲು ಕಾರ್ಯಕ್ರಮದ ರೂವಾರಿಯಾಗಿರುವರು. ಅರಿವು ಟೆಲೆ ಚಿತ್ರ,ದ ಬ್ಲೈಂಡ ಫೇಥ ಟೆಲೆ ಚಿತ್ರದಲ್ಲೂ ನಟಿಸಿರುವರು.



## ದೇವದಾಸ ಚಿಮಕೋಡ

ದೇವದಾಸ ಹಣಮಂತ ಚಿಮಕೋಡ (ಜನನ-೧೯೭೦) ಇವರರೊಬ್ಬ ಉತ್ತಮ ನಟರು, ಗಾಯಕರು, ಜೊತೆಗೆ ಹಲಗೆ, ತಬಲಾ, ಮೃದಂಗ, ದಮಡಿ, ಢವಲಿ ಮುಂತಾದ ವಾದ್ಯಗಳನ್ನು ನುಡಿಸುವದರಲ್ಲಿ ಪ್ರವೀಣರಾಗಿರುವರು. ಸಮುದಾಯ ತಂಡದ ಎಲ್ಲಾ ನಾಟಕಗಳಲ್ಲಿ ಭಾಗವಹಿಸಿರುವರು. ಸಾಕ್ಷರತಾ ಆಂದೋಲನ ಎಲ್ಲಾ ಬೀದಿ ನಾಟಕಗಳು, ಜಾಥಾಗಳಲ್ಲಿ, ಬಿ.ಜಿ.ವಿ.ಎಸ್.ನ ಪವಾಡ ರಹಸ್ಯ ಬಯಲು ಕಾರ್ಯಕ್ರಮದ ರೂವಾರಿಯಾಗಿರುವರು. ದೇವದಾಸ ಚಿಮಕೊಡ ಅಧ್ಯಕ್ಷತೆಯ ಸಾಂಸ್ಕೃತಿಕ ಹವ್ಯಾಸಿ ಯುವಕ ಸಂಘ ಮತ್ತು ನಂದೀಶ್ವರ ನಾಟ್ಯ ಸಂಘದಿಂದಲೂ, ನಾಟಕ, ಹಾಡುಗಳು, ಬೀದಿ ನಾಟಕ, ರಂಗ ಗೀತೆಗಳಿಂದ ಜಿಲ್ಲೆಯಾದ್ಯಂತ ಮನೆ ಮಾತಾಗಿರುವರು. ಯುವಜನ

ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ವಾರ್ತಾ ಇಲಾಖೆ, ಎಲ್ಲಾ ಸರಕಾರದ ಯೋಜನೆಗಳನ್ನು ಜನ ಸಾಮಾನ್ಯರಿಗೆ ಮುಟ್ಟಿಸುವಲ್ಲಿ ತಂಡ ಅಪಾರ ಶ್ರಮವಹಿಸುತ್ತಲಿದೆ. ರಂಗಭೂಮಿ ಸದಾ ಹಲವಾರು ಬದಲಾವಣೆಗಳೊಂದಿಗೆ ಜನಮನ ರಂಜಿಸುವಲ್ಲಿ ಸಾರ್ಥಕತೆ ಪಡೆದಿದೆ ಎನ್ನಬಹುದು.



## ಕಂಟೆಪ್ಪಾ ಪೂಜಾರಿ
## (ನೇಪಥ್ಯ ಕಲಾವಿದರು)


ಇವರು ಉತ್ತಮ ಗಾಯಕರು, ನಟರು, ಸದ್ಯ ಬೀದರಿನ ಪಶುವೈದ್ಯಕೀಯ ಮಹಾವಿದ್ಯಾಲಯದಲ್ಲಿ ಎಫ್.ಡಿ.ಸಿ.ಯಾಗಿ ಸೇವೆ ಸಲ್ಲಿಸುತ್ತಿದ್ದು ಸಮುದಾಯ ತಂಡದ ಎಲ್ಲಾ ನಾಟಕಗಳಲ್ಲಿ ಹಿನ್ನೆಲೆ ಗಾಯಕರಾಗಿ ಭಾಗವಹಿಸಿರುವರು. ಸಾಕ್ಷರತಾ ಆಂದೋಲನ ಎಲ್ಲಾ ಬೀದಿ ನಾಟಕಗಳು, ಜಾಥಾಗಳಲ್ಲಿ, ಗಾಯಕರಾಗಿ ಭಾಗವಹಿಸಿರುವರು. ಇತ್ತಿಚೆಗೆ ಅಮೇರಿಕಾದ ರ್‍ಯಾಲೆಯಲ್ಲಿ ನಡೆದ ವಿಶ್ವ ಕನ್ನಡ ನಾವಿಕ ಸಮ್ಮೇಳನದಲ್ಲಿ ಶಂಭುಲಿಂಗ ವಾಲ್ದೊಡ್ಡಿಯವರೊಂದಿಗೆ ಹಾಡುಗಾರರಾಗಿ ಭಾಗವಹಿಸಿರುವರು.



## ದೇವೇಂದ್ರ ಕುಮಾರ ಗಾಯಕವಾಡ


ಕಲಾವಿದ ದೇವೇಂದ್ರ ಕುಮಾರ ಗಾಯಕವಾಡ (ಜನನ-೧೯೬೧) ಬಸವಕಲ್ಯಾಣ ತಾಲೂಕಿನ ನೀಲಕಂಠ ಗ್ರಾಮದವರು. ೧೯೯೦ ರಲ್ಲಿ ಬಿ.ಜಿ.ವಿ.ಎಸ್‌ನ ಬೀದಿ ನಾಟಕಗಳಾದ, ಒಂದು ಪತ್ರ, ಹೆಬ್ಬೆರಳು, ದಾರಿದೀಪ, ಕಲಿಕೆಯ ಹಾಡು, ಮುಂತಾದವುಗಳಲ್ಲಿ ಭಾಗವಹಿಸಿದರು. ೧೮೦ಕ್ಕೂ ಹೆಚ್ಚಿನ ಹಳ್ಳಿಗಳಲ್ಲಿ ಪ್ರದರ್ಶನ ನೀಡಿದರು. ೧೯೯೩ರಲ್ಲಿ ಬಿ. ಜಯಶ್ರೀಯವರು ನಿರ್ದೇಶಿಸಿದ ನಾಗಮಂಡಲ ನಾಟಕದ ಅಪ್ಪಣ್ಣನಾಗಿ ಮಿಂಚಿದರು. ಸೂರ್ಯ ಶಿಕಾರಿ, ಜ್ಞಾನ ಕಾ ಮಂದಿರ ಸಬಸೆ ಊಂಚಾ,

ಕತ್ತೆ ಮತ್ತು ಧರ್ಮ, ಪಂಚಮ, ಕೊಡೆಗಳು, ಅಪ್ಪಾ, ವೀರ ಸಿಪಾಹಿ, ಅಗ್ನಿ ಮತ್ತು ಮಳೆ, ಕನಸಿನವರು, ಹೀಗೆ ಹಲವಾರು ನಾಟಕಗಳಲ್ಲಿ ಪಾತ್ರವಹಿಸಿ ಎಲ್ಲರ ಮೆಚ್ಚುಗೆ ಪಡೆದವರು. ಸಮುದಾಯ ತಂಡದ ಎಲ್ಲಾ ನಾಟಕಗಳಲ್ಲಿ, ಸಾಕ್ಷರತಾ ಆಂದೋಲನ ಎಲ್ಲಾ ಬೀದಿ ನಾಟಕಗಳು, ಜಾಥಾಗಳಲ್ಲಿ, ಬಿ.ಜಿ.ವಿ.ಎಸ್.ನ ಪವಾಡ ರಹಸ್ಯ ಬಯಲು ಕಾರ್ಯಕ್ರಮದಲ್ಲಿ, ಅರಿವು ಟೆಲಿಚಿತ್ರದಲ್ಲಿ ನಟಿಸಿರುವರು.



## ನಾರಾಯಣ ರಾಂಪುರೆ

ಸಾಹಿತಿ, ಕಲಾವಿದ ನಾರಾಯಣ ಹೊನ್ನಪ್ಪಾ ರಾಂಪುರೆ (ಜನನ-೧೯೬೬) ಬಸವಕಲ್ಯಾಣದ ರಾಂಪೂರದವರು. ಇವರು ಸದ್ಯ ಹುಮನಾಬಾದನಲ್ಲಿ ಸಮಾಜ ಸೇವೆ ಮಾಡುತ್ತಲಿರುವರು. ಇವರು ಬೀದರಿನಲ್ಲಿ ಕಾಲೇಜು ಓದುವಾಗ ಸಮುದಾಯ ಸಂಘಟನೆಯಲ್ಲಿ ಪಾಲ್ಗೊಂಡು ರೈತರಿಗಾಗಿ ಜಾಥಾ ಹಮ್ಮಿಕೊಂಡಾಗ ಬಸವರಾಜ ಕೊಡಗೆ ನಿರ್ದೇಶನದ 'ತಮಾಷಾ' ಬೀದಿ ನಾಟಕದಲ್ಲಿ ಜಾದೂಗಾರನ ಪಾತ್ರದಿಂದ ಪ್ರಖ್ಯಾತಿ ಪಡೆದವರು. ಮುನ್ನೂರಕ್ಕೂ ಹೆಚ್ಚು ಪ್ರದರ್ಶನಗಳಲ್ಲಿ ಭಾಗಿಯಾದವರು. ಸಿ ಬಸವಲಿಂಗಯ್ಯನವರ ಒಂದು ಲೋಕ ಕಥೆ, ಪ್ರೆಸಿಡೆಂಟರಿಗೆ ಪತ್ರ, ಅಭಿನಯ ಗಂಗೋತ್ರಿಯ ಸಂಗೊಳ್ಳಿ ರಾಯಣ್ಣ, ಹೀಗೆ ಹಲವಾರು ನಾಟಕಗಳಲ್ಲಿ ಸಾಕ್ಷರತಾ ಆಂದೋಲನ ಎಲ್ಲಾ ಬೀದಿ ನಾಟಕಗಳು, ಜಾಥಾಗಳಲ್ಲಿ, ಭಾಗವಹಿಸಿರುವರು. ಇವರು ಹಲವಾರು ಚಲನಚಿತ್ರಗಳಲ್ಲೂ ನಟಿಸಿರುವರು ಪ್ರಮುಖವಾಗಿ, ಮತ್ತೆ ಸತ್ಯಾಗ್ರಹ, ಲೈಫ್, ಸಂಶಯ ಮುಂತಾದವುಗಳನ್ನು ದಾಖಲಿಸಬಹುದು.



## ಟಿ.ಎಂ. ಮಚ್ಚೆ


ಕಲಾವಿದ, ಸಾಹಿತಿ, ಟಿ.ಎಂ. ಮಚ್ಚೆ ( ತುಳಜಾರಾಮ ಮೊಗಲಪ್ಪಾ ಮಚ್ಚೆ, ಜನನ-೧೯೭೦)ಯುವರು ಸದ್ಯ ರೇಡಿಯೋಲಾಜಿ ಟೆಕ್ನೋಲಾಜಿಸ್ಟ್ ಆಗಿ ಸೇವೆ

ಸಲ್ಲಿಸುತ್ತಿರುವರು. ಹಲವಾರು ಸಾಂಸ್ಕೃತಿಕ ಸಂಘ  ಸಂಸ್ಥೆಗಳೊಂದಿಗೆ ಸಕ್ರೀಯವಾಗಿ ಸೇವೆ ಸಲ್ಲಿಸುತ್ತಿರುವರು. ೧೯೮೫ರಿಂದ ನಾಟಕಗಳಲ್ಲಿ ಭಾಗವಹಿಸುತ್ತಲಿರುವರು ಪ್ರಮುಖವಾಗಿ 'ಹೇರೊಡ ರಾಜಾ' ೧೯೯೦ರಲ್ಲಿ ಬರಗೂರು ರಾಮಚಂದ್ರಪ್ಪನವರ 'ಕೋಟೆ' ನಾಟಕವನ್ನು, ಬೀದರ, ಗುಲಬರ್ಗಾ, ಹೊಸಪೇಟಗಳಲ್ಲಿ ಪ್ರದರ್ಶಿಸಿರುವರು. ಯುವಜನ ಮೇಳದಲ್ಲಿ ಕೇರಳ, ಮಧ್ಯಪ್ರದೇಶ, ತಮಿಳುನಾಡುಗಳಲ್ಲಿ  ನಾಟಕಗಳನ್ನು ಮಾಡಿರುವರು.



## ನಾಗೇಂದ್ರ ಸಿಂಗೋಡೆ


ಕಲಾವಿದ, ನಾಗೇಂದ್ರ ಸಿಂಗೋಡೆ ಉಪ ಅರಣ್ಯ ವಲಯ ಅಧಿಕಾರಿಯಾಗಿ ಬೀದರನಲ್ಲಿ ಸೇವೆಸಲ್ಲಿಸುತ್ತಿದ್ದು (ಜನನ-೧೯೬೭) ಸಮುದಾಯುದ ಕಲಾವಿದರಾಗಿ, ಸಮುದಾಯ, ಅಭಿನಯ ಗಂಗೋತ್ರಿ ನಾಟಕತಂಡಗಳ ಹಲವಾರು ನಾಟಕಗಳಲ್ಲಿ ಭಾಗವಹಿಸಿರುವರು. ಒಂದು ಲೋಕ ಕಥೆ, ನಡು ಬೇಸಿಗೆಯ ಇರುಳು ಸವಿಗನಸು, ಪ್ರೆಸಿಡೆಂಟರಿಗೆ ಪತ್ರ, ತಬರನ ಕಥೆ, ಅಗ್ನಿಮತ್ತು ಮಳೆ, ಸಿಂಹಾಸನ ಖಾಲಿ ಇದೆ. ಅಭಿನಯ ಗಂಗೋತ್ರಿಯ ನಾಟಕಗಳಾದ, ಇದಕೆ ಸಂಶಯವಿಲ್ಲ, ಸಂಗೊಳ್ಳಿ ರಾಯ ಸರದಾರ, ಜಾತ್ರೆ ನಾಟಕಗಳಲ್ಲಿ ಅಭಿನಯಿಸಿರುವರು. ಜೋಗತಿ ನಾಟಕವನ್ನು ನಿರ್ದೇಶನ ಮಾಡಿರುವರು. ಸಮುದಾಯದ ಬಿ.ಜಿ.ವಿ.ಎಸ್‌ನ ಹಲವಾರು ಬೀದಿ ನಾಟಕಗಳಲ್ಲಿ ಭಾಗವಹಿಸಿರುವರು.



## ದಿಲೀಪ ನಿಲಂಗೆ

ಕಲಾವಿದ ದಿಲೀಪ ನಿಲಂಗೆ ಇವರು ವೃತ್ತಿಯಿಂದ ಫೋಟೋಗ್ರಾಫರಾಗಿ,ಸೇವೆ ಸಲ್ಲಿಸುತ್ತಿರುವರು (ಜನನ-೧೯೬೩) ಸಮುದಾಯ, ಅಭಿನಯ ಗಂಗೋತ್ರಿ


ನಾಟಕತಂಡಗಳ ಹಲವಾರು ನಾಟಕಗಳಲ್ಲಿ ಭಾಗವಹಿಸಿರುವರು. ಸದಾ ಕ್ರಿಯಾಶೀಲರಾಗಿರುವ ಇವರು ಸಿ. ಬಸವಲಿಂಗಯ್ಯನವರ ಒಂದು ಲೋಕ ಕಥೆ, ನಡು ಬೇಸಿಗೆಯ ಇರುಳು ಸವಿಗನಸು, ಕೊಡಗೆ ಯವರ ಪ್ರೆಸಿಡೆಂಟರಿಗೆ ಪತ್ರ, ತಬರನ ಕಥೆ, ಅಗ್ನಿ ಮತ್ತು ಮಳೆ, ಸಿಂಹಾಸನ ಖಾಲಿ ಇದೆ. ನಾಟಕಗಳಲ್ಲಿ ಅಭಿನಯಿಸಿರುವರು. ಅಭಿನಯ ಗಂಗೋತ್ರಿಯ ನಾಟಕಗಳಾದ 'ಗೋಕರ್ಣದ ಗೌಡಶಾನಿ, ಸಂಗೊಳ್ಳಿ ರಾಯ ಸರದಾರ, ಜಾತ್ರೆ, ಮುಂತಾದವುಗಳಲ್ಲಿ ಅಭಿನಯಿಸಿರುವರು.



## ಸಂಗಮೇಶ ನಾಶಿಗಾರ
(ನೇಪಥ್ಯ ಕಲಾವಿದ)

ಕಲಾವಿದ ಸಂಗಮೇಶ ನಾಶಿಗಾರ (ಜನನ-೧೯೭೩) ಇವರು ಸದ್ಯ ಸಮಾಜ ಸೇವೆ ಮಾಡುತ್ತಲಿರುವರು. ಸಮುದಾಯದ ಸಕ್ರಿಯ ಸದಸ್ಯರಾಗಿ ಉತ್ತಮ ನೇಪಥ್ಯ ಕಲಾವಿದರಾಗಿದ್ದು, ಲೈಟಿಂಗ್, ಮೇಕಪ್, ಬ್ಯಾಕ್ ಸ್ಟೇಜ್‌ಗಳಲ್ಲಿ ತಮ್ಮನ್ನು ತೊಡಗಿಸಿಕೊಂಡವರು, ಜೊತೆಗೆ 'ರಾಷ್ಟ್ರೀಯ ಭವೈಕ್ಯತಾ ಶಿಬಿರಗಳಲ್ಲಿ ಪಾಲ್ಗೊಂಡು ಮದ್ರಾಸು, ಪಾಂಡೀಚೇರಿ, ದಿಂಡಿಗಲ್, ನಾಗಪೂರದ ಹತ್ತಿರದ ಪಾವನಿ, ಡೆಹರಾಡೋನ್, ಭೋಪಾಲ ಮುಂತಾದ ಸ್ಥಳಗಳಲ್ಲಿ ಕಾರ್ಯಕ್ರಮ ನೀಡಿರುವರು. ಒಂದುಲೋಕ ಕಥೆ, ನಡು ಬೇಸಿಗೆಯ ಇರುಳು ಸವಿಗನಸು, ಪ್ರೆಸಿಡೆಂಟರಿಗೆ ಪತ್ರ, ತಬರನ ಕಥೆ ನಾಟಕಗಳಲ್ಲಿ ಅಭಿನಯಿಸಿರುವರು.

ಶ್ರೀಮತಿ ಬಿ. ಜಯಶ್ರೀಯವರು ನಿರ್ದೇಶಿಸಿದ 'ನಾಗ ಮಂಡಲ' ನಾಟಕದ ಸಂಗೀತ ನೀಡಲು ಮಹಾನ್ ರಂಗ ಕರ್ಮಿ 'ಬಿ.ವ್ಹಿ. ಕಾರಂತ್'ರು ಆಗಮಿಸಿದ್ದರು ಆಗ ಅವರು ತಿಳಿಸಿಕೊಟ್ಟ 'ಅವಾದ್ಯ ಸಂಗೀತ' ಸಂಯೋಜಿಸುವದರ ಕುರಿತು ನೀಡಿದ ತರಬೇತಿ ಇವರನ್ನು ನಿಪುಣರನ್ನಾಗಿ ಮಾಡಿಸಿತು. ಕೋಟೆ, ಸಿಂಹಾಸನ ಖಾಲಿ ಇದೆ, ಅಭಿನಯ ಗಂಗೋತ್ರಿಯ ನಾಟಕಗಳಾದ ಸಂಗೊಳ್ಳಿ ರಾಯ ಸರದಾರ, ಜಾತ್ರೆ, ಆಲದ ಮರ, ಕೊಡೆಗಳು, ಮತ್ತು ಹಲವಾರು ಬೀದಿ ನಾಟಕ, ಜಾಥಾಗಳಲ್ಲಿ ಬಾಗವಹಿಸಿ ರಂಗ ಸೇವೆ ಮಾಡಿರುವರು.



## ಚಂದ್ರಪ್ಪಾ ಹೆಬ್ಬಾಳಕರ

ಹಿರಿಯ ಸಾಹಿತಿ, ಜಾನಪದ ಮೋಡಿಗಾರ, ಜಾನಪದ ಗಾಯಕ, ಚಂದ್ರಪ್ಪಾ ಹೆಬ್ಬಾಳಕರ (ಜನನ-೧೯೪೦) ಶಿಕ್ಷಣಾಧಿಕಾರಿಗಳಾಗಿ ಸೇವೆ ಸಲ್ಲಿಸಿರುವರು. ಬಾಲ್ಯದಿಂದಲೇ ಸತ್ಯ ಹರಿಶ್ಚಂದ್ರ, ಧನಪಾಲ ರಾಜಾ, ಡಪ್ಪಿನಾಟದಲ್ಲಿ ಸಾಮಾಜಿಕ ನಾಟಕಗಳಲ್ಲಿ ಭಾಗವಹಿಸಿರುವರು. ಸಾಕ್ಷರತಾ ಕಾರ್ಯಕ್ರಮಗಳಲ್ಲೂ ಜಾಥಾ, ಬೀದಿ ನಾಟಕಗಳಲ್ಲಿ ಬಾಗವಹಿಸಿರುವರು. ಭಾರತ ಜ್ಞಾನ ವಿಜ್ಞಾನ ಸಮಿತಿಯಿಂದ ಪವಾಡ ರಹಸ್ಯ ಬಯಲು ಕಾರ್ಯಕ್ರಮಗಳನ್ನು ಹಳ್ಳಿಗಳಲ್ಲಿ ಪ್ರದರ್ಶಿಸಿರುವರು. ಮೂಢನಂಬಿಕೆಯ ವಿರುದ್ಧ ನಾಟಕಗಳ ಮೂಲಕ, ಹಾಡುಗಳ ಮೂಲಕ ಜನಜಾಗೃತಿ ಮೂಡಿಸಿರುವರು. ಭಾನಾಮತಿ ಮೂಢನಂಬಿಕೆಯನ್ನು ಕಿತ್ತೊಗೆಯಲು ಬೀದಿ ನಾಟಕಗಳನ್ನು ಆಡಿಸಿರುವರು. ಬಾಲಭವನದ ಮಕ್ಕಳಿಗೆ 'ಹಕ್ಕು ಕೇಳಿದ ಹಕ್ಕಿಗಳು' ನಾಟಕ ಮಾಡಿಸಿರುವರು. ಚಿಣ್ಣರ ಚಿಲಿಪಿಲಿ, ಗುಬ್ಬಚ್ಚಿ ಗೂಡು, ಹೀಗೆ ಮಕ್ಕಳ ಸರ್ವತೋಮುಖ ಅಭಿವೃದ್ಧಿಗಾಗಿ, ಬಾಲ ವಿಕಾಸ ಅಕಾಡೆಮಿ, ಮಕ್ಕಳ ವೇದಿಕೆಗಳಿಂದ ರಂಗ ಸೇವೆ ಮಾಡುತ್ತಿರುವರು.




## ಎಂ.ಜಿ. ದೇಶಪಾಂಡೆ

ಸಾಹಿತಿಗಳು, ಸಂಘಟನೆಕಾರರು ಹಾಗೂ ಪತ್ರಿಕಾಕರ್ತರಾಗಿ ಬೀದರ ಜಿಲ್ಲೆಯಲ್ಲಿ ತಮ್ಮನ್ನು ತಾವು ಗುರುತಿಸಿಕೊಂಡ ಇವರು ದಿ: ೨೧-೦೩-೧೯೫೨ರಂದು ಜನಿಸಿದರು. ಬಾಲ್ಯದಿಂದಲೇ ಸಾಹಿತ್ಯ ಕ್ಷೇತ್ರದಲ್ಲಿ ಆಸಕ್ತಿಹೊಂದಿದ ಇವರು ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕೃಷಿಗೈದಿದ್ದಾರೆ. ಕಥೆ, ಕವನ, ಹನಿಗವನ, ನಾಟಕ, ಕಾದಂಬರಿ, ಅನುವಾದ, ಇತಿಹಾಸ, ಚರಿತ್ರೆ, ವ್ಯಕ್ತಿಚಿತ್ರ, ಚಿತ್ರಕವನಗಳನ್ನು ಬರೆಯುವ ಮೂಲಕ ಖ್ಯಾತರಾಗಿದ್ದಾರೆ.


ಇವರು ಸಾಹಿತ್ಯ ಕೃಷಿಯ ಜೊತೆಗೆ ರಂಗಭೂಮಿಯ ಮೇಲೆ ನಾಟಕದ ಪಾತ್ರಧಾರಿಗಳಾಗಿ ಸೇವೆ ಸಲ್ಲಿಸಿದ್ದಾರೆ. ಮುಖ್ಯವಾಗಿ ಹೇಳುವುದಾದರೆ 'ತಾಳ ಮೇಳ'

ಹಾಗೂ 'ಜಾಗೃತಿ' ಮುಂತಾದ ನಾಟಕಗಳಲ್ಲಿ ಪಾತ್ರವಹಿಸಿ, ಅಭಿನಯಿಸಿದ್ದಾರೆ. ಇವರ ನಾಟಕ ಕೃತಿ "ಗಂಡಸರೇ ನಿಮಗೊಂದು ಸವಾಲ್ ಅಥವಾ ಪ್ರೀತಿ ತಂದ ಫಜೀತಿ". ಇದು ೧೯೮೨ರಲ್ಲಿ ಬರೆದರೂ ೨೦೧೨ರಲ್ಲಿ ಪ್ರಕಟಗೊಂಡಿದೆ. ಈ ನಾಟಕದ ಉದ್ದೇಶ ಇಲ್ಲಿನ ಪಾತ್ರಧಾರಿಗಳು ಸಮಾಜದಲ್ಲಿ ಆದರ್ಶಕ್ಕೆ ಹೆಚ್ಚಿನ ಮಹತ್ವ ಕೊಡುತ್ತವೆ. ನಾಟಕದಲ್ಲಿ ನಾಟಕ ಭ್ರಷ್ಟಾಚಾರ, ಅನ್ಯಾಯಗಳ ವಿರುದ್ಧ ಹೋರಾಟ ಮಾಡಿ, ಸತ್ಯಕ್ಕೆ ಜಯ ತಂದು ಕೊಡುವಲ್ಲಿ ಕಾರಣನಾಗುತ್ತಾನೆ.



## ಎಸ್.ಬಿ. ಕುಚಬಾಳ


ಕಲಾವಿದ, ಜಾನಪದ ಹಾಡುಗಾರ, ಸಾಹಿತಿ, ನಿವೃತ್ತ ಶಿಕ್ಷಣಾಧಿಕಾರಿಗಳಾದ ಶ್ರೀ ಎಸ್.ಬಿ. ಕುಚಬಾಳ (ಜನನ–೧೯೫೧) ಇವರು 'ಮಾತೆಯ ಮಮತೆ, ಪ್ರೇಮಿಸಿದ ಹೆಣ್ಣು ಅರ್ಥಾತ್ ಸತ್ಯಶೀಲ ಸಂಗಮೇಶ, ಅತ್ತಿಗೆ ಅವತಾರ, ಪ್ರಪಂಚದ ಪಾಡು, ವರದಕ್ಷಿಣೆಯ ಪಿಡುಗು, ಕಲಿಯುಗದ ಕಂತ್ರಾಟ, ಹಿಂಗಾದರೆ ಹ್ಯಾಂಗ್, ಕಳ್ಳರ ಜಾತ್ರೆ' ಮುಂತಾದ ಸಾಮಾಜಿಕ ನಾಟಕಗಳನ್ನು (ಅಪ್ರಕಟಿತ) ರಚನೆ ಮಾಡಿರುವರು. ಚಿಟಗುಪ್ಪಾ, ಕೊಡಂಬಲ್‌ನಲ್ಲಿ ನಾಟಕಗಳನ್ನು ನಿರ್ದೇಶಿಸಿ, ಅವುಗಳಲ್ಲಿ ಪಾತ್ರವನ್ನೂ ಮಾಡಿರುವರು. ನಾಟಕಗಳಿಗೆ ಸಂಗೀತವನ್ನು ನೀಡಿರುವರು. ಇವರ ಕಲಾ ಸೇವೆಗೆ ಮೆಚ್ಚಿ 'ನಾಟಕ ರತ್ನಾಕರ' ಬಿರುದನ್ನು ನೀಡಿರುವರು.



## ಮಾಣಿಕಪ್ಪಾ ಶರಣಪ್ಪಾ ಬಿರಾದಾರ


ಭಾಲ್ಕಿ ತಾಲೂಕಿನ ಬೀರಿ (ಬಿ) ಗ್ರಾಮದ ಶ್ರೀ ಮಾಣಿಕಪ್ಪಾ ಬಿರಾದಾರ (ಜನನ–೧೯೪೭) ಇವರು ಗಡಿನಾಡಾದ ಮಹಾರಾಷ್ಟ್ರದ ಉದಗೀರನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ನಿವೃತ್ತರಾದವರು. ತಮ್ಮ ಸಾಹಿತ್ಯ, ಸಮಾಜ

ಸೇವೆಯೊಂದಿಗೆ ಹಲವಾರು ನಾಟಕಗಳನ್ನು ರಚಿಸಿ, ನಟಿಸಿ, ದಿಗ್ದರ್ಶಿಸಿ, ರಂಗಕ್ಕೆ ತಂದಿರುವವರು. 'ವಧುದಕ್ಷಿಣೆ  ವರ ವಿಕ್ರಯ, ಪತ್ನಿ ಸೇವಕರು, ಶರಣು ಶರಣಾರ್ಥಿ ಹರಳಯ್ಯಾ, ಬಿಡುಗಡೆ–ವೀರಪ್ಪನ್ –ರಾಜಕುಮಾರ ಬಂಧಮುಕ್ತಿ, ಮುಕ್ತಿ, ವ್ಯಸನ ಮುಕ್ತಿ,' ಪ್ರಮುಖವಾಗಿವೆ. ಮತ್ತು ನಿರ್ದೇಶಿಸಿದ ನಾಟಕಗಳಾದ ನರಕದಲ್ಲಿ ಲಂಚ, ಸುಳ್ಳಾಡುವದಿಲ್ಲ, ಕುವೆಂಪು ಅವರ ಬೆರಳ್ಗೆ ಕೊರಳ್, ರಕ್ತಾಕ್ಷಿ, ಹಾಗೂ ಕಾರ್ನಾಡ್‌ರ ಹಯವದನ, ತುಘಲಕ್, ಯಯಾತಿ ಮುಂತಾದವುಗಳನ್ನು ರಂಗದ ಮೇಲೆ ತಂದು ಗಡಿನಾಡಿನಲ್ಲಿ ಕನ್ನಡದ ರಂಗನಾಟಕಗಳನ್ನು ಮಾಡಿಸಿರುವರು.



## ಅನೀಲ ಬಿರಾದಾರ

ಅನೀಲ ಬಿರಾದಾರ (ಜನನ–೧೯೬೦) ಇವರು ಸಮುದಾಯದ ಕಲಾವಿದರಾಗಿ ಎಲ್ಲಾ ನಾಟಕಗಳಲ್ಲಿ ಭಾಗವಹಿಸಿರುವರು. ಪ್ರಮುಖವಾಗಿ, ಒಂದು ಲೋಕ ಕಥೆ, ನಡು ಬೇಸಿಗೆಯ ಇರುಳು ಸವಿಗನಸು, ಪ್ರೆಸಿಡೆಂಟರಿಗೆ ಪತ್ರ, ತಬರನ ಕಥೆ, ಅಗ್ನಿಮತ್ತು ಮಳೆ, ಸಿಂಹಾಸನ ಖಾಲಿ ಇದೆ, ಕೋಟೆ ನಾಟಕಗಳು, ಮತ್ತು  ಅಭಿನಯ ಗಂಗೋತ್ರಿಯ ನಾಟಕಗಳಾದ, ಸಂಗೊಳ್ಳಿ ರಾಯ ಸರದಾರ, ಜಾತ್ರೆ, ಹವ್ಯಾಸಿ ಕಲಾ ತಂಡದ 'ಯಮನ ದರ್ಬಾರು', ಮತ್ತು 'ಕತ್ತಲಲ್ಲಿ ಕಂಡ ಬೆಳಕು' (ಪರಿಕಲ್ಪನೆ, ನಿರ್ದೇಶನ–ಡಾ. ಅನೀಲಕುಮಾರ ಮುಗಳಿ) ನಾಟಕಗಳನ್ನು, ಬೀದರ, ಜಲಸಂಗಿ, ಇಮಾಮಪೂರಗಳಲ್ಲಿ ಮಾಡಿಸಿರುವರು. ಚಳಕಾಪೂರದಲ್ಲಿ 'ಅಂಧಕಾರ' ನಾಟಕ, (ನಿ.ಅನೀಲ ಬಿರಾದಾರ) ಹಾಗೂ ಪ್ರೊ. ಸಂಗ್ರಾಮ ಯಂಗ್ಳೇ ಅವರ ನಿರ್ದೇಶನದಲ್ಲಿ 'ಏನಾದರೂ ಆಗು ಮೊದಲು ಮಾನವನಾಗು' ಮುಂತಾದವುಗಳಲ್ಲಿ ಅಭಿನಯಿಸಿರುವರು.



## ಶ್ಯಾಮರಾವ ದೇಶಪಾಂಡೆ

ಶ್ಯಾಮರಾವ ದೇಶಪಾಂಡೆಯವರು (ಜನನ–೧೯೬೮) ಉತ್ತಮ ಕಲಾವಿದರಾಗಿ, ನೇಪಥ್ಯ ಕಲಾವಿದರಾಗಿ ಸಮುದಾಯ


ಸಂಘಟನೆಯ ನಾಟಕಗಳಾದ, ಒಂದು ಲೋಕ ಕಥೆ, ನಡುಬೇಸಿಗೆಯ ಇರುಳ ಸವಿಗನಸು, ಪ್ರೆಸಿಡೆಂಟರಿಗೆ ಪತ್ರ, ತಬರನ ಕಥೆ, ಕೊಡೆಗಳು, ಸೂರ್ಯ ಶಿಕಾರಿ, ಅಗ್ನಿಮತ್ತು ಮಳೆ, ಜಲ, ಸಿಂಹಾಸನ ಖಾಲಿ ಇದೆ, ಮುಂತಾದ ನಾಟಕಗಳಲ್ಲಿ ನೇಪಥ್ಯ ಕಲಾವಿದರಾಗಿಯೂ ಸೇವೆ ಸಲ್ಲಿಸಿರುವರು. ಬೀದಿ ನಾಟಕಗಳಾದ ತಮಾಷಾ, ಒಂದು ಪತ್ರ, ಸಾಕ್ಷರತಾ ಜಾಥಾಗಳಲ್ಲೂ ಭಾಗಿಯಾಗಿರುವರು. ಕಲಾವಿದರಾಗಿ ಯಾವುದೇ ಪಾತ್ರ ಇರಲಿ ಇರದಿರಲಿ, ನಾಟಕದ ಶಿಬಿರ ಉದ್ಘಾಟನೆಯಿಂದ ಹಿಡಿದು ನಾಟಕ ಮುಗಿಸುವವರೆಗೆ ಜೊತೆಯಲ್ಲಿದ್ದು ಸಹಕಾರ ನೀಡುವರು.



## ಸುರೇಶ ಬಸಂತಪುರೆ

ಕಲಾವಿದ, ಸುರೇಶ ಬಸಂತಪುರೆ ಇವರು ಸದ್ಯ ಶಿಕ್ಷರಾಗಿ ಸೇವೆ ಸಲ್ಲಿಸುತ್ತಿರುವರು. ೧೯೮೩ರಿಂದ ಸಮುದಾಯ ಸಂಘಟನೆಯಲ್ಲಿ ಕಲಾವಿದರಾಗಿ, ನೇಪಥ್ಯ ಕಲಾವಿದರಾಗಿ, ತೊಡಗಿಸಿಕೊಂಡವರು. ನಾಟಕಗಳಾದ, ಒಂದು ಲೋಕ ಕಥೆ, ನಡುಬೇಸಿಗೆಯ ಇರುಳ ಸವಿಗ ನಸು, ಪ್ರೆಸಿಡೆಂಟರಿಗೆ ಪತ್ರ, ತಬರನ ಕಥೆ, ಸೂರ್ಯ ಶಿಕಾರಿ, ಅಗ್ನಿ ಮತ್ತು ಮಳೆ, ಜಲ, ಸಿಂಹಾಸನ ಖಾಲಿ ಇದೆ, ಕೊಟೆ ಮುಂತಾದವುಗಳಲ್ಲಿ, ತಮ್ಮ ನೈಜ ಅಭಿನಯದಿಂದ ನಾಟಕಕ್ಕೆ ಕಳೆ ಕಟ್ಟಿದವರು. ಅಭಿನಯ ಗಂಗೋತ್ರಿ ತಂಡದಲ್ಲಿ ಜಾತ್ರೆ, ಹವ್ಯಾಸಿ ಕಲಾತಂಡದಲ್ಲಿ ಏನಾದರೂ ಆಗು ಮೊದಲು ಮಾನವನಾಗು, ಜೋಗತಿ, ಆಲದ ಮರ, ರಾವಿ ನದಿಯ ದಂಡೆಯಲ್ಲಿ ಮತ್ತು ಪವಾಡ ರಹಸ್ಯ ಬಯಲು ಕಾರ್ಯಕ್ರಮಗಳಲ್ಲೂ ಭಾಗವಹಿಸಿರುವರು.


ಬೀದರಿನ ಬಸವ ಸೇವಾ ಪ್ರತಿಷ್ಠಾನದ ಶರಣ ಕಲಾಲೋಕ ತಂಡದಿಂದ, ಮಾಡಿಸುವ ನಾಟಕಗಳಿಗೆ ವಸ್ತ್ರ ವಿನ್ಯಾಸ, ಮೇಕಪ್ ಮತ್ತು ನೇಪಥ್ಯದಲ್ಲಿ ಸಂಗ್ರಾಮ ಎಂಗಲೇ ಅವರಿಗೆ ಸಹಕಾರ ನೀಡುತ್ತಾ ರಂಗ ಸೇವೆ ಸಲ್ಲಿಸುತ್ತಿರುವರು.



## ತುಕಾರಾಮ ಭೋಲೆ

ಕಲಾವಿದ ತುಕಾರಾಮ ಭೋಲೆಯವರು ಬೀದರ ತಾಲೂಕಿನ ನಾಗೋರಾದವರು. (ಜನನ-೧೯೬೮), ಸದ್ಯ ಶಿಕ್ಷರಾಗಿ ಸೇವೆ ಸಲ್ಲಿಸುತ್ತಿರುವವರು. ಬಾಲ್ಯದಿಂದಲೇ ಪ್ರಾಣಿ ಪಕ್ಷಿಗಳ ಧ್ವನಿಗಳ ಅನುಕರಣೆ ಮಾಡುತ್ತಾ ಎಲ್ಲರನ್ನು ಮನರಂಜಿಸುತ್ತಿದ್ದರು. ನಂತರ ಸಮುದಾಯ ಸಂಘಟನೆಯಲ್ಲಿ ಬೀದಿ ನಾಟಕಗಳಲ್ಲಿ ಭಾಗವಹಿಸತೊಡಗಿದರು. ಬಸವರಾಜ ಕೊಡಗೆ ನಿರ್ದೇಶನದ 'ಜಲ' ನಾಟಕದಲ್ಲಿ ಮಂತ್ರಿಯ ಪಾತ್ರದಲ್ಲಿ ನಟಿಸಿದರು. ವಾರ್ತಾ ಇಲಾಖೆಯ ಕರ್ನಾಟಕ ವೈಭವ ಧ್ವನಿ ಬೆಳಕು ನಾಟಕದಲ್ಲೂ ಭಾಗವಹಿಸಿರುವರು. ಸುನೀಲ ಕಡ್ಡೆ ಅವರ ತಂಡದಿಂದ, ಸ್ವಾತಂತ್ರ್ಯ ಸಂಗ್ರಾಮ, ಬೆಂಗಳೂರು ಬಣ್ಣ ಬಂದು ನೋಡಣ್ಣ, ನಾಟಕಗಳು, ಶಂಕರ ಚೊಂಡಿ ತಂಡದಿಂದ ವರದಕ್ಷಿಣೆಯ ಪಿಡುಗು, ಡಿ.ಪಿ.ಇ.ಪಿ ಶಿಕ್ಷಣ ಯೋಜನೆಯ ಅಡಿ, ಗೌರಿಯ ಕನಸು, ಅಪ್ಪಾ ನನ್ನ ಹೊಡೆಯ ಬೇಡ, ಮಾದರಿ ಶಾಲೆ, ಆಕಾಶ ಬುಟ್ಟಿ, ಬೀದಿ ನಾಟಕಗಳನ್ನು ಜಿಲ್ಲೆಯಾದ್ಯಂತ ಪ್ರದರ್ಶನ ನೀಡಿರುವರು.

ಬಿ.ಜಿ.ವಿ.ಎಸ್ ನಿಂದ ಪವಾಡ ರಹಸ್ಯ ಬಯಲು ಕಾರ್ಯಕ್ರಮಗಳನ್ನು ಎಲ್ಲಾ ಶಾಲೆ ಕಾಲೇಜುಗಳಲ್ಲಿ ನೀಡಿರುವರು. ಇವರು ಜಾಥಾಗಳಲ್ಲಿ ತಮ್ಮ ವಿಶೇಷವಾದ ಮಿಮಿಕ್ರಿ ಹಾಗೂ ಜಾದೂ ಪ್ರದರ್ಶನಗಳನ್ನು ಮಕ್ಕಳ ಮನರಂಜನೆಗಾಗಿ, ಮತ್ತು ಮಕ್ಕಳಲ್ಲಿ ಶಿಕ್ಷಣದ ಕುರಿತು ಆಸಕ್ತಿ ಮೂಡಿಸಲು ತಮ್ಮ ಕಲೆಯನ್ನು ಸದುಪಯೋಗ ಪಡಿಸಿಕೊಳ್ಳುತ್ತಿರುವರು ಮತ್ತು ಜನಾನುರಾಗಿಯಾಗಿರುವರು.



## ಓಂಪ್ರಕಾಶ ಥಡ್ಡೆ

ಕಲಾವಿದ, ಕವಿ, ಸಾಹಿತಿ ಓಂಪ್ರಕಾಶ ಥಡ್ಡೆ ಇವರು ಸದ್ಯ ಸರಕಾರಿ ಕಿರಿಯ ಮಹಾವಿದ್ಯಾಲಯದ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿರುವರು (ಜನನ-೧೯೭೦). ಬೀದರ ಜಿಲ್ಲಾ ಬರಹಗಾರರ ಮತ್ತು ಕಲಾವಿದರ ಸಂಘದಿಂದ ನಿರ್ದೇಶಕ ಆರ್.ವಿ. ಚಂದ್ರಕಾಂತ

ಅವರು ಮಾಡಿಸಿದ ಬರಗೂರು ರಾಮಚಂದ್ರಪ್ಪನವರ ಕೋಟೆ ನಾಟಕದಲ್ಲಿ ಭಾಗವಹಿಸಿರುವರು. ಈ ನಾಟಕ ಬೀದರ, ಗುಲಬರ್ಗಾ, ಹೊಸಪೇಟೆಗಳಲ್ಲಿ ಹಲವಾರು ಪ್ರಯೋಗ ಕಂಡಿದೆ. ಕಲ್ಲು ಬರಿಗಲ್ಲು ಬೀದಿ ನಾಟಕದಲ್ಲೂ ನಟಿಸಿರುವರು. ಮತ್ತು ಮಯೂರ ವರ್ಮ ಐತಿಹಾಸಿಕ ನಾಟಕವನ್ನು ರಚಿಸಿ ಶಾಲೆಯ ಮಕ್ಕಳಿಗೆ ನಿರ್ದೇಶನವನ್ನೂ, ಮಾಡಿರುವರು. ಸದಾ ಸಾಂಸ್ಕೃತಿಕ ಕೆಲಸಗಳಲ್ಲಿ ಮುಂಚೂಣಿಯಲ್ಲಿರುವ ಉತ್ಸಾಹಿಗಳಾಗಿದ್ದಾರೆ.




## ಡಾ. ರಘುನಾಥ ಖರಾಬೆ (ರಘುಶಂಖ)

ಡಾ. ರಘುಶಂಖ ಭಾತಂಬ್ರಾ ಕಾವ್ಯನಾಮದಿಂದಲೇ ಪ್ರಸಿದ್ಧರಾದ, ಡಾ. ರಘುನಾಥ ಶಂಕರೆಪ್ಪ ಖರಾಬೆಯವರು (ಜನನ–೦೧.೦೧.೧೯೭೦) ಮೂಲತಃ ಭಾಲ್ಕಿ ತಾಲೂಕಿನ ಭಾತಂಬ್ರಾ ಗ್ರಾಮದವರು. ಸದ್ಯ ಬೀದರನಲ್ಲಿ ನೆಲೆಸಿದ್ದಾರೆ. ಸಾಹಿತಿ, ಕವಿ, ಸಂಶೋಧಕ, ಪತ್ರಿಕಾ ಸಂಪಾದಕ, ನಟ ಹೀಗೆ ಬಹುಮುಖಿ ಪ್ರತಿಭೆಯಿಂದ ಸಾಂಸ್ಕೃತಿಕ ಲೋಕದಲ್ಲಿ ಪರಿಚಿತರು. ಪ್ರಭುರಾವ ಕಂಬಳಿವಾಳೆ ಕನ್ನಡ ಸೇವಾ ಪ್ರತಿಷ್ಠಾನದ ಪ್ರಧಾನ ಕಾರ್ಯದರ್ಶಿಯಾಗಿ ಬೀದರ ಜಿಲ್ಲೆಯ ಸಾಹಿತಿ ಕಲಾವಿದರ ಬದುಕು ಬರಹ ಕುರಿತಾದ ಕಾರ್ಯಕ್ರಮವನ್ನು ಪ್ರತಿ ತಿಂಗಳ ಕೊನೆಯ ರವಿವಾರದಂದು ಹಮ್ಮಿಕೊಳ್ಳುತ್ತ ಬಂದಿರುವುದು ದಾಖಲೆ ಸಂಗತಿಯಾಗಿದೆ.

ಬಾಲ್ಯದಲ್ಲಿ ರಂಗಭೂಮಿಗೆ ಆಕರ್ಷಿತರಾಗಿ ಹಲವಾರು ನಾಟಕಗಳಲ್ಲಿ ಭಾಗವಹಿಸಿರುವರು. ಸಾಮಾಜಿಕ ನಾಟಕಗಳಾದ ರಕ್ತದೀಪ, ಲಂಚ ನಿರ್ಮೂಲನೆ, ಕುಂಟ ಕುಲಕರ್ಣಿ ತುಂಟ ತಳವಾರ, ಬಂಗಾರದ ಮನುಷ್ಯ ಮೊದಲಾದ ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಕುಂಟ ಕುಲಕರ್ಣಿ ಪಾತ್ರವು ಇವರಿಗೆ ಹೆಸರು ತಂದುಕೊಟ್ಟಿತು. ಹೆಸರಿಗೆ ತಕ್ಕಂತೆ ಅಭಿನಯಿಸಿದ್ದರು. ಶ್ರದ್ಧಾಪೂರ್ವಕ ಅಭಿನಯದಿಂದ ತಿಂಗಳುಗಟ್ಟಲೇ ಧಿಟ್ಟಿಯಾಗಿ ಹಾಸಿಗೆ ಹಿಡಿದಿದ್ದರೆಂದು ನೆನಪಿಸಿಕೊಳ್ಳುತ್ತಾರೆ.


ಪ್ರಾಥಮಿಕ ಶಾಲೆಯ ಸಹಶಿಕ್ಷಕರಾಗಿ ಸೇವೆ ಸಲ್ಲಿಸುತಿರುವರು. ಜ್ಞಾನಜ್ಯೋತಿ ಎಂಬ ಕಿರುನಾಟಕವನ್ನು ಬರೆದು ಹಾಲಹಳ್ಳಿ (ಕೆ) ಸರಕಾರಿ ಪ್ರೌಢ ಶಾಲಾ ವಿದ್ಯಾರ್ಥಿಗಳಿಂದ ಶಾಲಾ ವಾರ್ಷಿಕೋತ್ಸವ (೨೦೧೨) ಸಂದರ್ಭದಲ್ಲಿ ಆಡಿಸಿರುತ್ತಾರೆ.

ಗರತಿ ಮಾತು ಕಲ್ಲು ಸಕ್ಕರಿ ಇದ್ದಾಂಗ ಎಂಬ ರೂಪಕವು ಆಕಾಶವಾಣಿ ಗುಲಬರ್ಗಾದಿಂದ ಜುಲೈ ೨೩, ೧೯೯೯ರಂದು ಪ್ರಸಾರವಾಗಿದೆ. ನಾಡಹಬ್ಬ ನಾಗರ ಪಂಚಮಿ ಎಂಬ ರೂಪಕವು ಗುಲಬರ್ಗಾ ಆಕಾಶವಾಣಿಯಿಂದ ೨೫ ಜುಲೈ ೨೦೦೧ರಂದು ಪ್ರಸಾರವಾಗಿದೆ. ಇವೆರಡೂ ರೂಪಕವು ಕೇಳುಗರ ಮೆಚ್ಚುಗೆಗೆ ಪಾತ್ರವಾಗಿವೆ. ನಾಡಹಬ್ಬ ನಾಗರಪಂಚಮಿ ರೂಪಕವಂತೂ ಪ್ರತಿ ವರ್ಷ ಪಂಚಮಿಯ ಮುನ್ನಾ ದಿನದಂದು ಪ್ರಸಾರವಾಗುತ್ತಿರುವದು ಹೆಮ್ಮೆಯ ವಿಷಯವಾಗಿದೆ. "ಪಾತ್ರಧಾರಿಗಳಾಗಿ ಅಭಿನಯಿಸಿದ ನಾಟಕಗಳು ಸಾಮಾಜಿಕ ಸಮಸ್ಯೆಗಳನ್ನು ಪ್ರತಿಬಿಂಬಿಸುವ ವಿಷಯಗಳ ಕುರಿತಾಗಿವೆ. ರಂಗ ನಾಟಕಗಳು ಜೀವನದ ಕನ್ನಡಿ ಇದ್ದಂತೆ, ನಮ್ಮನ್ನು ನಾವು ತಿದ್ದಿಕೊಳ್ಳಲು, ಸಮಾಜವನ್ನು ತಿದ್ದಲು, ನಾಟಕಗಳು ನೇರ ಪರಿಣಾಮವನ್ನು ಬೀರುವವು" ಎಂದು ಅಭಿಪ್ರಾಯಪಡುತ್ತಾರೆ.



## ಶಿವಾಜಿ ಮಾನಕಾರೆ

ಬೀದರಿನ ಕಲಾವಿದ ಶಿವಾಜಿ ಬಸಪ್ಪಾ ಮಾನಕಾರೆ (ಜನನ-೧೯೭೪) ಇವರು ಸಮುದಾಯ ಕಲಾವಿದರಾಗಿರುವರು. ಬೀದಿ ನಾಟಕ ಕಲಾವಿದರಾಗಿ ಪ್ರಸಿದ್ಧಿ ಪಡೆದಿರುವರು. ಜನಜಾಗೃತಿಗಾಗಿ ೧೯೯೬ರಿಂದ ಬೀದಿ ನಾಟಕಗಳಲ್ಲಿ ಭಾಗ ವಹಿಸುತ್ತಿರುವರು. ಭಾರತ ಜ್ಞಾನವಿಜ್ಞಾನ ಸಮಿತಿಯ ಮೂಢನಂಬಿಕೆ ವಿರುದ್ಧ ಮತ್ತು ಪವಾಡ ರಹಸ್ಯ ಬಯಲು ಕಾರ್ಯಕ್ರಮಗಳನ್ನು ಹಮ್ಮಿಕೊಂಡಾಗ ಅದರಲ್ಲಿ ಭಾಗವಹಿಸಿದ್ದರು. ಜಿಲ್ಲಾ ಪಂಚಾಯತ ನಿಂದ ಆಯೋಜಿಸಿದ, ಗ್ರಾಮೀಣ ಅಭಿವೃದ್ಧಿಗಾಗಿ ಮೈಸೂರಿನಲ್ಲಿ ಆಯೋಜಿಸಿದ ೧೫ ದಿನಗಳ ತರಬೇತಿಯನ್ನು ಪಡೆದು, ಗ್ರಾಮಗಳಲ್ಲಿ ಕಾರ್ಯಕ್ರಮ ನೀಡಿರುವರು. ಆರೋಗ್ಯ ಇಲಾಖೆಯಿಂದ ಕಾಲರಾ, ಮಲೇರಿಯಾ, ಡೆಂಗ್ಯು ಜ್ವರದ ಬಗ್ಗೆ ಅರಿವು ಮೂಡಿಸುವ ಬೀದಿ ನಾಟಕಗಳಲ್ಲಿ, ಪರಿಸರ ಸಂರಕ್ಷಣೆ, ಕಾಡುಗಳ ರಕ್ಷಣೆ, ಕುರಿತು ಅರಿವು ಮೂಡಿಸಿರುವರು. ಬೆಂಗಳೂರಿನ ಸದಾಶಿವ ನಗರದ ರುದ್ರಭೂಮಿಯಲ್ಲಿ ಆಯೋಜಿಸಿದ ಮೂಢನಂಬಿಕೆ ವಿರುದ್ಧದ ಕಾರ್ಯಕ್ರಮದಲ್ಲೂ ಪಾಲ್ಗೊಂಡಿರುವರು. ಜನಜಾಗೃತಿ ಹಾಡು, ದಲಿತ ಚಳುವಳಿಯ ಹಾಡು, ಜನಪರ ಹಾಡುಗಳನ್ನು ಹಾಡುತ್ತಾ ಜನಮನ ರಂಜಿಸುತ್ತಿರುವರು.




## ಯಶವಂತ ಕುಚಬಾಳ

ಕಲಾವಿದ ಯಶವಂತ ಕುಚಬಾಳ (ಜನನ-೧೯೮೬) ಬಾಲ್ಯದಿಂದಲೇ ತಂದೆ ಯವರಾದ ಕಲಾವಿದ ಎಸ್.ಬಿ. ಕುಚಬಾಳ ಅವರ ಪ್ರಭಾವದಿಂದ, ಏಕ ಪಾತ್ರಾಭಿನಯ ನಾಟಕಗಳಲ್ಲಿ ಅಭಿನಯಿಸುತ್ತ ಬಂದವರು. ನಂತರ ಸಮುದಾಯ ತಂಡದ ಬೀದಿ ನಾಟಕಗಳಲ್ಲಿ ಭಾಗವಹಿಸುತ್ತ ಜಿಲ್ಲೆಯಾದ್ಯಂತ ಜಾಥಾ ಮಾಡಿರುವರು. ೨೦೦೫ರಲ್ಲಿ ನೀ.ನಾ.ಸಂ ಹೆಗ್ಗೋಡುನಲ್ಲಿ ರಂಗ ತರಬೇತಿ ಶಿಬಿರದಲ್ಲಿ ಭಾಗವಹಿಸಿ ಡೇರ್ ಡೆವಿಲ್ ಮುಸ್ಥಫಾ ನಾಟಕದಲ್ಲಿ ಅಭಿನಯಿಸಿದರು.

೨೦೦೮ರಲ್ಲಿ ನೀ.ನಾ.ಸಂ. ಹೆಗ್ಗೋಡುನಲ್ಲಿ ಒಂದು ವರ್ಷದ ರಂಗ ತರಬೇತಿಯಲ್ಲಿ ಆಶಾಢದ ಮೊದಲ ದಿನ, ಮಿಡ್ ಸಮ್ಮರ್ ನೈಟ್ ಡ್ರೀಮ್ಸ್, ತಾಳಿ ಕಟ್ಟೋಕು ಕೂಲಿನೇ, ಜೊತೆಗೆ ತಿರುಗಾಟದ ನಾಟಕಗಳಾದ ಓಥೇಲೊ, ಶೂದ್ರ ತಪಸ್ವಿ, ರಾಜ್ಯಾದ್ಯಂತ ಪ್ರದರ್ಶಿಸಿದರು. ಮರು ತಿರುಗಾಟದಲ್ಲಿ ದ ವಾಟರ್ ಸ್ಟೇಷನ್, ನಾಟಕದಲ್ಲಿ ಅಭಿನಯಿಸಿದರು. ಥೇಟರ್ ಸಮುರಾಯಿಸ್ ತಂಡ ಕಟ್ಟಿಕೊಂಡು, ಹದ್ದು ಮೀರಿದ ಹಾದಿ, ನಾಟಕ ರಾಜ್ಯಾದ್ಯಂತ ಅಭಿನಯಿಸಿದರು.

ಟೂರಿಂಗ್ ಟಾಕೀಸ ಧಾರವಾಡ, ಬೆಂಗಳೂರು ತಂಡದಿಂದ ಹುಚ್ಚರ ಸಂತೆ ನಾಟಕ ನಾಡಿನೆಲ್ಲೆಡೆ ಪ್ರದರ್ಶಿಸಿದರು.ಮತ್ತೆ ಏಕಲವ್ಯ ನಾಟಕ ದೆಹಲಿಯಲ್ಲೂ ಮಾಡಿದರು ಹಲವಾರು ಸಂಘ ಸಂಸ್ಥೆಗಳು ಇವರನ್ನು ಗೌರವಿಸಿ ಸನ್ಮಾನಿಸಿವೆ. ಇತ್ತೀಚೆಗೆ 'ಪ್ರೀತಿ ಕಿತಾಬು' ಕನ್ನಡ ಚಲನಚಿತ್ರದಲ್ಲೂ ಅಭಿನಯಿಸಿರುವರು.



## ಶಿವಗುಪ್ತ ಚಾಂದಕವತೆ

ಕಲಾವಿದ ಶಿವಗುಪ್ತ ಚಾಂದಕವತೆ (ಜನನ-೧೯೯೧) ಸದ್ಯ ಬೆಂಗಳೂರಿನಲ್ಲಿ ಸಾಫ್ಟವೇರ್ ಇಂಜಿನಿಯರಾಗಿ ಸೇವೆ ಸಲ್ಲಿಸುತ್ತಿರುವರು. ಬಾಲ್ಯದಿಂದಲೇ ರಂಗಭೂಮಿಯ ಒಡನಾಟದಲ್ಲಿ ಬೆಳೆದವರು, ಮನೆಯಲ್ಲಿ ತಂದೆಯವರ

ಪ್ರಭಾವದಿಂದ, ಸರಸ್ವತಿ ಶಾಲೆಯಲ್ಲಿ ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳಲ್ಲಿ ಸದಾ ಮುಂದೆ, ವಾರ್ಷಿಕೋತ್ಸವದಲ್ಲಿ ಆಡಿಸುತ್ತಲಿದ್ದ ಏಕಾಂಕ ನಾಟಕಗಳ ಜೊತೆಗೆ ದೇಶಪ್ರೇಮ ಬಿಂಬಿಸುವ ಸಂಗೊಳ್ಳಿ ರಾಯಣ್ಣ, ದಾನಶೂರ ಕರ್ಣ, ಸುಭಾಷ್‌ಚಂದ್ರ ಭೋಸ್ ಮುಂತಾದ ಏಕ ಪಾತ್ರಾಭಿನಯಗಳಲ್ಲಿ ಭಾಗವಹಿಸಿರು ವರು

ಬೇಸಿಗೆಯ ಶಿಬಿರಗಳಲ್ಲಿ ಹಲವಾರು ನಾಟಕಗಳಲ್ಲಿ ನಟಿಸಿರುವವರು. ಮುಖ್ಯವಾಗಿ 'ಮಂಗನ ತೀರ್ಪು, ಹೆತ್ತೊಡಲು, ಬೆಳೆದವರು, ಮಕ್ಕಳ ನಾಟಕಗಳಾದರೆ, ಸಮುದಾಯದ ಸಿಂಹಾಸನ ಖಾಲಿ ಇದೆ, ವಾರ್ತಾ ಮತ್ತು ಪ್ರಚಾರ ಇಲಾಖೆಯ ಧ್ವನಿ ಮತ್ತು ಬೆಳಕು' ನಾಟಕದ ಶಿಬಿರದಲ್ಲಿ ಪಾಲ್ಗೊಂಡು, 'ಕರ್ನಾಟಕ ವೈಭವ' ನಾಟಕದಲ್ಲಿ ಟಿಪ್ಪುವಿನ ಮಗ, ಧಾರ್ಮಿಕ ಬಾಲಕ, ಗಾಂಧೀಜಿಯವರ ಚಳುವಳಿಯ ಸತ್ಯಾಗ್ರಹದ ಬಾಲಕ, ಹೀಗೆ ಹಲವಾರು ಪಾತ್ರಗಳಲ್ಲಿ ಅಭಿನಯಿಸಿರುವವರು. ಬೆಂಗಳೂರು ದೂರದರ್ಶನದಿಂದ ಪ್ರಸಾರವಾದ 'ಬೆಟ್ಟಕ್ಕೆ ಚಳಿಯಾದರೆ.' ನಾಟಕದಲ್ಲಿ ಭಾಗವಹಿಸಿದ್ದು ಹಲವಾರು ಪ್ರಯೋಗಗಳೊಂದಿಗೆ, ಹಲವಾರು ಬಾರಿ ಮರು ಪ್ರಸಾರಗೊಂಡಿದೆ.

## ಇನ್ನಿತರೆ ಕಲಾವಿದರು

ವೀರಭದ್ರಪ್ಪಾ ಉಪ್ಪಿನ (ಜನನ-೧೯೫೭) ಬೀದರಿನ ಪಶು ವೈದ್ಯ ಮಹಾವಿದ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಿದ್ದು ಸಮುದಾಯದ ನಾಟಕಗಳಾದ ಸಿಂಹಾಸನ ಖಾಲಿ ಇದೆ, ಜಲ, ನಾಟಕಗಳಲ್ಲಿ ಅಭಿನಯಿಸಿರುವವರು.

ಪ್ರೊ. ಬಸವರಾಜ ಮಯೂರ ಅವರು ಹವ್ಯಾಸಿ ಕಲಾತಂಡದ ಯಮನ ದರ್ಬಾರು, ಏನಾದರೂ ಆಗು ಮೊದಲು ಮಾನವನಾಗು, ಪವಾಡ ರಹಸ್ಯ ಬಯಲು ಕಾರ್ಯಕ್ರಮಗಳಲ್ಲೂ ಭಾಗವಹಿಸಿರುವವರು. ಹಲವಾರು ನಾಟಕಗಳಲ್ಲಿ ಅಭಿನಯಿಸಿರುವವರು. ಸಮುದಾಯದ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿರುವವರು.

ವಕೀಲರಾಗಿ ಸೇವೆ ಸಲ್ಲಿಸುತ್ತಿರುವ ಮಾರುತಿ ಶಿಕ್ಯಾನಪುರೆ ಇವರು ಸಮುದಾಯದ ನಾಟಕಗಳಾದ, ಜಲ ನಾಟಕ, ಗುಡಸಿಲಿನ ಗುಡದಾಳಿ, ಮತ್ತು ಕರ್ನಾಟ ವೈಭವ ಧ್ವನಿ ಮತ್ತು ಬೆಳಕು ನಾಟಕದಲ್ಲೂ ಭಾಗವಹಿಸಿರುವವರು.

ಉತ್ಸಾಹಿ ಯುವ ಪತ್ರಕರ್ತರಾದ ಶ್ರೀ ನಾಗಶೆಟ್ಟಿ ಧರ್ಮಪುರೆ ಯವರು ಸಂಗೀತ, ಭಜನೆ, ಜಾನಪದ ತತ್ವಪದಗಳನ್ನು ಹಾಡವರು ಜೊತೆಗೆ ಕೋಲಾಟಗಳಾದ ರಾಮಾಯಣ, ಮಹಾಭಾರತಗಳಲ್ಲಿ ಭಾಗವಹಿಸಿರುವವರು. ಬೇಡವಾದ ಅತಿಥಿ ನಾಟಕದಲ್ಲಿ ನಟಿಸಿ, ನಿರ್ದೇಶಿಸಿರುವವರು.

ಕಲಾವಿದ, ಗಾಯಕ ಶಂಕರ ಮಾಣಿಕಪ್ಪಾ ಚೊಂಡಿ (ಜನನ-೧೯೭೨) ಸಮುದಾಯದ ನಾಟಕಗಳಲ್ಲಿ ಗಾಯಕರಾಗಿ, ಬೀದಿ ನಾಟಕಗಳಲ್ಲಿ ಕಲಾವಿದರಾಗಿ ಭಾಗವಹಿಸಿರುವರು.

ಸಮುದಾಯದ ಒಂದೆರಡು ನಾಟಕಗಳಲ್ಲಿ ಭಾಗವಹಿಸಿದ ಕಲಾವಿದರಾದ ಪ್ರೊ.ರಮೇಶ ವೈದ್ಯ, ಪತ್ರಕರ್ತ ದಿ. ಶ್ರೀಧರ ಮಾಲೆ, ವಿಶ್ವನಾಥ ಅಕ್ಕಿ, ಪ್ರೊ. ಸತೀಶ ಚಾಲಾಕ, ಶಾಂತಕುಮಾರ ಸ್ವಾಮಿ, ಪ್ರೊ. ಜಗನ್ನಾಥ ಕಮಲಾಪುರೆ, ಸುನೀಲ ಸೋನೆ, ಸಮುದಾಯದ ಕಲಾವಿದರು ಹಲವಾರು ನಾಟಕಗಳಲ್ಲಿ ಪಾತ್ರ ಮಾಡಿರುವವರು.

ದಿಲೀಪಕುಮಾರ ಪಾಟೀಲ, ಶಶಿಕಾಂತ ಮಳ್ಳಿ, ರವಿ ಪ್ರಭಾ, ರಾಜೇಶ ಸಂಗ್ರಾಮ, ಕಾವ್ಯಾನಂದ ಸಿದಬಟ್ಟೆ, ಚವ್ಹಾಣ, ಕರಿಗೌಡರ, ಎಸ್.ಎಸ್. ಪಾಕಾಲ, ಪರುಷುರಾಮ, ಸುರೇಶ ಸೋನೆ, ದೀಪಕಸಿಂಗ ಠಾಕೂರ, ದೇವಾನಂದ, ಕೈಲಾಸ ಧೂಪೆ, ವಿಜಯ ಕುಲಕರ್ಣಿ, ರಘುವೀರ ವಾಡೇಕರ, ಅಪ್ಪಣ್ಣಾ ಚೊಂಡಿ, ಸುರ್ರ್ಯಕಾಂತ ಉಪ್ಪಾನೋರ, ಕಾಶಿನಾಥ ಶಂಕೆ, ಪ್ರಕಾಶ ಕಾಂಬಳೆ, ವೀರಭದ್ರ ಉಪ್ಪಿನ, ರಮೇಶ ವೈದ್ಯ, ಬಿ ಶಾಂತಪ್ಪಾ, ಯೋಗೀಶ ಮಠದ, ರಫಿಖಾನ, ಡಾ. ರಮೇಶ ಮೂಲಗೆ, ರಮೇಶ ಅಂಬುಲಗೇಕರ, ಮಲ್ಲಿಕಾರ್ಜುನ ನಾಶಿಗಾರ, ವಿಜಯಕುಮಾರ ಸಿಂಧೋಲ, ಅನೀಲ ಕುಲಕರ್ಣಿ, ಡಾ. ಗಡ್ಡೆ, ಕಲಾವಿದರಾದ ಲಕ್ಷ್ಮಣ ಮಚಕುರೆ, ರಾಮ ಖಿಂಡ್ರೆ, ಸಿದ್ದಾರ್ಥ ದೊಡ್ಡೆ, ರಾಜಶ್ರೀ ಕೋಟೆ, ಸತೀಶಕುಮಾರ ಬೋರೆ, ದೇವಿದಾಸ ಎಸ್, ಮೀನಾಕ್ಷಿ ಮೇತ್ರೆ, ವಿಜಯಲಕ್ಷ್ಮಿ ಬಿ, ಮತ್ತು ಶ್ರೀಕಾಂತ ಕುಂದನ್, ರಾಧಿಕಾ ಬ್ಯಾನರ್ಜಿ, ಎಸ್ತಾರಾಣಿ ಮೇತ್ರೆ, ರೋಹಿಣಿ ಸಿಂಗ, ಸದಮಾಲಾ ದೊಡ್ಡಮನಿ, ಆಕಾಶ ದೊಡ್ಡೆ, ಮಹೇಂದ್ರ ಮುಂತಾದವರು.

ಬೀದಿ ನಾಟಕಗಳಲ್ಲಿ ಭಾಗವಹಿಸುತ್ತಿರುವ ಶ್ರೀಮತಿ ಡಿಲೆಮ್ಮಾ, ಚನ್ನಮ್ಮಾ ಲಾಧಾ, ಶೆಷಪ್ಪಾ ಚಿಟ್ಟಾ, ರಮೇಶ ಧೋನೆ, ಮಧುಕರ ಘೊಡಕೆ, ಶರಣು ಗೌಳಿ, ಮೌನೇಶ್ವರ ವಿಶ್ವಕರ್ಮ, ರೂಪಾ ಮಲಗಿಗ್ಗಿಕರ ಇವರೆಲ್ಲರನ್ನೂ ಮರೆಯಲು ಸಾಧ್ಯವೇ?

ಹವ್ಯಾಸಿ ನಾಟಕಗಳಿಗೆ ಹಿನ್ನೆಲೆ ಸಂಗೀತ ನೀಡಿದ ಶ್ರೀ ರಾಜೇಂದ್ರಸಿಂಗ ಪವಾರ, ವೈಕುಂಠದತ್ತ ಮಹಾರಾಜ, ವಾಮನರಾವ ಕುಲಕರ್ಣಿ, ಕಾಶೀನಾಥ ಹೆಡಗಾಪೂರ, ರಘುವೀರ ವಾಡೇಕರ, ಶಂಕರ ಚೊಂಡಿ, ಪ್ರೊ. ಎಸ್.ವ್ಹಿ. ಕಲ್ಮಠ, ಶಿವಕುಮಾರ ಪಾಂಚಾಳ, ಈಶ್ವರಪ್ಪಾ ಪಾಂಚಾಳ, ಶಾಂತಕುಮಾರ ಸ್ವಾಮಿ ಮುಂತಾದ ಮಹನೀಯರನ್ನು ನೆನೆಯದೇ ಇರಲಾದೀತೆ.

# ಔರಾದ ತಾಲೂಕು

ಔರಾದ ತಾಲೂಕಿನ ಧುಪತ ಮಹಾಗಾಂವನ ಕಾಶಿನಾಥ ನಾಗಶೆಟ್ಟಿ ಪಾಟೀಲ ಇವರು ಡಪ್ಪಿನಾಟ, ಸಾಮಾಜಿಕ ನಾಟಕಗಳಲ್ಲಿ ಭಾಗವಹಿಸಿರುವರು.

ರಾಯಪಲ್ಲಿಯ ನಾರಾಗೂಡ ನರಸಾಗೂಡ ಇಡಗಾರ, ತುಳಜಾಪೂರದ ರಾಜಕುಮಾರ ಶರಣಪ್ಪಾ ಸಿಂಧೆ, ಸಂತಪೂರಿನ ಶಾಂತಾ ಮಾರುತೆಪ್ಪಾ ಬೊಂಬಳಗೆ ಇವರು ನಾಟಕಗಳಲ್ಲಿ ಅಭಿನಯಿಸುವದರೊಂದಿಗೆ ಹಾಡುಗಳನ್ನೂ ಹಾಡುವ ಕಲಾವಿದರಾಗಿರುವರು.

# ಬಸವಕಲ್ಯಾಣ ತಾಲೂಕು

## ವಿರುಪಾಕ್ಷಯ್ಯ ಶಿವಲಿಂಗಯ್ಯ ಮಠಪತಿ, ಗೋರಟಾ (ಬಿ.):

ಸಂಗಮ್ಮಾ ಶಿವಲಿಂಗಯ್ಯನವರ ಮಗನಾಗಿ ೧೯೨೬ರಲ್ಲಿ ಜನಿಸಿದ ವಿರುಪಾಕ್ಷಯ್ಯ ಮಠಪತಿಯವರು ಬೀದರ ಜಿಲ್ಲೆಯ ಹಿರಿಯ ಕಲಾವಿದರು. ಉತ್ತಮ ರಂಗಕರ್ಮಿಗಳು ಹೌದು. ಗೋರ್ಟಾದಲ್ಲಿ ಪ್ರತಿವರ್ಷ ನಡೆಯುತ್ತಿದ್ದ ನಾಟಕಗಳಲ್ಲಿ ಪಾತ್ರವಹಿಸಿದ್ದಾರೆ. ಹೇಮರಡ್ಡಿ ಮಲ್ಲಮ್ಮನ ನಾಟಕದಲ್ಲಿ ಸ್ತ್ರೀ ಪಾತ್ರ, ಪಾರ್ವತಿ ಸತ್ವಪರೀಕ್ಷೆ ನಾಟಕದಲ್ಲಿ ನಾರದನ ಪಾತ್ರ, ಬಾಲಚಂದ್ರ ನಾಟಕದಲ್ಲಿ ಪರಮಾತ್ಮನ ಪಾತ್ರ, ಪ್ರಪಂಚ ಪರೀಕ್ಷೆ ನಾಟಕದಲ್ಲಿ ಸವಾರನ ಪಾತ್ರ ಹಾಗೂ ಹದಗೆಟ್ಟ ಹೈದರಾಬಾದ ನಾಟಕದಲ್ಲಿ ಭಟಜೀ ಪಾತ್ರ ಮಾಡಿದ್ದಾರೆ.

ಪಾರ್ವತಿ ಸತ್ವಪರೀಕ್ಷೆ, ಹದಗೆಟ್ಟ ಹೈದರಾಬಾದ, ಹೊಸ ಸಂಸಾರ, ಬಾಲಚಂದ್ರ, ದೇವರಿಗೆ ನೆನಪಿಲ್ಲ (ದುಡ್ಡಿನ ದುರಾಸೆ), ಅತ್ತೆ ಸೊಸೆ, ದೈವಚಿತ್ರ, ಮಂಗಳಗೌರಿ, ಭಕ್ತ ಮಾರ್ಕಂಡೇಯ ಮತ್ತು ಪ್ರಪಂಚ ಪರೀಕ್ಷೆ ನಾಟಕಗಳನ್ನು ನಿರ್ದೇಶನ ಮಾಡಿ ಕಲಿಸಿದ್ದಾರೆ. ನಾಟಕಗಳಲ್ಲಿ ಸಂದರ್ಭಾನುಸಾರವಾಗಿ ಹಾಡುಗಳನ್ನು ಸ್ವತಃ ಬರೆದು ಹಾಡಿದ್ದಾರೆ. ಕಲಾವಿದ, ಪ್ರೇಕ್ಷಕರಿಂದ ಮೆಚ್ಚುಗೆ ಗಳಿಸಿದ್ದಾರೆ.

ಗುರುಗಾನ ಸ್ತುತಿ, ಗುರುಗಾನ ಪ್ರಭೆ, ರಾಚೋಟೇಶ್ವರ ಪುರಾಣ, ಭಕ್ತಿ ಪುಷ್ಪಾಂಜಲಿ, ಹೈದರಾಬಾದ ಕರ್ನಾಟಕ ಜಲಿಯನ್ ವಾಲಾಬಾಗ್ ಗೋರ್ಟಾ ಎಂಬ ಕೃತಿಗಳನ್ನು ರಚಿಸಿದ್ದಾರೆ. ಕರ್ನಾಟಕ ಲಲಿತಕಲಾ ಅಕಾಡೆಮಿ ಸೇರಿದಂತೆ ಹಲವಾರು ಸಂಘ ಸಂಸ್ಥೆಗಳು ಇವರಿಗೆ ಸನ್ಮಾನಿಸಿ ಗೌರವಿಸಿವೆ.

## ರಾಜಶೇಖರ ಮಠಪತಿ

ರಾಜಶೇಖರ ವಿರುಪಾಕ್ಷಯ್ಯ ಮಠಪತಿಯವರು ಗೋರ್ಟಾ ಗ್ರಾಮದ ಶ್ರೀಮತಿ ನೀಲಮ್ಮ ಶ್ರೀ ವಿರುಪಾಕ್ಷಯ್ಯ ಮಠಪತಿ ಮೇಲಗಲ್ಲಿ ಅವರ ಮಗನಾಗಿ ೧೯೬೫ರಲ್ಲಿ ಜನಿಸಿದ್ದಾರೆ. ಕರ್ನಾಟಕ ಸಾರಿಗೆ ಸಂಸ್ಥೆಯಲ್ಲಿ ಸೇವೆ ಸಲ್ಲಿಸುತ್ತಲೇ ಹಲವಾರು ನಾಟಕಗಳಲ್ಲಿ ನಟನಾಗಿ ಪಾತ್ರ ಮಾಡಿದ್ದಾರೆ. ಉತ್ತಮ ತಬಲಾವಾದಕರಾಗಿ ರಂಗಸೇವೆ ಸಲ್ಲಿಸಿದ್ದಾರೆ. ಹಸಿರುಬಳೆ, ದೇವರಿಗೆ ನೆನಪಿಲ್ಲ ಮುಂತಾದ ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಸಂಗೀತ ರುದ್ರಾಭಿಷೇಕದಲ್ಲೂ ಮಹತ್ವದ ಕಾರ್ಯ ನಿರ್ವಹಿಸುತ್ತ ಜನಮೆಚ್ಚುಗೆ ಪಡೆದಿದ್ದಾರೆ.

ಕೋಹಿನೂರವಾಡಿಯ, ಶರಣಪ್ಪಾ ಶಾಮಣ್ಣಾ ಕುನಾಳೆ (ಜನನ-೧೯೭೪) ಸಾಕ್ಷರತಾ ಪ್ರೇರಕರಾಗಿ ಸೇವೆ ಸಲ್ಲಿಸುತ್ತಾ ಹಲವಾರು ಬೀದಿ ನಾಟಕಗಳಲ್ಲಿ ಹಾಡುಗಾರರಾಗಿ, ಕಲಾವಿದರಾಗಿ ಭಾಗವಹಿಸಿರುವರು.

ರಾಂಪೂರನ ತಿಪ್ಪಣ್ಣಾ ಬಂಡೆಪ್ಪಾ ರಾಂಪೂರ (ಜನನ-೧೯೬೯) ನಾಟಕ ಕಲಾವಿದರು. ಸಾಕ್ಷರತಾ ಸಮಿತಿ ಸಂಯೋಜಕರಾಗಿ ಸೇವೆ ಮಾಡುತ್ತಿರುವರು. ಹಲವಾರು ಬೀದಿ ನಾಟಕಗಳಲ್ಲಿ ಭಾಗವಹಿಸಿರುವರು.

ಆಲಗೂಡನ ಸರಸ್ವತಿ ಸಿದ್ರಾಮಪ್ಪಾ (ಜನನ-೧೯೭೫) ಇವರು ಜಾನಪದ ಹಾಡುಗಾರರಾಗಿದ್ದು, ಸಾಕ್ಷರತಾ ಸಮಿತಿಯ ಸಹ ನೋಡಲ್ ಸಹ ಪ್ರೇರಕರಾಗಿ ಸೇವೆ ಮಾಡುತ್ತಲಿರುವರು. ಬೀದಿ ನಾಟಕಗಳಲ್ಲೂ ಭಾಗವಹಿಸಿರುವರು.

# ಭಾಲ್ಕಿ ತಾಲೂಕು



## ರಮೇಶ ಶ್ರೀಮಂತ ಖರಾಬೆ

ಔರಾದ ತಾಲೂಕಿನ ಭಾತಂಬ್ರಾದ ಕಲಾವಿದ ರಮೇಶ ಶ್ರೀಮಂತ ಖರಾಬೆ (ಜನನ-೧೯೭೩) ಬಾಲ್ಯದಿಂದಲೂ ರಂಗಭೂಮಿಯ ಒಡನಾಟದಲ್ಲಿದ್ದವರು. ಹಿರಿಯರೊಂದಿಗೆ ಹಾಡಕ್ಕಿಗಳ ಪ್ರಭಾವದಿಂದ ಹಲವಾರು ಸಾಮಾಜಿಕ ನಾಟಕಗಳಲ್ಲಿ ಪಾತ್ರ ವಹಿಸಿರುವರು. ಬಂಗಾರದ ಮನುಷ್ಯ, ಕುಂಟ ಕುಲಕರ್ಣಿ ತುಂಟ ತಳವಾರ, ತಾಯಿಗೆ ತಕ್ಕ ಮಗ,

ಸತ್ಯ ಎಲ್ಲಿದೆ ಕೈಎತ್ತಿ ಹೇಳು, ರತ್ನ ಮಾಂಗಲ್ಯ, ಅಣ್ಣ ತಂಗಿ, ಎಚ್ಚರ ತಂಗಿ ಎಚ್ಚರ, ರಕ್ತ ದೀಪ, ರೈತನ ರಕ್ತ, ಭಲೇ ಮಗಳು ಪ್ರಮುಖ ನಾಟಕಗಳಾಗಿವೆ.

ಖಿತಗಾಂವನ ಬಸವತೀರ್ಥ ರಾಚಯ್ಯಾ, ಹುಲ್ಯಾಳದ ಬಲವಂತ ಬಿರಾದಾರ, ಗಣಪತರಾವ ಹಟಕಾರ, ಬಾಬುರಾವ ರಾಜೋರೆ, ಭೂಪಾಳಗಡದ ಅಮೃತರಾವ ಉದಗಿರ, ಹೆಡಗಾಪೂರದ ಚೆನ್ನಪ್ಪಾ ಯರನಾಳೆ, ಗಡಿಕುಶನೂರಿನ ಅಡವೆಪ್ಪ ಪಟ್ನೆ ಮುಂತಾದ ಕಲಾವಿದರು ಸಂಗೀತದ ಸಾಥ ನೀಡುವವರಾಗಿರುವರು.

ಹಲಬರ್ಗಾದ ಕಾಶಿನಾಥ ಶಂಕರ ಸೋನೆ (ಜನನ-೧೯೮೧) ಇವರು ಕಲಾವಿದರಾಗಿದ್ದು ಹಲವಾರು ಬೀದಿ ನಾಟಕಗಳಲ್ಲಿ ಅಭಿನಯಿಸಿರುವರು. ಹಲವಾರು ಏಕಪಾತ್ರಾಭಿನಯಗಳನ್ನೂ ಮಾಡಿರುವರು.

ಭಾಲ್ಕಿಯ ಓಂಪ್ರಕಾಶ ರಘುನಾಥ ರೊಟ್ಟೆಯವರು (ಜನನ-೧೯೬೪) ಸಮಾಜ ಸೇವೆ, ಉತ್ಸಾಹಿ ಕಲಾವಿದ, ಸಾಂಸ್ಕೃತಿಕ ಕಾರ್ಯಕ್ರಮಗಳ ಸಂಘಟಕರಾಗಿ, ನಾಟಕಗಳನ್ನು ಮಾಡುತ್ತಾ, ಮಾಡಿಸುತ್ತಾ ಬಂದಿರುವರು.

## ಹುಮನಾಬಾದ ತಾಲೂಕು

ಬೇವಿನಚಿಂಚೋಳಿಯ ಗಿರೆಪ್ಪಾ ಜವಾದಾರ ಅವರು ಸಣ್ಣಾಟ, ಬಯಲಾಟಗಳನ್ನು ಕಲಿಸುವ ಮಾಸ್ಟರ್ ಆಗಿದ್ದರು, ಇವರ ಜೊತೆಗೆ, ಮುಸ್ತಾಪೂರದ ಕಾಶಪ್ಪಾ ಮಾಣಿಕಪ್ಪಾ ಪರಶೆಟ್ಟಿಯವರು (ಜನನ-೧೯೩೨) ಹಲವಾರು ಬಯಲಾಟ, ಸಾಮಾಜಿಕ ನಾಟಕಗಳಲ್ಲಿ ಅಭಿನಯಿಸಿರುವರು. ಕೇಶವರಾವ ವಾಘಮಾರೆಯವರು, ದುಬಲಗುಂಡಿಯ ಗುರಪ್ಪಾ ನೀಲಗಿ ಯವರು ನಾಟಕಗಳಿಗೆ ಸಂಗೀತ ತಬಲಾ ನುಡಿಸಿ ಕಲಾ ಸೇವೆ ಮಾಡಿರುವರು.

ಹುಮನಾಬಾದನ ಗಣಪತಿ ವೈಜಿನಾಥ ನಂಜಿರೆ (ಜನನ-೧೯೭೩) ಆರ್ಬಿಟ್ ಎಚ್.ಆರ್.ಡಿ.ಯಲ್ಲಿ ಸೇವೆ ಸಲ್ಲಿಸುತ್ತಿರುವರು. ಕಲಾವಿದರಾಗಿ ಹಲವಾರು ಬೀದಿ ನಾಟಕಗಳಲ್ಲಿ ಅಭಿನಯಿಸಿರುವರು

ಚಾಮನಗರದ ದೇವಾನಂದ ಭೀಮರಾವ ಜಾನಾಪುರೆ (ಜನನ-೧೯೭೪) ಕಲಾವಿದರಾಗಿ, ಗಾಯಕರಾಗಿ ರಂಗಗೀತೆಗಳನ್ನು ಹಾಡುತ್ತಾ ಬಂದಿರುವರು.

# ಹವ್ಯಾಸಿ ಕಲಾವಿದೆಯರು

## ೧. ಶ್ರೀಮತಿ ಸವಿತಾ ದೇವೆಂದ್ರ ಕಮಲ ಬೀದರ:

ಎಪ್ಪತ್ತರ ದಶಕದಲ್ಲಿ ಹವ್ಯಾಸಿ ನಾಟಕ ತಂಡಗಳಲ್ಲಿ ಮಹಿಳೆಯರು ಭಾಗವಹಿಸುವದು, ಸಾಹಸದ ವಿಷಯ. ಆ ಸಂದರ್ಭದಲ್ಲಿ ಶ್ರೀಮತಿ.ಸವಿತಾ ದೇವೇಂದ್ರ ಕಮಲ ಇವರು ಅಕ್ಷಯ ನಾಟಕ ತಂಡದಿಂದ ಮಾಡಿದ ನಾಟಕಗಳಾದ ರೊಟ್ಟಿ ಋಣ, ಬಾಕಿ ಇತಿಹಾಸ, ಕುರಿ, ಜೈಸಿಧನಾಯಕ ಮತ್ತು ಸಮುದಾಯತಂಡದ, ಸದ್ದು ವಿಚಾರಣೆ ನಡೆಯುತ್ತಿದೆ, ಜಯತೀರ್ಥ ಜೋಶಿಯವರು ಮಾಡಿಸಿದ ಶಿಬಿರದಲ್ಲೂ ಪಾಲ್ಗೊಂಡಿದ್ದರು. ಹೀಗೆ ಹಲವಾರು ನಾಟಕಗಳಲ್ಲಿ ಗಮನಾರ್ಹವಾಗಿ ನಟಿಸಿರುವರು.



## ೨. ಶ್ರೀಮತಿ ಅರುಂಧತಿ ಚಾಂದಕವಠೆ

ಕಲಾವಿದೆ, ಕವಯತ್ರಿ, ಕಥೆಗಾರ್ತಿ, ನಾಟಕಕಾರರಾಗಿ ಸಾಹಿತ್ಯ ಸೇವೆ ಮಾಡುತ್ತಿರುವ, ಶ್ರೀಮತಿ ಅರುಂಧತಿ ಚಾಂದಕವಠೆ, (ಜನನ-೧೯೬೦) ಇವರು ತಮ್ಮ ಮಕ್ಕಳು, ಕುಟುಂಬ ಸಮೇತ ತಾವೇ ಬರೆದ ನಾಟಕಗಳಾದ, ಇದ್ದಿಲು ಮಡಿ, ಪ್ರಹಸನ ಸ್ವದೇಶಿ, ಮತ್ತು ಮನೆಮನೆಯ ಕಥೆಯಲ್ಲಿ ನಟಿಸಿರುವರು. ಮಂಗನತೀರ್ಪು, ಪರಿಸರ, ಮಕ್ಕಳನಾಟಕಗಳನ್ನೂ ರಚಿಸಿರುವರು. ಇವರ ಬಾಂಧವ್ಯ ಕಥಾ ಸಂಕಲನವೂ ಪ್ರಕಟವಾಗಿದೆ. ಸಮುದಾಯ ನಾಟಕ ತಂಡದಲ್ಲಿ, ಒಂದು ಲೋಕ ಕಥೆ, ಮತ್ತು ರಾವಿ ನದಿಯ ದಂಡೆಯಲ್ಲಿ ಬಾನುಲಿ ನಾಟಕದಲ್ಲೂ ಅಭಿನಯಿಸಿರುವರು, ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಪತಿ, ಚಂದ್ರಗುಪ್ತ ಚಾಂದಕವಠೆ ಮತ್ತು ಮಕ್ಕಳು ಇಡೀ ಕುಟುಂಬ ರಂಗ ಕುಟುಂಬವಾಗಿ ಮನೆ ಮನೆಯ ಕಥೆ ನಾಟಕವನ್ನು ಮಾಡಿ, ರಂಗಭೂಮಿಗೆ ಬಾಂಧವ್ಯದ ಬೆಸುಗೆ ಮೂಡಿಸಿರುವರು.



## ೩. ಶ್ರೀಮತಿ ನೀಲಾ .ಕೆ

ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಅಧ್ಯಕ್ಷರಾಗಿ, ಸದ್ಯ ಕಲಬುರಗಿಯಲ್ಲಿ ವಾಸವಾಗಿರುವ ಕವಯತ್ರಿ,

ಕಥೆಗಾರ್ತಿ, ಹೋರಾಟಗಾರ್ತಿ, ಶ್ರೀಮತಿ ನೀಲಾ.ಕೆ, ಬೀದರ ಜಿಲ್ಲೆಯ ಬಸವಕಲ್ಯಾಣದವರು. ಬೀದರ ಸಮುದಾಯದ, ಬಸವರಾಜ ಕೊಡಗೆಯವರ ನಿರ್ದೇಶನದಲ್ಲಿ ಮೂಡಿಬಂದ ತೇಜಸ್ವಿಯವರ 'ತಬರನ ಕಥೆ' ನಾಟಕದಲ್ಲಿ, ಪತಿ ಕೊದಂಡರಾಮ ಅವರು ತಬರನಾಗಿ, ನೀಲಾ ತಬರನ ಹೆಂಡತಿಯಾಗಿ ಮನೋಜ್ಞವಾಗಿ ಅಭಿನಯಿಸಿದರು. ಬರಗೂರು ರಾಮಚಂದ್ರಪ್ಪನವರ 'ಕೋಟೆ' ನಾಟಕದಲ್ಲೂ ದಂಪತಿಗಳಾಗಿ ಅಭಿನಯಿಸಿದರು. ಬಿ. ಜಯಶ್ರೀಯವರ 'ನಾಗಮಂಡಲ 'ನಾಟಕದ ಕುರುಡವ್ವ,' ಮೂಲ ಉತ್ಪಲದತ್ತರ, ಎಂ.ಪಿ. ಪ್ರಕಾಶರ ಅನುವಾದದ 'ಸೂರ್ಯ ಶಿಕಾರಿ' ನಾಟಕಗಳಲ್ಲಿಯೂ ತಮ್ಮ ನಟನೆಯಿಂದ ಗಮನ ಸೆಳೆದಿರುವರು.



## ೪. ಶ್ರೀಮತಿ ಭಾರತಿ ವಸ್ತ್ರದ

ಹಿರಿಯ ಸಾಹಿತಿ, ಕವಯಿತ್ರಿ, ಕಲಾವಿದೆಯಾಗಿ ಸಾಂಸ್ಕೃತಿಕ ಲೋಕದಲ್ಲಿ ತೊಡಗಿಸಿಕೊಂಡಿರುವ. ಶ್ರೀಮತಿ. ಭಾರತಿ ವಸ್ತ್ರದ, ಅವರು ಶಿಕ್ಷಕಿಯಾಗಿ, ಮುಖ್ಯೋಪಾಧ್ಯಾಯಿನಿ ಯಾಗಿ ಮತ್ತು ಜಿಲ್ಲಾ ಸಾಕ್ಷರತಾ ಸಮಿತಿಯ ಕಾರ್ಯದರ್ಶಿಯಾಗಿ, ಶಿಕ್ಷಣದ ಜೊತೆಗೆ ರಂಗಭೂಮಿಗೂ ಸೇವೆ ಸಲ್ಲಿಸಿರುವರು. ಇವರು ಅಚ್ಚುಕಟ್ಟಾಗಿ ಕಾರ್ಯಕ್ರಮ ನಡೆಸಿ ಕೊಡುವಲ್ಲಿ ಎತ್ತಿದ ಕೈ, ಸುಂದರವಾಗಿ ನಿರೂಪಣೆ ಮಾಡುವಲ್ಲಿ ಜನಮೆಚ್ಚುಗೆ ಪಡೆದಿರುವರು. ಜನಪರ ಅಧ್ಯಯನ ವೇದಿಕೆ ಆಯೋಜಿಸಿದ್ದ, ಡಾ. ಅನೀಲಕುಮಾರ ಮುಗಳಿ ರಚನೆಯ ಆಲದ ಮರ ನಾಟಕದಲ್ಲಿ ಗೌಡಶಾನಿಯಾಗಿ ತಮ್ಮ ಪ್ರತಿಭೆ ಮೆರೆದಿರುವರು. ಮತ್ತು ಇದೇ ನಾಟಕ ಚಂದ್ರಗುಪ್ತ ಚಾಂದಕವತೆ ನಿರ್ದೇಶನದಲ್ಲಿ ಅಭಿನಯ ಗಂಗೋತ್ರಿ ತಂಡದಿಂದ, ಆಕಾಶವಾಣಿ ಕೇಂದ್ರ ಕಲಬುರ್ಗಿಯಿಂದ ಪ್ರಸಾರಗೊಂಡಿತು. ಆಕಾಶವಾಣಿ ಕಲಬುರ್ಗಿಯ ಬಿ ಹೈ ಕಲಾವಿದರಾಗಿ ಹಲವಾರು ಬಾನುಲಿ ನಾಟಕಗಳಲ್ಲೂ ಅಭಿನಯಿಸಿರುವರು.



## ೫. ಶ್ರೀಮತಿ ರಶ್ಮಿ ತಿಳಿ

ಸದ್ಯ ಪ್ರಜಾವಾಣಿಯ ವರದಿಗಾರ್ತಿಯಾಗಿ, ಬೆಂಗಳೂರಿನಲ್ಲಿ ಸೇವೆ ಸಲ್ಲಿಸುತ್ತಿರುವ ಶ್ರೀಮತಿ ರಶ್ಮಿ ತಿಳಿ

ಇವರು ಬಾಲ್ಯದಿಂದಲೇ ತಮ್ಮ ಬೆರಗಿನ ಕವಿತೆಯೊಂದಿಗೆ ಚುರುಕು ಮುಟ್ಟಿಸುತ್ತ ನಟನೆಯಲ್ಲೂ ತನ್ನ ಪ್ರಭುದ್ದತೆಯನ್ನು ಮೆರೆದವಳು. ಸಮುದಾಯ ತಂಡದ ಬಸವರಾಜ ಕೊಡಗೆ ನಿರ್ದೇಶನದಲ್ಲಿ ಮೂಡಿಬಂದ 'ಸಿಂಹಾಸನ ಖಾಲಿ ಇದೆ' ನಾಟಕ, ಸೂರ್ಯ ಶಿಕಾರಿ, ಆಲದ ಮರ ಮುಂತಾದ ನಾಟಕಗಳಲ್ಲಿ ಭಾಗವಹಿಸಿರುವರು. ಆಕಾಶವಾಣಿ ಕಲಬುರ್ಗಿಯ ಬಿ ಹೈ ಕಲಾವಿದರಾಗಿ ಹಲವಾರು ಬಾನುಲಿ ನಾಟಕಗಳಲ್ಲೂ ಅಭಿನಯಿಸಿರುವರು.

## ೬. ಶ್ರೀಮತಿ ಸಪನಾ ಬೆನೆಟ್, ಬೀದರ

ಸದ್ಯ ಸರಕಾರಿ ಆಸ್ಪತ್ರೆ ಶುಶ್ರೂಷಕಿಯಾಗಿ ಸೇವೆ ಸಲ್ಲಿ ಸುತ್ತಿರುವ ಶ್ರೀಮತಿ ಸಪನಾ ಬೆನೆಟ್ ಇವರು ಕಲಾವಿದೆಯಾಗಿ ಪ್ರಮುಖ ಪಾತ್ರಗಳಲ್ಲಿ ನಟಿಸಿರುವರು. ಬೀದರ ಸಮುದಾಯದ, ಒಂದು ಲೋಕ ಕಥೆ, ನಡುಬೇಸಿಗೆಯ ಇರುಳು ಸವಿಗನಸು, ಸಿಂಹಾಸನ ಖಾಲಿ ಇದೆ, ಅಗ್ನಿ ಮತ್ತು ಮಳೆ ಮುಂತಾದ ನಾಟಕಗಳಲ್ಲಿ ಉತ್ತಮವಾಗಿ ಅಭಿನಯಿಸಿ, ನಾಟಕದ ಯಶಸ್ಸಿಗೆ ಸಹಕಾರಿಯಾಗಿರುವರು.

## ೭. ಶ್ರೀಮತಿ ಜಯಶ್ರೀ, ಬೀದರ

ಶ್ರೀಮತಿ ಜಯಶ್ರೀ ಯವರು ಶಿಕ್ಷಕಿಯಾಗಿ ಸೇವೆಸಲ್ಲಿಸುತ್ತಿದ್ದು, ಉತ್ತಮ ಕಲಾವಿದೆಯಾಗಿ ಹಲವಾರು ನಾಟಕಗಳಲ್ಲಿ ಅಭಿನಯಿಸಿರುವರು. ಸಮುದಾಯದ ಒಂದು ಲೋಕ ಕಥೆ, ನಡು ಬೇಸಿಗೆಯ ಇರುಳು ಸವಿಗನಸು, ಅಭಿನಯ ಗಂಗೋತ್ರಿ ಹವ್ಯಾಸಿ ತಂಡದ ಬೆಳಕಿನೆಡೆಗೆ, ಸ್ವಾಮಿ, ಖರೋಖರ, ಸಂಗೊಳ್ಳಿ ರಾಯ ಸರದಾರ, ನಾಟಕಗಳು ಇವರ ಅಭಿನಯಕ್ಕೆ ಸಾಕ್ಷಿಯಾಗಿ ಅಭೂತಪೂರ್ವ ಯಶಸ್ಸನ್ನು ಕಂಡಿವೆ.



## ೮. ಶ್ರೀಮತಿ ಪಾರ್ವತಿ ವಿಜಯಕುಮಾರ ಸೋನಾರೆ, ಬೀದರ

ಆರೋಗ್ಯ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ, ಶ್ರೀಮತಿ ಪಾರ್ವತಿ ಚೆಟ್ಟಿಂಗರಾಯ ಢಪಳಾಪೂರ (ಜನನ-೧೯೭೪) ಅಭಿಜಾತ ಕಲಾವಿದೆ, ಕವಯಿತ್ರಿ, ಕಥೆಗಾರ್ತಿ, ನಾಟಕ, ಬೀದಿನಾಟಕ, ಏಕಪಾತ್ರಾಭಿನಯ, ಕಿರುಚಿತ್ರ, ಕವನ ವಾಚನ ಎಲ್ಲದರಲ್ಲೂ ಎತ್ತಿದ ಕೈ. ಸಾಕ್ಷರತಾ ಆಂದೋಲನದ ಬೀದಿ ನಾಟಕಗಳಾದ, 'ಹುಡುಗಿ ಓದಿ ಏನ್ಮಾಡಬೇಕು', 'ವರದಕ್ಷಿಣೆ', ಆಕಾಶ ಬುಟ್ಟಿ, ನಮ್ಮೂರ ಶಾಲೆ, ಮಾಧವಿ' ಮುಂತಾದವುಗಳಲ್ಲಿ ಮುಖ್ಯ ಭೂಮಿಕೆಯಲ್ಲಿ ನಟಿಸಿದ್ದು, ಜಿಲ್ಲೆಯಾದ್ಯಂತ ಪ್ರದರ್ಶನ ನೀಡಿರುವರು. ಏಕ

ಪಾತ್ರಾಭಿನಯಗಳಾದ 'ಕ್ರಾಂತಿ ವೀರ ಬಲವಂತ ಫಡಕೆ' ಮತ್ತು ಕಿತ್ತೂರ ರಾಣಿ ಚೆನ್ನಮ್ಮಾ, ದೇವದಾಸಿ, ಮಾಧವಿ, ಮಹಿಳೆ'ಯಲ್ಲಿ ಅದ್ಭುತವಾಗಿ ಅಭಿನಯಿಸಿರವರು. ಸಮುದಾಯ ಸಂಘಟನೆಯ ನಾಟಕಗಳಾದ ಮಾಲತೇಶ ಬಡಿಗೇರ ನಿರ್ದೇಶನದ 'ಗುಡಸಲಿನ ಗುಡದಾಳಿ', ಡಾ. ಅನೀಲಕುಮಾರ ಮುಗಳಿ ನಿರ್ದೇಶನದ 'ಸೂರ್ಯ ಶಿಕಾರಿ, ಬಿ. ಜಯಶ್ರೀಯವರ 'ನಾಗಮಂಡಲ', ಅಲ್ಲದೇ ಹಸಿವು, ದೇವದಾಸಿ ನಾಟಕಗಳಲ್ಲಿ ಗಮನಾರ್ಹ ಅಭಿನಯ ನೀಡಿರುವರು. ಸಣ್ಣ ಕಥೆಯಾಧರಿತ 'ಚಾಂದನಿ' ಕಿರುಚಿತ್ರ, ಶ್ರೀ ಮಹೇಶ ಪಾಟೀಲರ 'ದಿ ಬ್ಲೈಂಡ್ ಫೇತ್' ಕಿರುಚಿತ್ರದಲ್ಲಿ ಪ್ರಬುದ್ಧ ಅಭಿನಯ ನೀಡಿರುವರು. ಬಸವಕಲ್ಯಾಣದಲ್ಲಿ ಚಿತ್ರಿತವಾದ ಅಕ್ಕ ಚಲನಚಿತ್ರದಲ್ಲೂ ಪಾತ್ರವಹಿಸಿರುವರು. ಪತಿ ಶ್ರೀ ವಿಜಯಕುಮಾರ ಸೋನಾರೆಯವರ ಸಾಮಾಜಿಕ ಹೋರಾಟದಲ್ಲಿ, ತಾಳಮೇಳದಂತೆ ಈ ಜೋಡಿಯ ಜುಗಲ್ ಬಂದಿ ಮೆಚ್ಚುವಂಥದ್ದು.



## ೯. ಶ್ರೀಮತಿ ತೇಜಸ್ವಿ ಚಾಂದಕವತೆ:

ಬಾಲ್ಯದಿಂದಲೇ ನಾಟಕದ ವೇದಿಕೆಯಲ್ಲಿ ಬೆಳೆದುಬಂದು, ಸ್ನಾತಕೋತ್ತರ ಪದವಿ ಮುಗಿಸಿ ಪ್ರೌಢ ಶಾಲಾ ಶಿಕ್ಷಕಿಯಾಗಿ ಸೇವೆ ಸಲ್ಲಿಸುತ್ತಿರುವ, ಶ್ರೀಮತಿ ತೇಜಸ್ವಿ ಚಾಂದಕವತೆ, (ಜನನ–೧೯೮೩) ನಾಟಕಗಳ ರಂಗ ತಾಲೀಮಿನಲ್ಲಿ ಎಲ್ಲ ಪಾತ್ರಧಾರಿಗಳ ಮಾತುಗಳನ್ನು ತಪ್ಪಿಲ್ಲದೇ ಹೇಳುತ್ತ, ಪ್ರಾಂಪ್ಟರ್ ಆಗಿ ತನ್ನ ಆಸಕ್ತಿ ತೋರಿಸುತ್ತಿದ್ದಳು. ಸರಸ್ವತಿ ಶಾಲೆಯಲ್ಲಿ, ಅರುಣ ವರ್ಗದಿಂದ, ೧೦ನೇವರೆಗೆ ತಪ್ಪದೇ'ಸಂಗೊಳ್ಳಿ ರಾಯಣ್ಣ ಕರ್ಣ, ದುರ್ಯೋಧನ, ಕಿತ್ತೂರು ರಾಣಿಚೆನ್ನಮ್ಮ, ಝಾಂಸಿ ರಾಣಿ ಲಕ್ಷ್ಮೀಬಾಯಿ, ಸುಭಾಶ್ಚಂದ್ರ ಭೋಸ್, ಸ್ವಾಮಿ ವಿವೇಕಾನಂದ ಮುಂತಾದ ಏಕಪಾತ್ರಾಭಿನಯದಿಂದ ಎಲ್ಲರ ಮೆಚ್ಚುಗೆಪಡೆದವಳು.

ಮಕ್ಕಳ ನಾಟಕಗಳಾದ 'ಬೆಳೆದವರು, ಪರಿಸರ, ಇದ್ದಿಲು ಮಡಿ ಪ್ರಹಸನ, ಹೆತ್ತೊಡಲು, ಮಂಗನ ತೀರ್ಪು, ಮನೆ ಮನೆಯ ಕಥೆ' ಮುಂತಾದವುಗಳು. ಬೀದರ ಸಮುದಾಯ ತಂಡ, ಅಭನಯ ಗಂಗೋತ್ರೀ ತಂಡದಿಂದ ಒಂದು ಲೋಕ ಕಥೆ, ಕೋಟೆ, ಜಾತ್ರೆ, ಕೊಡೆಗಳು. ಮುಂತಾದ ನಾಟಕಗಳಲ್ಲದೇ, 'ಬೆಟ್ಟಕ್ಕೆ ಚಳಿಯಾದರೆ' ನಾಟಕದಲ್ಲಿ ನಟಿಸಿರುವಳು, ಬೀದರ, ಬೆಂಗಳೂರು ದೂರದರ್ಶನದಿಂದಲೂ ಪ್ರಸಾರವಾಗಿದೆ. ನಾಟಕಗಳಲ್ಲಿ ಬಾಲ ಪಾತ್ರಧಾರಿಯಾಗಿ ನಟಿಸಿರುವಳು.

ಯುವತಿಯಾಗಿ 'ಸಿಂಹಾಸನ ಖಾಲಿ ಇದೆ', ಕಾರ್ನಾಡರ ಅಗ್ನಿ ಮತ್ತು ಮಳೆ

ನಾಟಕದಲ್ಲಿ ನಿತ್ತಿಲೆಯ ಪಾತ್ರದಲ್ಲಿ ನಾಟಕಕ್ಕೆ ಜೀವ ತುಂಬಿದವರು. ಆಕಾಶವಾಣಿ ಕಲಬುರ್ಗಿಯಲ್ಲಿ 'ರಾವಿ ನದಿಯ ದಂಡೆಯಲ್ಲಿ' ನಾಟಕದಲ್ಲಿ ಅಭಿನಯಿಸಿರುವರು. ಶ್ರೀ ಮಹೇಶ ಪಾಟೀಲರ 'ದಿ ಬ್ಲೈಂಡ್ ಫೇತ್' ಕಿರುಚಿತ್ರದಲ್ಲಿ ಪ್ರಬುದ್ಧ ಅಭಿನಯ ನೀಡಿರುವರು.



## ೧೦. ಡಾ ತರಂಗಿಣಿ ಚಾಂದಕವಠೆ:

ಒಂದು ವರ್ಷಕ್ಕೆ 'ಒಂದು ಲೋಕ ಕಥೆ' ನಾಟಕದ ಕೈಗೂಸಾಗಿ ರಂಗ ಮಂಚವನ್ನೇರಿದ ಡಾ. ತರಂಗಿಣಿ ಚಾಂದಕವಠೆ ಎಂ.ಡಿ. (ಆಯರ್ವೇದ) (ಜನನ-೧೯೮೫) ನಾಟಕಗಳ ತಾಲೀಮಿನ ಪರಿಸರದಲ್ಲಿ ಅಂಬೇಗಾಲಿಟ್ಟವಳು. ಬೆಳೆದಂತೆ ಶಾಲೆಯಲ್ಲಿ ವಾರ್ಷಿಕೋತ್ಸವದಲ್ಲಿ ತನ್ನ ಏಕಪಾತ್ರಾಭಿನಯಗಳಾದ, ಕಿತ್ತೂರು ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ, ಝಾಂಸಿ ರಾಣಿ ಲಕ್ಷ್ಮಿಬಾಯಿ, ಮುಂತಾದವುಗಳಲ್ಲಿ ಎಲ್ಲರ ಮೆಚ್ಚುಗೆ ಪಡೆದವಳು. ಮಕ್ಕಳಿಗಾಗಿ ಆಯೋಜಿಸಿದ ರಂಗ ಶಿಬಿರದಲ್ಲಿ, ಬೆಳೆದವರು, ಪರಿಸರ, ಇದ್ದಿಲು ಪುಡಿ ಪ್ರಹಸನ, ಹೆತ್ತೊಡಲು, ಮಂಗನ ತೀರ್ಪು, ಮನೆ ಮನೆಯ ಕಥೆ, ಮುಂತಾದ ನಾಟಕಗಳಲ್ಲದೇ, 'ಬೆಟ್ಟಕ್ಕೆ ಚಳಿಯಾದರೆ' ನಾಟಕ, ಬೀದರ, ಬೆಂಗಳೂರು ದೂರದರ್ಶನದಿಂದಲೂ ಪ್ರಸಾರವಾಗಿದೆ



## ೧೧. ಶ್ರೀಮತಿ ರೂಪಾ ಸಂಗಮಕರ

ಶ್ರೀಮತಿ ರೂಪಾ ಸಂಗಮಕರ ಅವರು ಮುಖ್ಯೋಪಾಧ್ಯಾಯಿನಿಯಾಗಿ ಸೇವೆ ಸಲ್ಲಿಸುತ್ತಿರುವರು. ಸಮುದಾಯದ ಬಸವರಾಜ ಕೊಡಗೆ ನಿರ್ದೇಶನದ ಮನಜರ 'ಜಲ' ನಾಟಕದಲ್ಲಿ ಶುಧ್ಧೋದನನ ಮಹಾರಾಣಿಯಾಗಿ ಮನೋಜ್ಞ ಅಭಿನಯ ನೀಡಿರುವರು. ಮತ್ತು ತಮ್ಮ ಪತಿಯೊಡನೆ ದಿ.ಯಶೋದಮ್ಮಾ ಸಿದಬಟ್ಟೆಯವರ ಮಂಗಳಾ ಕಾದಂಬರಿಯ ಮುಖಪುಟಕ್ಕೆ ರೂಪದರ್ಶಿಯಾದವರು. ಹಲವಾರು ನಾಟಕಗಳಲ್ಲಿ ಭಾಗವಹಿಸಿರುವರು.



## ೧೨. ಶ್ರೀಮತಿ ವಿಜಯಲಕ್ಷ್ಮಿ ಸೂರ್ಯಕಾಂತ, ಸುಲೇಪೇಟ

ಶ್ರೀಮತಿ ವಿಜಯಲಕ್ಷ್ಮಿ ಸೂರ್ಯಕಾಂತ ಸುಲೇಪೇಟ ಇವರು, ಗೃಹಿಣಿ (ಜನನ-೧೯೭೫), ಅಕ್ಕ ಅನ್ನಪೂರ್ಣಾ ತಾಯಿಯವರ ನೇತೃತ್ವದ, ಬಸವ ಸೇವಾ ಪ್ರತಿಷ್ಠಾನದಿಂದ ಆಯೋಜಿಸುವ ಶರಣ ಕಲಾ ಲೋಕ ತಂಡದಿಂದ ಮಾಡಿಸಿದ ನಾಟಕಗಳಾದ 'ಅನುಭವ ಮಂಟಪದಲ್ಲಿ ಅಕ್ಕ, ಕಲ್ಯಾಣ ಕತ್ತಲಾಯಿತು, ಉಳವಿಯೆಡೆಗೆ, ಸುರ ಸುಂದರಾಂಗ, ಶಿವಶರಣ ಹರಳಯ್ಯ,' ಅಭಿನಯಿಸಿರುವರು. ಇವರು ಶೆಟ್ಟಿ, ನಾರಾಯಣಕ್ರಮಿತ ಮುಂತಾದ ಗಂಡು ಪಾತ್ರದಲ್ಲೂ ನಟಿಸಿ ಮೆಚ್ಚುಗೆ ಪಡೆದಿರುವರು. ಕೋಲಾಟದಲ್ಲಿಯೂ ಭಾಗವಹಿಸುವರು.

## ೧೩. ಶ್ರೀಮತಿ ಜಯಶ್ರೀ ಮಲ್ಲಿಕಾರ್ಜುನ ಚಟ್ನಳ್ಳಿ

ಶ್ರೀಮತಿ ಜಯಶ್ರೀ ಮಲ್ಲಿಕಾರ್ಜುನ. ಚಟ್ನಳ್ಳಿಯವರು, ಭಾಲ್ಕಿ ತಾಲೂಕಿನ ದುಬಲಗುಂಡಿಯವರು. (ಜನನ-೧೯೭೨), ಗೃಹಿಣಿ, ಇವರು ಕವನಗಳನ್ನು ಬರೆಯುವದರ ಜೊತೆಗೆ, ಅಕ್ಕ ಅನ್ನಪೂರ್ಣಾ ತಾಯಿಯವರ ನೇತೃತ್ವದ, ಬಸವ ಸೇವಾ ಪ್ರತಿಷ್ಠಾನದಿಂದ ಆಯೋಜಿಸುವ ಶರಣ ಕಲಾ ಲೋಕ ತಂಡದಿಂದ ಮಾಡಿಸಿದ ನಾಟಕಗಳಾದ 'ಅನುಭವ ಮಂಟಪದಲ್ಲಿ ಅಕ್ಕ, ಕಲ್ಯಾಣ ಕತ್ತಲಾಯಿತು, ಉಳವಿಯೆಡೆಗೆ, ಸುರ ಸುಂದರಾಂಗ, ಶಿವಶರಣ ಹರಳಯ್ಯ,' ಅಭಿನಯಿಸಿ ಮೆಚ್ಚುಗೆ ಪಡೆದಿರುವರು. ಇವರು ಸಹ ಕೋಲಾಟದಲ್ಲಿಯೂ ಭಾಗವಹಿಸುವರು.

## ೧೪. ಶ್ರೀಮತಿ ಸುನಿತಾ ತೆಲಂಗ

ಉತ್ತಮ ಕಲಾವಿದೆಯಾದ ಸುನಿತಾ ತೆಲಂಗ ವಿದ್ಯಾರ್ಥಿಯಾಗಿದ್ದಾಗಲಿಂದ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸುತ್ತ ಬಂದವರು. ಸಮುದಾಯದ ನಡು ಬೇಸಿಗೆಯ ಇರುಳು ಸವಿಗನಸು, ಸಿಂಹಾಸನ ಖಾಲಿ ಇದೆ, ಪ್ರಸಿಡೆಂಟರಿಗೆ ಪತ್ರ, ನಾಗಮಂಡಲ, ಅಭಿನಯ ಗಂಗೋತ್ರಿಯ ಸಂಗೊಳ್ಳಿಯ ರಾಯ ಸರದಾರ ಮುಂತಾದ ನಾಟಕಗಳಲ್ಲಿ ಪ್ರಬುದ್ಧ ಅಭಿನಯ ನೀಡಿರುವರು.



## ೧೫. ಶ್ರೀಮತಿ ಡಿಲೆಮ್ಮಾ, ಆಣದೂರ

ಕಲಾವಿದೆ ಶ್ರೀಮತಿ ಡಿಲೆಮ್ಮಾ ಇವರು ಬೀದರಿನ ಹತ್ತಿರದ ಆಣದೂರಿನವರು. ಸಾಕ್ಷರತಾ ಸಮಿತಿಯಿಂದ ಆಯೋಜಿಸಿದ ಬೀದಿ ನಾಟಕಗಳ ಮೂಲಕ ರಂಗ ಭೂಮಿಗೆ ಪರಿಚಯವಾದವರು. ಅಂದಿನಿಂದ ಇವರ ಬೀದಿ ನಾಟಕಗಳ ರಂಗ ಪಯಣ ಸಾಗಿ ಬರುತ್ತಲಿದೆ. ಬೀದರ ಸಮುದಾಯದ ಬೀದಿ ನಾಟಕಗಳಲ್ಲೂ ಸಕ್ರೀಯ ವಾಗಿ ಭಾಗವಹಿಸಿರುವರು. ಎಲ್ಲರೊಂದಿಗೆ ಸಹಕಾರ ನೀಡುತ್ತ ಹಳ್ಳಿ ಹಳ್ಳಿಗಳಲ್ಲಿ ಬೀದಿ ನಾಟಕಗಳ ಸಂದೇಶವನ್ನು ಜನ ಸಾಮಾನ್ಯರಿಗೆ ಮುಟ್ಟಿಸುವಲ್ಲಿ ಸಾರ್ಥಕತೆ ಪಡೆದಿದ್ದಾರೆ. ಆಕಾಶ ಬುಟ್ಟಿ, ಗೌರಿಯ ಕನಸು, ಒಬ್ಬ ತರುಣನ ಕಥೆ, ಜ್ಞಾನ ಕಾ ಮಂದಿರ ಸಬಸೆ ಊಂಚಾ, ಮಾಟಾ ಮಂತ್ರ, ಅಕ್ಷರದ ಬೆಳಗಿನಲ್ಲಿ, 'ಹುಡುಗಿ ಓದಿ ಏನ್ಮಾಡಬೇಕು', 'ವರದಕ್ಷಿಣೆ', ನಮ್ಮೂರ ಶಾಲೆ, ಮಾಧವಿ, ಮಾದರಿ ಶಾಲೆ ಹೀಗೆ ಹಲವಾರು ಬೀದಿನಾಟಕಗಳಲ್ಲದೇ ಹವ್ಯಾಸಿ ನಾಟಕಗಳಲ್ಲೂ ಭಾಗವಹಿಸಿರುವರು.

### ಇನ್ನಿತರೆ ಕಲಾವಿದೆಯರು:

ಶ್ರೀಮತಿ ಆಶಾ ಠಾಕೂರ ಹಿರಿಯ ಸಂಗೀತ ಕಲಾವಿದರಾಗಿ, ಒಂದು ಲೋಕ ಕಥೆ, ಮುಂತಾದ ನಾಟಕಗಳಿಗೆ ಸಂಗೀತ ಒದಗಿಸಿದ್ದಾರೆ. ಡಾ. ವಿಶಾಲಾಕ್ಷಿ ಕರೆಡ್ಡಿ, ಹಿರಿಯ ಸಾಹಿತಿ ಡಾ. ಪ್ರೇಮಾ ಸಿರ್ಸೆ ಅವರು ೧೯೮೭ರಲ್ಲಿ ಅಕ್ಕಮಹಾದೇವಿ ಕಾಲೇಜಿನ ವಿದ್ಯಾರ್ಥಿನಿಯರಿಂದ ಡಾ. ಪ್ರಾಣೇಶ ಗುಡೂರ ನಿರ್ದೇಶನದಲ್ಲಿ ಕಿತ್ತೂರ ಚೆನ್ನಮ್ಮ ನಾಟಕದಲ್ಲಿ, ಕುಮಾರಿ. ಗೀತಾ ಕೊಡಗೆ, ರಾಜಶ್ರೀ ಪಾಟೀಲ ಮುಂತಾದವರು ನಟಿಸಿದ್ದರು. ಕುಮಾರಿ ಕಾವ್ಯಶ್ರೀ ಸಿದಬಟ್ಟೆ, ರೇಣುಕಾ, ಪ್ರಭಾ, ಹಂಸಾ ಪಾಟೀಲ, ಭಾನು ಪಾಟೀಲ, ಸುನಿತಾ ಸ್ವಾಮಿ ಇವರು ಒಂದೆರಡು ನಾಟಕಗಳಲ್ಲಿ ಅಭಿನಯಿಸಿರುವರು.

ಸಮುದಾಯದ ನಾಟಕಗಳಲ್ಲಿ ಅನಿತಾ ಪವಾರ,ರೇಖಾ ನವಲಕರ, ವಿಜಯ ಲಕ್ಷ್ಮಿ ಪಾಟೀಲ, ಶ್ರೀಮತಿ ಲಕ್ಷ್ಮಿ ಸಾಗರ, ಬಾಳಮ್ಮಾ ಕಾಂಬಳೆ, ಸಂಗೀತಾ ಕಾಂಬಳೆ, ಝರೆಮ್ಮಾ ವಾಘಮಾರೆ, ಮಾಯಾ ಸೋನಕಾಂಬಳೆ ದೀಪಾಲಿ ಕುಲಕರ್ಣಿ, ಕಾಂಚನಾ ಜಿರೋಬೆ, ಗ್ಲಾಡಿಯಸ್ ಪೀಟರ್ ಶ್ರೀಮತಿ ಶಕುಂತಲಾ ದಂಡಿ, ಮುಂತಾದವರು ಅಭಿನಯಿಸಿರುವರು.

## ನಾಟಕ, ಸಂಗೀತ ಪರಿಕರಗಳು ದೊರೆಯುವ ಸ್ಥಳ:

ನಾಟಕಕ್ಕೆ ಕಲಾವಿದರು ಎಷ್ಟು ಮುಖ್ಯವೋ ಅವರು ತೊಡುವ ವೇಷಭೂಷಣಗಳಿಗೂ, ಅಷ್ಟೇ ಪ್ರಮುಖ ಪಾತ್ರವಿರುವದು. ಪೌರಾಣಿಕ, ಐತಿಹಾಸಿಕ, ಸಾಮಾಜಿಕ ನಾಟಕಗಳಿಗೆ ಬೇಕಾಗುವ ಎಲ್ಲ ತರದ ವೇಷಭೂಷಣ, ಭುಜ ಕೀರ್ತಿ, ಕಿರೀಟ, ಗಧೆ, ಬಿಲ್ಲು ಬಾಣಗಳು, ಅಂಗ ವಸ್ತ್ರಗಳು, ಸಂಗೀತಕ್ಕಾಗಿ ತಬಲಾ, ಪೇಟಿ, ನಾಟಕದ ಸೀನರಿಗಳ ಪರದೆಗಳು, ಒಂದು ಭಂಡಾರವೇ ಬೇಕಾಗುವದು. ಇವೆಲ್ಲಾ ಒಂದೇ ಸ್ಥಳದಲ್ಲಿ ಸಿಗುವದು, ಕಲಾವಿದರಿಗೆ ಸಂತಸದ ಸಂಗತಿ, ಈ ಮೊದಲು ಆಸಕ್ತ ಕಲಾವಿದರು ಇವುಗಳ ಪೂರೈಕೆಯನ್ನು ಮಾಡುತ್ತಿದ್ದರು. ಇತ್ತೀಚಿನ ದಿನಗಳಲ್ಲಿ ಬೇಡಿಕೆ ಕಡಿಮೆಯಾಗಿರುವದರಿಂದ, ಇವರು ಸಹ ಬೇರೆ ವೃತ್ತಿಯತ್ತ ಮುಖ ಮಾಡುವಂತಾಗಿದೆ.

ಬೀದರಿನ ಸಂಗೀತ ಕಲಾವಿದರಾದ ದಿ. ಶ್ರೀಗುರಪ್ಪಾ ಚನ್ನಪ್ಪಾ ನಾನಕೇರಿ (೧೯೦೦-೧೯೭೩) ಇವರು ನಾಟಕಗಳನ್ನು ಕಲಿಸುವ, ಮಾಡಿಸುವ ಮಾಸ್ತರ್ ಆಗಿದ್ದರು. ನಾಟಕಗಳ ಎಲ್ಲ ಪರಿಕರಗಳನ್ನೂ ಸಂಗ್ರಹಿಸಿ ಬಾಡಿಗೆಗೆ ಕೊಡುತ್ತಿದ್ದರು. ನಾಟಕಗಳ ಪರದೆ, ತಬಲಾ, ಕಾಲುಪೇಟಿ, ಭುಜಕಟ್ಟು, ಕಿರೀಟ, ಅಂಗ ವಸ್ತ್ರ ಖಡ್ಗಗಳು, ತಲವಾರಗಳು ಹೀಗೆ ಎಲ್ಲ ತರದ ಪರಿಕರಗಳನ್ನು ಇಟ್ಟುಕೊಂಡವರು. ಇವರ ಪುತ್ರರಾದ ಸಂಗೀತ ಕಲಾವಿದರಾದ ಜಗನ್ನಾಥ ಗುರಪ್ಪಾ ನಾನಕೇರಿಯವರು ಸರಸ್ವತಿ ಸಂಗೀತ ಪರಿಕರಗಳ ಭಂಡಾರವನ್ನು ನಡೆಸುತ್ತಿದ್ದು, ತಬಲಾ, ಹಾರ್ಮೋನಿಯಂ ಮುಂತಾದ ಸಂಗೀತ ಪರಿಕರಗಳ ಮಾರಾಟ ಮತ್ತು ರಿಪೇರಿಯ ಕಾರ್ಯ ಮಾಡುತ್ತಿರುವರು.

ಬೀದರಿನ ಸಿಂಗಾರಬಾಗ ನಲ್ಲಿ ನಾಗಪ್ಪಾ ಹೂಗಾರ ಅವರೂ ನಾಟಕಗಳ ಪರಿಕರಗಳನ್ನು ಬಾಡಿಗೆಗೆ ಕೊಡುತ್ತಿದ್ದರೆಂದು ತಿಳಿದುಬರುವದು.

ಬೀದರಿನ ಜವಾಹರ ಬಜಾರನಲ್ಲಿ ದೇವಜಿರಾವ ಅವರು ನಾಟಕಗಳ ಸಮಗ್ರ ಪರಿಕರಗಳನ್ನು ಸಂಗ್ರಹಿಸಿ ಬಾಡಿಗೆಗೆ ಕೊಡುತ್ತಿದ್ದರು. ಸದ್ಯ ಅವರ ಪುತ್ರರಾದ ನಾಗೇಂದ್ರ ದೇವಜಿರಾವ ಅವರು ಮುಂದುವರೆಸಿರುವರು. ಇತ್ತೀಚೆಗೆ ನಾಟಕಗಳ ವೇಷಭೂಷಣಗಳು, ಆಯುಧಗಳನ್ನು ಕೇಳುವವರು ಕಡಿಮೆಯಾಗಿರುವರೆಂದು, ನೊಂದು ನುಡಿಯುವರು.

ಶ್ರೀ ಲಿಂಗಪ್ಪಾ ಶಿವಲಿಂಗಪ್ಪಾ ಹುಡುಗಿ ಇವರ ಸೋಮೇಶ್ವರ ನಾಟ್ಯ ಭಂಡಾರ ಈರೊಳ್ಳಿ- ಗ್ರಾಮೀಣ ಪ್ರದೇಶದಲ್ಲಿ ನಾಟಕ ಸೀನರಿ, ಉಡುಪು, ವೇಷಭೂಷಣ ಒದಗಿಸುವ ಸಂಸ್ಥೆಯಾಗಿದ್ದು, ಕರ್ನಾಟಕ ನಾಟಕ ಅಕಾಡೆಮಿಯಿಂದ ಧನಸಹಾಯ ಪಡೆದಿರುವರು.

## ಬೀದರ ಜಿಲ್ಲೆಯ ರಂಗ ಮಂದಿರಗಳು, ಒಂದು ನೋಟ:

೧. ಬೀದರ ನಗರದ ಹಳೆಯ ಚಿತ್ರ ಮಂದಿರಗಳಾದ ಗುಲ್ಝಾರ ಚಿತ್ರ ಮಂದಿರ, ಚಿತ್ರಲೇಖಾ ಚಿತ್ರಮಂದಿರ,ಸಂಗಮ ಚಿತ್ರ ಮಂದಿರ, ದೀಪಕ ಚಿತ್ರ ಮಂದಿರ ಗಳು ೫೦- ೬೦ರ ದಶಕದಲ್ಲಿ ನಾಟಕ ಮಾಡುವ ಆಸಕ್ತರಿಗೆ, ಸಂಗೀತ ಕಾರ್ಯಕ್ರಮ ಆಯೋಜಿಸುವವರಿಗೆ ಸುಸಜ್ಜಿತ ರಂಗ ಸಜ್ಜಿಕೆಗಳಾಗಿದ್ದವು. ಹಲವಾರು ನಾಟಕಗಳನ್ನು ಅಲ್ಲಿ ಮಾಡಿಸುತ್ತಿದ್ದರು.

೨. ಬೀದರ ಡಿ.ಸಿ.ಸಿ. ಬ್ಯಾಂಕ್‌ನ ಸಭಾಂಗಣ: ೭೦ರ ದಶಕದಲ್ಲಿ ಈ ಸಭಾಂಗಣವನ್ನು ರಂಗ ಮಂದಿರವಾಗಿ ಉಪಯೋಗಿಸಿ ಹಲವಾರು ಪ್ರಸಿದ್ಧ ನಾಟಕಗಳನ್ನು ಪ್ರದರ್ಶಿಸಲಾಗಿದೆ.

೩. ಹಳೆಯ ಪಾಲಿಟೆಕ್ನಿಕ್ ಕಾಲೇಜಿನ ಬಯಲು ರಂಗಮಂದಿರ: ಇಲ್ಲಿ ಹಲವಾರು ನಾಟಕಗಳನ್ನು ನಾಟಕೋತ್ಸವಗಳನ್ನು ಮಾಡಲಾಗಿದೆ.

೪. ಅಂಬೇಡಕರ ಸರ್ಕಲ್‌ನಲ್ಲಿರುವ ಹಳೆಯ ನಗರ ಸಭೆಯ ಸಭಾಂಗಣ; ಮತ್ತು ಎದುರಿನ ಬಯಲು. ಇಲ್ಲಿಯೂ ಸಮುದಾಯದ ನಾಟಕಗಳನ್ನು ಮಾಡಲಾಗಿದೆ.

೫. ಕರ್ನಾಟಕ ಕಾಲೇಜಿನ ಸುಸಜ್ಜಿತ ರಂಗಮಂದಿರ. ಇಲ್ಲಿಯೂ ಸಮುದಾಯದ ನಾಟಕಗಳನ್ನು ಮಾಡಲಾಗಿದೆ.

೬ ಬಿ.ವ್ಹಿ. ಭೂಮರೆಡ್ಡಿ ಕಾಲೇಜಿನ ಬಯಲು ರಂಗ ಮಂದಿರ. ಇಲ್ಲಿಯೂ ಸಮುದಾಯದ ನಾಟಕಗಳನ್ನು ಮಾಡಲಾಗಿದೆ.

೭ ಸರಕಾರಿ ಪದವಿ ಕಾಲೇಜು ಬಯಲು ರಂಗ ಮಂದಿರ ನೌಬಾದ, ಬೀದರ. ಇಲ್ಲಿಯೂ ಸಮುದಾಯದ ನಾಟಕಗಳನ್ನು ಮಾಡಲಾಗಿದೆ.

೮. ಸರಸ್ವತಿ ಶಾಲೆಯ ಬಯಲು ರಂಗ ಮಂದಿರ: ಬೀದರ. ಅಭಿನಯ ಗಂಗೋತ್ರಿ ತಂಡದಿಂದ ನಾಟಕ ಮಾಡಲಾಗಿದೆ.

೯. ಸಂಗೀತ ಕಲಾ ಮಂಡಳ ಬೀದರ. ಇಲ್ಲಿ ಆಲದ ಮರ ನಾಟಕ ಮಾಡಲಾಗಿದೆ.

೧೦. ನೆಹರೂ ಕ್ರೀಡಾಂಗಣದ ಬಯಲು ರಂಗ ಮಂದಿರ: ಕರ್ನಾಟಕ ಸರಕಾರದ ವಾರ್ತಾ ಇಲಾಖೆಯ ಧ್ವನಿ ಬೆಳಕು ಕಾರ್ಯಕ್ರಮ 'ಕರ್ನಾಟಕ ವೈಭವ' ತಥಾಗತ ಬುದ್ಧ, ಮುಂತಾದವು ಪ್ರದರ್ಶಿಸಲ್ಪಟ್ಟಿವೆ.

೧೧. ಗಣೇಶ ಮೈದಾನದ ಬಯಲು ಇಲ್ಲಿ ಹಲವಾರು ನಾಟಕ ಹಾಗೂ ಕರ್ನಾಟಕ ಸರಕಾರದಿಂದ ಆಯೋಜಿತ ಧ್ವನಿ, ಬೆಳಕು ನಾಟಕ 'ಮನುಷ್ಯ ಜಾತಿ ತಾನೊಂದೇ ವಲಂ' ಪ್ರದರ್ಶಿಸಿರುವರು.

೧೨. ಜಿಲ್ಲಾ ರಂಗ ಮಂದಿರ (ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಜಿಲ್ಲಾಧಿಕಾರಿಗಳು ಬೀದರ ಆಡಳಿತದಲ್ಲಿದೆ) ಸುಸಜ್ಜಿತವಾದ ಜಿಲ್ಲಾ ರಂಗ ಮಂದಿರ ನಗರದ ಮಧ್ಯ ಭಾಗದಲ್ಲಿದ್ದು, ಆಧುನಿಕ ಧ್ವನಿ, ಬೆಳಕು ಸೌಲಭ್ಯ ಹೊಂದಿದೆ. ದೊಡ್ಡದಾದ ವೇದಿಕೆ. ೮೦೦ ಆಸನಗಳ ವ್ಯವಸ್ಥೆಯಿದೆ. ಇಲ್ಲಿ ನಾಟಕ, ಸಾಹಿತ್ಯ, ಸಂಗೀತ, ಚಿತ್ರಕಲೆ ಎಲ್ಲ ಪ್ರಕಾರದ ಲಲಿತ ಕಲೆಗಳ ಪ್ರರ್ದಶನಕ್ಕೆ ಅನುಕೂಲಕರವಾಗಿದೆ. ಹೀಗಾಗಿ ಸಾಂಸ್ಕೃತಿಕ ಕಾರ್ಯಕ್ರಮಗಳು ಅವ್ಯಾಹತವಾಗಿ ನಡೆಯುತ್ತಿರುವವು.

೧೩. ಹಳ್ಳಿಖೇಡ (ಬಿ) ಸಕ್ಕರೆ ಕಾರಖಾನೆಯಲ್ಲೂ ಸುಸಜ್ಜಿತ ಬಯಲು ರಂಗ ಮಂದಿರವಿದೆ.

ಈ ಮೇಲಿನ ಎಲ್ಲಾ ರಂಗ ಮಂದಿರಗಳಲ್ಲಿ ನಾಟಕಗಳನ್ನು ಮಾಡಲು ಅನುವು ಮಾಡಿಕೊಟ್ಟ ಎಲ್ಲಾ ಅಧಿಕಾರಿ ವರ್ಗಕ್ಕೆ ರಂಗಾಸಕ್ತರಿಗೆ ಕಲಾವಿದರು ಚಿರಋಣಿ ಯಾಗಿರುವರು.

## ವಿವಿಧ ನಾಟಕ ಶಾಲೆಗಳ ಪದವಿ ಪಡೆದವರು:

ರಾಷ್ಟ್ರೀಯ ನಾಟಕ ಶಾಲೆಯ ದೆಹಲಿಯ ಸ್ನಾತಕೋತ್ತರ ಪದವಿ ಪಡೆದವರು.

೧. ಶ್ರೀ ಮಹೇಶ ವಿಶ್ವನಾಥ ಪಾಟೀಲ ಬೀದರ. ನಟ, ನಿರ್ದೇಶಕ,

ನೀ ನಾ ಸಂ ಹೆಗ್ಗೋಡು ನಿಂದ ಡಿಪ್ಲೋಮಾ ಪದವಿ ಪಡೆದವರು.

೧. ಶ್ರೀ ಮಹೇಶ ವಿಶ್ವನಾಥ ಪಾಟೀಲ ಬೀದರ. ನಟ, ನಿರ್ದೇಶಕ,

೨. ದಿ. ಶ್ರೀ ಬಸವರಾಜ ಕೊಡಗೆ– ನಟನೆ, ನಿರ್ದೇಶನದಲ್ಲಿ ಪದವಿ. ಮತ್ತು ನಾಟಕ ಕರ್ನಾಟಕ ರಂಗಾಯಣ ಮೈಸೂರನಲ್ಲಿ ಸೇವೆ ಸಲ್ಲಿಸಿದವರು.

೩. ಶ್ರೀ ಯಶವಂತ ಕುಚಬಾಳ– ನಟನೆ, ನಿರ್ದೇಶನದಲ್ಲಿ ಪದವಿ.–ಚಲನಚಿತ್ರ ನಟ.

೪. ಕುಮಾರಿ ಗ್ರಾಹಿಕಾ ಸೋನಾರೆ– ನಟನೆಯಲ್ಲಿ ಪದವಿ, ಸದ್ಯ ಕಲಬುರ್ಗಿ ರಂಗಾಯಣದಲ್ಲಿ ಸೇವೆ ಸಲ್ಲಿಸುತ್ತಿರುವರು.

ಆದರ್ಶ ಫಿಲ್ಮ್ ಇನಸ್ಟಿಟ್ಯೂಟ್ ಬೆಂಗಳೂರನಿಂದ ಡಿಪ್ಲೋಮಾ ಪದವಿ ಪಡೆದವರು.

೧. ಶ್ರೀ ಶಂಭುಲಿಂಗ ವಾಲ್ದೊಡ್ಡಿ–ಗಾಯನದಲ್ಲಿ ಡಿಪ್ಲೋಮಾ ಪದವಿ.

೨. ಶ್ರೀ ರಾಜಶೇಖರ ಮೂರ್ತಿ–ನಟನೆಯಲ್ಲಿ ಡಿಪ್ಲೋಮಾ ಪದವಿ.

೩. ಶ್ರೀ ಚಂದ್ರಕಾಂತ ಹಾಲಹಿಪ್ಪರಗಾ–ನಟನೆಯಲ್ಲಿ ಡಿಪ್ಲೋಮಾ ಪದವಿ.

## ಚಲನಚಿತ್ರಗಳಲ್ಲಿ ನಟಿಸಿದ ಕಲಾವಿದರು:

ಬೀದರಿನ ಹಿರಿಯ ಕಲಾವಿದರಾದ ಶ್ರೀ ಬಿ.ಜಿ. ಕುಂಬಾರ ಅವರು ನಾಟಕದಿಂದ ಚಲನಚಿತ್ರ ರಂಗಕ್ಕೂ ದಾಪುಗಾಲಿಟ್ಟವರು. ಎಂ.ಎಸ್. ಸತ್ಯು ಅವರ ಬರ ಚಿತ್ರ, ಆಲೆಮನೆ, ಕಾಡಿನ ಬೆಂಕಿ ಮುಂತಾದವುಗಳಲ್ಲಿ ನಟಿಸಿರುವರು. ಭಾಲ್ಕಿ ತಾ. ತೇಗಂಪೂರದ ವೈಜಿನಾಥ ಬಿರಾದಾರ ಅವರು ಕಲ್ಚರ್ ಕಮೇಡಿಯನ್ ಆಗಿ ಚಲನಚಿತ್ರಗಳಲ್ಲಿ ಅಭಿನಯಿಸುತ್ತಿರುವರು.

ಬೀದರಿನ ಶ್ರೀಕಿಶೋರ ಕುಮಾರ ಅವರು ನಾಯಕ ನಟರಾಗಿ ಹಲವಾರು ಚಿತ್ರಗಳಲ್ಲಿ ನಟಿಸಿರುವರು. ಸೀಳು ನಕ್ಷತ್ರ ಚಿತ್ರ ಪ್ರಮುಖವಾಗಿದೆ. ದೂರದರ್ಶನದ ಸಬೀನಾ ಧಾರಾವಾಹಿಯಲ್ಲಿ ನಟಿಸಿ ಜನಪ್ರಿಯರಾದವರು. ಭಾಲ್ಕಿ ತಾಲೂಕಿನ ಹಾಲಹಿಪ್ಪರಗಾದ ಶ್ರೀ ಚಂದ್ರಕಾಂತ ಇವರು ಚಲನಚಿತ್ರ ರಂಗದಲ್ಲಿ ಕೆಲಸ ಮಾಡುತ್ತಲಿರುವರು. ಔರಾದ ತಾಲೂಕಿನ ರಾಜಶೇಖರ ಮೂರ್ತಿ ಹಲವಾರು ಚಲನಚಿತ್ರಗಳಲ್ಲಿ ನಟಿಸಿರುವರು. ಬೀದರಿನ ಸಹಜಾನಂದ ಕಂದಗೂಳ ಇವರೂ ಹಲವಾರು ಚಲನಚಿತ್ರಗಳಲ್ಲಿ ನಟಿಸಿರುವರು.

ಬಸವಕಲ್ಯಾಣದಲ್ಲಿ ನಿರ್ಮಾಣಗೊಂಡ ಅಕ್ಕ ಚಲನಚಿತ್ರದಲ್ಲಿ, ದೇವೇಂದ್ರ ಗಾಯಕವಾಡ, ಚಂದ್ರಗುಪ್ತ ಚಾಂದಕವಠೆ, ಶ್ರಿಮತಿ ಪಾರ್ವತಿ ಸೋನಾರೆ ಮುಂತಾದ ಬೀದರ, ಬಸವಕಲ್ಯಾಣದ ಕಲಾವಿದರು ನಟಿಸಿರುವರು.

ಇತ್ತೀಚೆಗೆ ಬೀದರಿನಲ್ಲೂ ಚಲನಚಿತ್ರಗಳ ನಿರ್ಮಾಣ ಮಾಡುತ್ತಿರುವರು. ಪ್ರಮುಖವಾಗಿ ಭಾಲ್ಕಿಯ ಚಲನಚಿತ್ರ ಕಲಾವಿದ, ಚಿತ್ರ ನಿರ್ದೇಶಕ, ನಟ ಶ್ರೀ ವಿಷ್ಣುಕಾಂತ ಬಿ.ಜೆ. ಅವರ ನಿರ್ಮಾಣ ನಿರ್ದೇಶನದ ಡಾ. ಬಿ.ಆರ್. ಅಂಬೇಡ್ಕರ, ಚಿತ್ರದಲ್ಲಿ ಎಮ್.ಎಸ್. ಮನೋಹರ, ಸುನೀಲಕಡ್ಡೆ, ದೇವದಾಸ ಚಿಮಕೋಡೆ ಮುಂತಾದ ಬೀದರ ಸಮುದಾಯದ ಕಲಾವಿದರು ನಟಿಸಿರುವರು.

ಬೀದರಿನ ಡಾ. ಶೈಲೇಂದ್ರ ಬೆಲ್ದಾಳೆ ನಿರ್ಮಾಣದ ಪೋರ ಚಲನಚಿತ್ರ, ಬೀದರಿನ ಡಾ. ಅಶೋಕ ನಾಗೂರೆ ಅವರ ಹದಿಮೂರು ದಿವಸ ಚಲನಚಿತ್ರಗಳನ್ನು ಬೀದರಿನಲ್ಲಿ ಚಿತ್ರೀಕರಣ ಮಾಡಿರುವದರಿಂದ, ಬೀದರಿನ ಹಲವಾರು ಕಲಾವಿದರು ಭಾಗಿಯಾಗಿರುವರು. ಯುವ ಕಲಾವಿದ ಯಶವಂತ ಕುಚಬಾಳ ಪ್ರೀತಿ ಕಿತಾಬು ಚಲನಚಿತ್ರದಲ್ಲಿ ನಟಿಸಿರುವರು.

## ಬೀದರ ಜಿಲ್ಲೆಯ ಕಲಾವಿದರು –
## ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತರು

೧. ೧೯೯೫– ಅಕಾಡೆಮಿ ಪ್ರಶಸ್ತಿ ಪುರಸ್ಕೃತರು –ಶ್ರೀ ಏಕನಾಥ ಬಹುರೂಪಿ ನಿರ್ಣಾ ತಾ.ಹುಮನಾಬಾದ – ಬಹುರೂಪಿ ವೇಷಗಾರರು, ವೃತ್ತಿ ರಂಗಭೂಮಿ ಕಲಾವಿದರು.

೨. ೧೯೯೭–– ಅಕಾಡೆಮಿ ಪ್ರಶಸ್ತಿ ಪುರಸ್ಕೃತರು–ಚಿಕ್ಕಮಗಳೂರಿನಲ್ಲಿ– ಶ್ರೀ ಚಂದ್ರಗುಪ್ತ ಶಿವಪ್ಪಾ ಚಾಂದಕವಠೆ, ಬೀದರ – ಹವ್ಯಾಸಿ ನಾಟಕ ಕಲಾವಿದರು, ನಾಟಕ ನಿರ್ದೇಶಕರು, ರಂಗ ವಿಮರ್ಶಕರು, ಸಾಹಿತಿಗಳು.

೩. ೧೯೯೯– ಅಕಾಡೆಮಿ ಪ್ರಶಸ್ತಿ ಪುರಸ್ಕೃತರು ––ಶ್ರೀ ಶಂಭುಲಿಂಗ ವಾಲ್ದೊಡ್ಡಿ ಬೀದರ – ಹವ್ಯಾಸಿ ಕಲಾವಿದರು, ಗಾಯಕರು, ರಂಗ ಸಂಘಟಕರು.

೪. ೨೦೦೦– ಪದ್ದಣ ಶ್ರಮ ಪ್ರಶಸ್ತಿ– ಪುರಸ್ಕೃತರು – ಶ್ರೀ ಚಂದ್ರಶೇಖರ ಚಕ್ಕಿ, ಬೀದರ – ಹವ್ಯಾಸಿ ಕಲಾವಿದರು.

೫. ೨೦೦೬ – ಸುವರ್ಣ ಕರ್ನಾಟಕ ಗೌರವ ಪುರಸ್ಕಾರ– ಅ) ಶ್ರೀ ಶಾಂತಪ್ಪಾ ದೇವರಾಯ (ದೇಶಾಂಶ ಹುಡುಗಿ) ಬೀದರ ಹಿರಿಯ ಕಲಾವಿದರು ಮತ್ತು ಬ) ಶ್ರೀ ವೈಜಿನಾಥ ಬಿರಾದಾರ – ಕಲಾವಿದರು, ಚಲನಚಿತ್ರ ಕಲಾವಿದರು.

೬. ೨೦೦೯ – ಕೆ. ಹಿರಣ್ಣಯ್ಯಾ ಪುರಸ್ಕಾರ – ಪುರಸ್ಕೃತರು – ಶ್ರೀ ಲಕ್ಷ್ಮಣರಾವ ಮುತ್ತಂಗಿ ತಾ.ಹುಮನಾಬಾದ – ವೃತ್ತಿರಂಗಭೂಮಿ ಕಲಾವಿದರು, ಮಾಲೀಕರು ಶ್ರೀ ಗುರುಪಾದಲಿಂಗೇಶ್ವರ ನಾಟ್ಯ ಸಂಘ ಮುತ್ತಂಗಿ.

೭ ೨೦೧೧– ಸುವರ್ಣ ಸಂಭ್ರಮ ರಂಗ ಪ್ರಶಸ್ತಿ – ಪುರಸ್ಕೃತರು – ಪ್ರೊ. ಸಂಗ್ರಾಮ ಎಂಗಲೇ ಬೀದರ, ಹವ್ಯಾಸಿ ಕಲಾವಿದರು, ರಂಗ ಸಂಘಟಕರು.

೮. ೨೦೧೨ – ಕಲ್ಚರಲ್ ಕಮೇಡಿಯನ್ ಕೆ. ಹಿರಣ್ಣಯ್ಯಾ ದತ್ತಿ ಪ್ರಶಸ್ತಿ– ಪುರಸ್ಕೃತರು– ಶ್ರೀ ವೈಜಿನಾಥ ಬಿರಾದಾರ ಅಂತರ್‌ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತ ಕಲಾವಿದರು, ಬೀದರ ಜಿಲ್ಲೆ.

೯. ೨೦೧೨–೧೩ ಶ್ರೀ ಬಸವರಾಜ ಕಟ್ಟೀಮನಿ – ಕಲಾವಿದರು ಬೀದರ ಜಿಲ್ಲೆ.

## ಸಮಾರೋಪ:

ರಂಗಭೂಮಿಗೆ ಜೀವಂತಿಕೆ ಇದೆ. ಇಲ್ಲಿ ನಟರು ಹಾಗೂ ಪ್ರೇಕ್ಷಕರ ನಡುವೆ ಅವಿನಾಭಾವ ಸಂಬಂಧವಿದೆ. ಮನುಷ್ಯ ಸ್ವಭಾವದ ಪರಿಚಯ ಮಾಡಿಕೊಡುವ ನಾಟಕಗಳ ಸಾಹಿತ್ಯದಿಂದ ಭಾಷೆಯ ಮೇಲೆ ಹಿಡಿತ ಸಿಗುತ್ತದೆ. ವೇದಿಕೆಯ ಭಯ ಮಾಯವಾಗುತ್ತದೆ. ರಂಗ ಸಜ್ಜಿಕೆ, ಪ್ರಸಾಧನ, ವೇಷಭೂಷಣ, ಸಂಗೀತ ನೃತ್ಯ ಮುಂತಾದವುಗಳಿಂದ ವ್ಯಕ್ತಿತ್ವದ ವಿಕಸನವಾಗುತ್ತದೆ.

ಬೀದರ ಜಿಲ್ಲೆಯ ಪ್ರತಿ ಹಳ್ಳಿಯಲ್ಲಿ, ಇಂದಿಗೂ ವರ್ಷಕ್ಕೊಮ್ಮೆ ಜಾತ್ರೆಗಳಲ್ಲಿ ನಾಟಕಗಳನ್ನು ಆಡುತ್ತಿರುವರು. ಮೊದಲಿನಂತೆ ಪೌರಾಣಿಕ, ಐತಿಹಾಸಿಕ ನಾಟಕಗಳು ಕಡಿಮೆಯಾಗಿವೆ. ಈಗ ಏನಿದ್ದರೂ ಸಾಮಾಜಿಕ ನಾಟಕಗಳು ಅದ್ದೂರಿಯಾಗಿ ಮೂಡಿ ಬರುತ್ತಲಿವೆ. ವೃತ್ತಿ ರಂಗಭೂಮಿ ಬೆಳೆಯದಿದ್ದರೂ, ಅರೆ ವೃತ್ತಿ ರಂಗಭೂಮಿಯ ಹವ್ಯಾಸಿ ಕಲಾವಿದರು ತಮ್ಮ ಇತಿ ಮಿತಿಯಲ್ಲಿ ರಂಗ ಪ್ರಯೋಗ ಮಾಡಿಸುತ್ತಲಿರುವರು.

ಬೇಸಿಗೆಯಲ್ಲಿ ತಿಂಗಳು ಪೂರ್ತಿ ತಾಲೀಮು (ಹಾಡಕ್ಕಿ) ಮಾಡಿ ನಾಟಕ ಆಡುವರು. ಹೆಣ್ಣಿನ ಪಾತ್ರ ಮಾಡುವ ಗಂಡಸರು ವಿಶೇಷವಾದ ಒನಪು ವಯ್ಯಾರಗಳಿಂದ ತಾವೇನೂ ಕಡಿಮೆ ಇಲ್ಲ ಎನ್ನುವಂತೆ ನಟಿಸುತ್ತಿದ್ದರು. ಇತ್ತೀಚೆಗೆ ಹೆಣ್ಣಿನ ಪಾತ್ರವನ್ನು ಗಂಡಸರು ಮಾಡುವದು ಕಡಿಮೆಯಾಗಿದೆ. ಮತ್ತು ಕಂಪನಿ ನಾಟಕಗಳಲ್ಲಿ ನಟಿಸುವ ಕಲಾವಿದೆಯರನ್ನು ಕರೆಸಿ, ನಾಟಕ ಆಡುವರು. ಅವರಿಗೆ ಸಂಭಾವನೆಯೊಂದಿಗೆ ಗೌರವಿಸಿ, ಸನ್ಮಾನಿಸಿ ಕಳಿಸುವರು.

ಹವ್ಯಾಸಿ ರಂಗಭೂಮಿ ಇಂದು ಕ್ಲಿಷ್ಟಕರವಾಗತೊಡಗಿದೆ. ನಾಟಕಗಳಲ್ಲಿ ಅಭಿನಯಿಸುವ ಕಲಾವಿದ, ಕಲಾವಿದೆಯರ ಕೊರತೆ, ಸಮರ್ಥ ನಿರ್ದೇಶಕರ ಕೊರತೆ, ಹೊಸ ನಾಟಕಗಳ ಕೊರತೆ, ನಿರ್ಮಾಪಕರ ಕೊರತೆ, ರಿಹರ್ಸಲ್ ಗೆ ಜಾಗದ ಕೊರತೆ, ಈ ಎಲ್ಲಾ ಕೊರತೆಗಳ ನಡುವೆ ವರ್ಷಕ್ಕೊಂದು ನಾಟಕ ಮಾಡಿ ರಂಗಭೂಮಿಯನ್ನು ಜೀವಂತವಾಗಿ ಇಟ್ಟಿರುವರು.

ಸಂವಹನದ ಮಾಧ್ಯಮವಾಗಿ ಜನಪದ ಹಾಡು, ಸಂಗೀತ, ಬೀದಿ ನಾಟಕಗಳನ್ನು ಉಪಯೋಗಿಸಿಕೊಂಡು, ಸರ್ಕಾರಿ ಯೋಜನೆಗಳನ್ನು ಯಶಸ್ವಿಯಾಗಿ ಜನರಿಗೆ ತಲುಪಿಸುವಲ್ಲಿ ಹವ್ಯಾಸಿ ತಂಡಗಳನ್ನು ಬಳಸಿಕೊಳ್ಳುವ ಪ್ರಯತ್ನ ಸ್ತುತ್ಯಾರ್ಹವಾಗಿದೆ.

ಬೀದರ ಜಿಲ್ಲೆಯಲ್ಲಿ ಹವ್ಯಾಸಿ ರಂಗ ಚಟುವಟಿಕೆಗಳಿಗೆ ಪ್ರೋತ್ಸಾಹಕರಾಗಿ, ರಂಗಭೂಮಿ ಬೆಳೆಸುವಲ್ಲಿ, ನೀರೆರೆದು ಪೋಷಿಸಿದ, ಮಾನ್ಯ ಜಿಲ್ಲಾಧಿಕಾರಿಗಳು ಬೀದರ, ಕರ್ನಾಟಕ ನಾಟಕ ಅಕಾಡೆಮಿ ಬೆಂಗಳೂರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೀದರ, ಜಿಲ್ಲಾ ಪಂಚಾಯತ್, ನೆಹರು ಯುವ ಕೇಂದ್ರ, ವಾರ್ತಾ ಮತ್ತು ಪ್ರಚಾರ

ಇಲಾಖೆ, ಯುವ ಜನ ಕೀಡಾ ಇಲಾಖೆ, ಆರೋಗ್ಯ ಇಲಾಖೆ, ಅರೆ ಸರ್ಕಾರಿ, ಸಂಘ ಸಂಸ್ಥೆಗಳು ಅಭಿನಂದನಾರ್ಹರಾಗಿರುವರು. ಇವರು ಆಯೋಜಿಸುವ ನಾಟಕೋತ್ಸವ, ಯುವಜನೋತ್ಸವ, ನಾಟಕಗಳಿಗೆ ಸೃಜನಶೀಲ ಯುವಕ ಯುವತಿಯರು ರಂಗಭೂಮಿಗೆ ಆಕರ್ಷಿತರಾಗುವಲ್ಲಿ ಸಹಕಾರಿಯಾಗಿವೆ. ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಏಕ ಪಾತ್ರಾಭಿನಯ, ಮಿಮಿಕ್ರಿ, ಮೂಕಾಭಿನಯ, ಏಕಾಂಕ ನಾಟಕಗಳ ಸ್ಪರ್ಧೆ ಇರುವದರಿಂದ ತಮ್ಮ ಕಾಲೇಜುಗಳಿಗೆ ಬಹುಮಾನ ತರಲು ಅಧ್ಯಾಪಕರು, ರಂಗಾಸಕ್ತರಿಂದ ತರಬೇತಿ ಪಡೆದು ತಮ್ಮ ಪ್ರತಿಭೆ ಹೊರ ಹಾಕುವರು. ಇದರಿಂದ ಹವ್ಯಾಸಿ ರಂಗಭೂಮಿಗೆ ಹೊಸ ನೀರು ಹರಿದು ಬರುತ್ತಿರುವದು ಒಳ್ಳೆಯ ಲಕ್ಷಣವಾಗಿದೆ.

ನಿರಂತರವಾಗಿ ರಂಗ ಚಟುವಟಿಕೆಗಳು ನಡೆಯಲು, ರಂಗಾಸಕ್ತರು, ಕಲಾವಿದರು, ಕಲಾವಿದೆಯರು ಭಾಗವಹಿ ಸುವುದರೊಂದಿಗೆ ರಂಗ ಪಯಣ ಮುಂದೆ ಸಾಗಲಿ ಎಂದು ಹಾರೈಸೋಣ.

## ಗ್ರಂಥ ಋಣ:

೧. 'ಬಿದರ ಜಿಲ್ಲೆಯ ರಂಗಭೂಮಿ' ಲೇಖಕರು. ಚಂದ್ರಗುಪ್ತ. ಚಾಂದಕವಠೆ. (ಗುಲಬರ್ಗಾ ವಿಶ್ವವಿದ್ಯಾಲಯದ ರಜತ ಮಹೋತ್ಸವದ ಪ್ರಕಟಣೆಯ ಪ್ರಚಾರೋಪನ್ಯಾಸ ಮಾಲೆಯಲ್ಲಿ ಪ್ರಸಾರಾಂಗದಿಂದ ೨೦೦೫ರಲ್ಲಿ ಪ್ರಕಟಿತ).

೨. 'ಬೀದರ ಜಿಲ್ಲಾದರ್ಶನ.' ಸಂಪಾದಕರು. ಡಾ. ಜಗನ್ನಾಥ ಹೆಬ್ಬಾಳೆ ಜಿಲ್ಲಾ ಅಧ್ಯಕ್ಷರು ಅಧ್ಯಕ್ಷರು ಕ. ಸಾ. ಪ. ಬೀದರ.

೩. 'ಬೀದರ ಜಿಲ್ಲೆಯ ಸಾಹಿತಿ–ಕಲಾವಿದರು. ಸಂಪಾದಕರು– ಡಾ. ರಾಜೇಂದ್ರ ಯರನಾಳೆ ಪ್ರಕಟಣೆ, ಪ್ರೊ. ಸಿದ್ರಾಮಪ್ಪಾ ಮಾಸಿಮಾಡೆ ಜಿಲ್ಲಾ ಅಧ್ಯಕ್ಷರು ಕನ್ನಡ ಸಾಹಿತ್ಯ ಪರಿಷತ್ತು, ಬೀದರ. ೨೦೦೪ ಪ್ರಕಟಿತ.

# ಕಲಾವಿದರ ಮತ್ತು ನಾಟಕಗಳ ಚಿತ್ರಗಳು



ಚನ್ನಬಸವೇಶ್ವರ ಕಲಾ ತಂಡ ಭಾಲ್ಕಿ, ನಾಟಕ: ಶಿವಶರಣ ಹರಳಯ್ಯನದಲ್ಲಿ, ಪೂಜ್ಯ ಬಸವಲಿಂಗ ಪಟ್ಟದ್ದೇವರು, ಸಂಗ್ರಾಮ ಎಂಗ್ಲೇ (ಸ್ತ್ರೀ ಪಾತ್ರ).



ಜೈ ಭವಾನಿ ರಂಗಭೂಮಿ ಕಲಾವಿದರ ಸಂಘ ಚಿಟ್ಟಾ, ನಾಟಕ: ರತ್ನ ಮಾಂಗಲ್ಯ ನಿ. ಶೇಷಪ್ಪಾ ಚಿಟ್ಟಾ



ಶಿವಲಿಂಗೇಶ್ವರ ನಾಟ್ಯ ಸಂಘ ಮುಧೋಳ (ಬಿ) ನಾಟಕ: ಶರಣರ ವೈಭವ, ನಿ. ಪ್ರೊ. ಹಾವಗಿರಾವ ವಟಗೆ



ಸಮುದಾಯ ಬೀದರ, ನಾಟಕ ಒಂದು ಲೋಕ ಕಥೆ, ನಿ. ಸಿ ಬಸವಲಿಂಗಯ್ಯಾ.



ಅಲ್ಲಮಪ್ರಭುಲಿಂಗೇಶ್ವರ ನಾಟ್ಯಸಂಘ, ಬೆನಕೆಪಳ್ಳಿ, ನಾಟಕ: 'ಶಿವಶರಣ ಹರಳಯ್ಯಾ'




ನಾಟಕ ಕಲಿಯುಗದ ಕಂತ್ರಾಟಿ, ಎಸ್ ಬಿ ಕುಚಬಾಳ ಚಿಟಗುಪ್ಪಾ



ಸಮುದಾಯ ಬೀದರ, ನಾಟಕ: ನಡು ಬೇಸಿಗೆಯ ಇರುಳು ಸವಿಗನಸು, ನಿ.
ಸಿ ಬಸವಲಿಂಗಯ್ಯಾ.



ಸಮುದಾಯ ಬೀದರ, ನಾಟಕ: ಸಿಂಹಾಸನ ಖಾಲಿ ಇದೆ, ನಿ. ಬಸವರಾಜ ಕೊಡಗೆ.



ಸಮುದಾಯ ಬೀದರ, ನಾಟಕ: ಸಿಂಹಾಸನ ಖಾಲಿ ಇದೆ, ನಿ. ಬಸವರಾಜ ಕೊಡಗೆ.




ಸಮುದಾಯ ಬೀದರ, ನಾಟಕ: ಬರಗೂರರ ಕೋಟೆ, ನಿ. ದೇವ ನಾಗೇಶ.



ಸಮುದಾಯ ಬೀದರ, ನಾಟಕ: ಕಾರ್ನಾಡರ ಅಗ್ನಿ ಮತ್ತು ಮಳೆ, ನಿ. ಬಸವರಾಜ ಕೊಡಗೆ.




ಸಮುದಾಯ ಬೀದರ, ನಾಟಕ: ಕಾರ್ನಾಡರ ಅಗ್ನಿ ಮತ್ತು ಮಳೆ, ನಿ. ಬಸವರಾಜ ಕೊಡಗೆ.



ಸಮುದಾಯ ಬೀದರ, ನಾಟಕ: ಮನಜರವರ ಜಲ ನಿ. ಬಸವರಾಜ ಕೊಡಗೆ.




ಡಿ. ವಾಯ್.ಎಫ್.ವಾಯ್ ತಂಡ ನಾಟಕ: ಉತ್ಪಲದತ್ತರ ಸೂರ್ಯ ಶಿಕಾರಿ, ನಿ. ಡಾ. ಅನೀಲಕುಮಾರ ಮುಗಳಿ.



ಸಮುದಾಯ ಬೀದರ, ನಾಟಕ ಶಿವರಾಜ ಕುಲಕರ್ಣಿಯವರ ಗುಡಸಲಿನ ಗುಡದಾಳಿ, ನಿ. ಮಾಲತೇಶ ಬಡಿಗೇರ



ಸಮುದಾಯ ಬೀದರ, ನಾಟಕ: ಶಿವರಾಜ ಕುಲಕರ್ಣಿಯವರ ಗುಡಸಲಿನ ಗುಡದಾಳಿ, ನಿ. ಮಾಲತೇಶ ಬಡಿಗೇರ



ಸಮುದಾಯ ಬೀದರ, ಮಕ್ಕಳ ನಾಟಕ: ಬೆಟ್ಟಕ್ಕೆ ಚಳಿಯಾದರೆ, ನಿ.ಉದಯ ಕುಲಕರ್ಣಿ,ಗೀತಾ ಎಮ್ ಎಸ್. ರಂಗಾಯಣ ಮೈಸೂರು.



ಅಭಿನಯ ಗಂಗೋತ್ರಿ ಹವ್ಯಾಸಿ ಕಲಾತಂಡ ಬೀದರ, ನಾಟಕ: ಸಂಗೊಳ್ಳಿ ರಾಯ ಸರದಾರ, ನಿ.ನಾರಾಯಣ ಕುಲಕರ್ಣಿ.



ಅಭಿನಯ ಗಂಗೋತ್ರಿ ಹವ್ಯಾಸಿ ಕಲಾತಂಡ ಬೀದರ, ನಾಟಕ: ಬೇಂದ್ರೆಯವರ ಜಾತ್ರೆ, ನಿ. ಚಂದ್ರಗುಪ್ತ ಚಾಂದಕವಠೆ.



ಅಭಿನಯ ಗಂಗೋತ್ರಿ ಹವ್ಯಾಸಿ ಕಲಾತಂಡ ಬೀದರ, ನಾಟಕ: ಚಂದ್ರಕಾಂತ ಕುಸನೂರರ ರತ್ತೋ ರತ್ತೋ ರಾಯನ ಮಗಳೇ, ನಿ. ಚಂದ್ರಗುಪ್ತ ಚಾಂದಕವಠೆ.




ಬೀದರ ಹವ್ಯಾಸಿ ಕಲಾತಂಡ ಬೀದರ, ನಾಟಕ: ಯಮನ ದರ್ಬಾರು, ನಿ. ಡಾ. ಅನೀಲಕುಮಾರ ಮುಗಳಿ.



ಶರಣಲೋಕ ಕಲಾತಂಡ ಬೀದರ, ನಾಟಕ: ಕಲ್ಯಾಣ ಕ್ರಾಂತಿ, ನಿ. ಪ್ರೊ. ಸಂಗ್ರಾಮ ಎಂಗ್ಲೇ (ಸ್ತ್ರೀಯರೇ ಪಾತ್ರ ವಹಿಸಿದ ನಾಟಕ).



ಸಮುದಾಯ ಬೀದರ, ನಾಟಕ: ಪುಗಸಟ್ಟೆ ಪ್ರಸಂಗ, ನಿ.ವಿಜಯ ಕುಮಾರ ಸೋನಾರೆ.



ಸಮುದಾಯ ಬೀದರ, ನಾಟಕ: ಮಾಟ ಮಂತ್ರ, ನಿ. ಎಮ್ ಎಸ್ ಮನೋಹರ.



ದೇವದಾಸ ಚಿಮಕೋಡ ಅವರ ತಂಡದಿಂದ ಬೀದಿ ನಾಟಕ.




ಕಲಾವಿದ ಶಂಭುಲಿಂಗ ವಾಲ್ದೊಡ್ಡಿ ಅವರಿಗೆ "ಸ್ನೇಹ ಜೀವಿ" ಅಭಿನಂದನಾ ಗ್ರಂಥ ಸಮರ್ಪಣೆ ಸನ್ಮಾನ.



ವೈಜಿನಾಥ ಬಿರಾದಾರ ಮಿತ್ರ ಮಂಡಳಿ ಆಯೋಜಿಸಿದ ನಾಟಕೋತ್ಸವದಲ್ಲಿ, ಹಿರಿಯ ಕಲಾವಿದರಿಂದ ನರ್ತನ.




ವಿಶ್ವ ರಂಗಭೂಮಿ ದಿನದ ಕಾರ್ಯಕ್ರಮದಲ್ಲಿ ಮಹೇಶ ಪಾಟೀಲ ಅವರಿಂದ ಏಕಪಾತ್ರಾಭಿನಯ.



ವೀರಭದ್ರೇಶ್ವರ ನಾಟ್ಯ ಸಂಘ, ಭಾತಂಬ್ರಾ ನಾಟಕ: ತಾಯಿಗೆ ತಕ್ಕ ಮಗ